


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜನವರಿ 7 ಬುಧವಾರ 2026
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
46
ಸಂಪುಟ: 46 | ಸಂಚಿಕೆ: 260 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಆಟೋರಿಕ್ಷಾ ಬಾಡಿಗೆ ದರ ಪರಿಷ್ಕರಣೆ

ಕನಿಷ್ಟ ದರ 36 ರೂ.; ಬಳಿಕ ಪ್ರತಿ ಕಿಮೀಗೆ 18ರೂ. ನಿಗದಿ



ಮೈಸೂರು, ಜ.6– ಆಟೋರಿಕ್ಷಾಗಳ ಬಾಡಿಗೆ ದರವನ್ನು ಮೈಸೂರು ಜಿಲ್ಲಾ ವ್ಯಾಪ್ತಿಗೆ ಅನ್ವಯಿಸುವಂತೆ ಪರಿಷ್ಕರಣೆ ಮಾಡಿದ್ದು, ಇದು ಜ.1 ರಿಂದ ಜಾರಿಗೆ ಬರುವಂತೆ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ನಿರ್ಣಯಿಸಿದೆ.

ಕನಿಷ್ಠ ದರ ಮೊದಲ 2 ಕೀ. ಮೀಗೆ (ಮೂವರು ಪ್ರಯಾಣಿಕರಿಗೆ) ರೂ. 36, ನಂತರ ಪ್ರತಿ ಕಿ. ಮೀ. ದರ ರೂ. 18. ಕಾಯುವಿಕೆ ದರ ಮೊದಲ ಐದು ನಿಮಿಷ ಉಚಿತವಾಗಿದ್ದು, ನಂತರದ ಪ್ರತಿ 15 ನಿಮಿಷ ಅಥವಾ ಅದರ ಭಾಗಕ್ಕೆ ರೂ. 10 ನಿಗದಿಪಡಿಸಿದೆ. ■ 6ನೇ ಪುಟಕ್ಕೆ



ದೀರ್ಘಾವಧಿ ಬಳಿಕ ಪೂರ್ಣಾವಧಿ ಬಯಕೆ!

ಆದರೆ, ಹೈಕಮಾಂಡ್ ಅಂತಿಮ ತೀರ್ಮಾನ; ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ

■ ದೇವರಾಜ ಅರಸು ದಾಖಲೆ ಸರಿಗಟ್ಟಿದ್ದೇನೆ ■ ಹಿಂದಿನ ರಾಜಕಾರಣವೇ ಬೇರೆ; ಇಂದಿನ ರಾಜಕಾರಣವೇ ಬೇರೆ ■ ನಾನು ಸಾಗಿ ಬಂದ ರಾಜಕಾರಣ ತೃಪ್ತಿ ತಂದಿದೆ ■ ಈಗ ನಾಟಿ ಕೋಳಿ ತಿನ್ನುವುದ ಕಡಿಮೆ ಮಾಡಿರುವೆ!

ಮೈಸೂರು, ಜ.6(ಬಿಎಲ್‌ಯು)– ದೀರ್ಘಾವಧಿ ಮುಖ್ಯಮಂತ್ರಿ ದಾಖಲೆ ಬರೆದಿರುವ ಸಿದ್ದರಾಮಯ್ಯ ಅವರು ಈಗ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಮುಂದುವರೆಯುವ ಬಯಕೆ ವ್ಯಕ್ತಪಡಿಸಿದ್ದಾರೆ. ಅದೂ, ಕಾಂಗ್ರೆಸ್ ಹೈಕಮಾಂಡ್‌ನನ್ನ ನಾಯಕತ್ವದ ಮೇಲೆ ಸಂಪೂರ್ಣ ವಿಶ್ವಾಸ ಹೊಂದಿರುವ ಹಿನ್ನೆಲೆಯಲ್ಲಿ ಈ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಮೈಸೂರಿನ ಟಿ.ಕೆ.ಬಡಾವಣೆಯ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಆದರೆ ಈ ವಿಚಾರದಲ್ಲಿ ಹೈಕಮಾಂಡ್ ಅಂತಿಮ ತೀರ್ಮಾನ ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು.

ನನಗೆ ದೇವರಾಜ ಅರಸ್ ಅವರ ದಾಖಲೆ ಬಗ್ಗೆ ಅರಿವು ಇರಲಿಲ್ಲ, ಯಾವ ದಾಖಲೆ ಮುರಿಯಬೇಕು ಎಂಬುದು ನನ್ನ ಗಮನದಲ್ಲಿ ಇರಲಿಲ್ಲ. ಆದರೆ ಜನರ ಆಶೀರ್ವಾದದಿಂದ ದೇವರಾಜ ಅರಸ್ ಅವರ ದಾಖಲೆಯನ್ನು ಸರಿಗಟ್ಟಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಆದರೆ ದೇವರಾಜ ಅರಸ್ ಅವರ ಕಾಲದ ■ 6ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ ಸಂಭ್ರಮದಲ್ಲೇ ಮೈಸೂರಿನ ಟಿ.ಕೆ. ಬಡಾವಣೆಯ ತಮ್ಮ ನಿವಾಸದ ಬಳಿ ಮಂಗಳವಾರ ಜನರಿಂದ ಅಹವಾಲು ಸ್ವೀಕರಿಸಿದರು.

ಮೈಸೂರಿನ ಸಿದ್ದರಾಮಯ್ಯ ಮನೆ ಬಳಿ ಸಂಭ್ರಮವೋ ಸಂಭ್ರಮ

ದೇವರಾಜ ಅರಸ್ ಅವರ ದಾಖಲೆಯನ್ನು ಸರಿಗಟ್ಟಿದ ಹಿನ್ನೆಲೆಯಲ್ಲಿ ಮೈಸೂರಿನ ಟಿ.ಕೆ.ಬಡಾವಣೆಯ ಸಿಎಂ ಸಿದ್ದರಾಮಯ್ಯ ಮನೆ ಬಳಿ ಸಂಭ್ರಮ ಕಳೆಗಟ್ಟಿತ್ತು. ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಲು ಮೈಸೂರು ನಗರ ಹಾಗೂ ಹಳ್ಳಿಗಳಿಂದ ನೂರಾರು ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಸೇರಿದ್ದರು.

ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸಪ್ಪ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಇತರರು ನಾಟಿ ಕೋಳಿ ಪಲಾವ್ ಹಂಚಿದರು.

ಮಾಜಿ ಕಾರ್ಪೊರೇಟರ್ ಜೆ.ಗೋಪಿ ಹಾಗೂ ಇತರರು ಮೈಸೂರು ಪಾಕ್, ಬರ್ಫಿ ವಿತರಿಸಿ ಸಂಭ್ರಮಿಸಿದರು. ಈ ವೇಳೆ ಮನೆಯಿಂದ ■ 6ನೇ ಪುಟಕ್ಕೆ

ಸಿಎಂಗೆ ಶುಭವಾಗಲಿ...

ಬೆಂಗಳೂರು, ಜ.6– ಸಿದ್ದರಾಮಯ್ಯ ಅವರಿಗೆ ಒಳ್ಳೆಯದಾಗಲಿ, ಐ ವಿಶ್ ಹಿಮ್ ಆಲ್ ದ ಬೆಸ್ಟ್, ಗುಡ್ ಲಕ್ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿದರು.



ಬೆಂಗಳೂರಿನಲ್ಲಿ ಮಾತನಾಡಿದ ಅವರು, ಪೂರ್ಣಾವಧಿಗೆ ನಾನೇ ಸಿಎಂ ಆಗಿ ಮುಂದುವರಿಯುವ ವಿಶ್ವಾಸವಿದೆ ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಒಳ್ಳೆಯದು ಆಗಲಿ. ನಾನು ಅವರಿಗೆ ಶುಭ ಹಾರೈಸುತ್ತೇನೆ. ಶುಭವಾಗಲಿ' ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಹೇಳಿಕೆ ಗೊಂದಲಕ್ಕೆ ಕಾರಣವಾಗಬಹುದೇ ಎಂದು ಕೇಳಿದಾಗ, ಶಿವಕುಮಾರ್, 'ನೀವು (ಮಾಧ್ಯಮ) ಗೊಂದಲ ಸೃಷ್ಟಿಸುತ್ತಿದ್ದೀರಿ. ನಮ್ಮಲ್ಲಿ ಯಾವುದೇ ಗೊಂದಲ ವಿಲ್ಲ. ನಿಮಗೆ ಗೊಂದಲವಿದೆ. ನಾನು ಅವರಿಗೆ ಶುಭ ಹಾರೈಸುತ್ತೇನೆ, ಶುಭವಾಗಲಿ' ಎಂದು ಹೇಳಿದರು.

ಸಿದ್ದರಾಮಯ್ಯ ಇಲ್ಲ ಅಂದ್ರೆ ಕಾಂಗ್ರೆಸ್ ಇಲ್ಲ

ಬೆಂಗಳೂರು, ಜ.6– ಕರ್ನಾಟಕದಲ್ಲಿ ಬಿ.ಎಸ್. ಯಡಿಯೂರಪ್ಪ ಇಲ್ಲ ಅಂದರೆ ಬಿಜೆಪಿ ಇಲ್ಲ, ಹೆಚ್.ಡಿ.ದೇವೇಗೌಡರು ಇಲ್ಲ ಅಂದರೆ ಜೆಡಿಎಸ್ ಪಕ್ಷ ಇಲ್ಲ. ಹಾಗೆಯೇ ಸಿದ್ದರಾಮಯ್ಯ ಇಲ್ಲ ಅಂದರೆ ಕಾಂಗ್ರೆಸ್ ಪಕ್ಷ ಇಲ್ಲ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.



ದೀರ್ಘಾವಧಿ ಸಿಎಂ ವಿಚಾರವಾಗಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯಗೆ ಇನ್ನಷ್ಟು ಪುಣ್ಯ, ಶ್ರೇಯಸ್ಸು ಲಭಿಸಲಿ. 2028ರಲ್ಲೂ ಅವರೇ ಮುಖ್ಯಮಂತ್ರಿಯಾಗಲಿ ಎಂದು ಆಶಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

● ನಾನು ಓದಿದ ವಿಶ್ವವಿದ್ಯಾನಿಲಯ ಹೀಗಾಯಿತಲ್ಲ; ಬೇಸರ ● ಪಿಂಚಣಿ ನೀಡಲು ಸಾಧ್ಯವಾಗದ ಪರಿಸ್ಥಿತಿ ಇಲ್ಲಿದೆ ● ಹಿಂದಿನ ಕುಲಪತಿಗಳೇ ಇಷ್ಟಕ್ಕೆಲ್ಲಾ ನೇರ ಕಾರಣ ● ವಿವಿ ಸಮಸ್ಯೆ ಪರಿಹರಿಸಲು ವಿಶೇಷ ಗಮನ ● ಎಂಎಲ್ಸಿ ಡಾ. ಶಿವಕುಮಾರ್‌ಗೆ ಅಭಿನಂದನೆ



ಮೈಸೂರು, ಜ.6 (ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ರೂಪಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಇಂದು ಡಾ.ಕೆ. ಶಿವಕುಮಾರ್ ಅಭಿನಂದನಾ ಸಮಿತಿ ಹಾಗೂ ದಲಿತ ಸಂಘಟನೆಗಳ ಒಕ್ಕೂಟ ಸಂಯುಕ್ತವಾಗಿ ಆಯೋಜಿಸಿದ್ದ ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾ ನಿಲಯದ ಇಂದಿನ ಪರಿಸ್ಥಿತಿಗೆ ಈ ಹಿಂದೆ ಆಡಳಿತ ನಡೆಸಿದ ಕುಲಪತಿಗಳೇ ನೇರ ಹೊಣೆ ಎಂದು ಆಪಾದಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಪಿಂಚಣಿ ಕೊಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಿಚಾರ ತಿಳಿದ ಕೂಡಲೇ ಪಿಂಚಣಿ ಹಣ ಬಿಡುಗಡೆ ಮಾಡಿದೆ ಮತ್ತಷ್ಟು ಹಣ ಕೊಡುತ್ತೇನೆ ಎಂದು ಹೇಳಿದರು. ನಾನು ಕೂಡ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದಿದವನು. ಆದರೆ ವಿಶ್ವವಿದ್ಯಾನಿಲಯಕ್ಕೆ ಈ ಪರಿಸ್ಥಿತಿ ಬಂದಿದೆಯಲ್ಲ ಎಂದು ಬೇಸರವಾಗಿದೆ. ■ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಡಳಿತ ದಾಖಲೆ ಪುಸ್ತಕದಲ್ಲಿರುವುದು ಬರೀ ಅಂಕಿಗಳು; ಸಾಧನೆ ಸಂಖ್ಯೆಗಳಲ್ಲ!

ರಾಜ್ಯ ಬಿಜೆಪಿ ಪ್ರತಿಕ್ರಿಯೆ

ಬೆಂಗಳೂರು, ಜ.6(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ದಾಖಲೆ ಪುಸ್ತಕದಲ್ಲಿ ಬರೆದಿ ರುವುದು ಕೇವಲ ದಿನಗಳ ಸಂಖ್ಯೆಯನ್ನೇ ಹೊರತು, ಸಾಧನೆಯ ಅಕ್ಷರಗಳನ್ನಲ್ಲ. ಅವರ ತುಘಲಕ್ ಆಡಳಿತದ ದುಸ್ಥಿತಿಯ ದಿನಗಳನ್ನು ಕನ್ನಡಿಗರು ಎಂದಿಗೂ ಮರೆಯುವುದಿಲ್ಲ. ಕ್ಷಮಿಸುವುದಿಲ್ಲ ಎಂದು ರಾಜ್ಯ ಬಿಜೆಪಿ ತಿರುಗೇಟು ನೀಡಿದೆ.

ಈ ಸಂಬಂಧ ಪಕ್ಷದ ಸಾಮಾಜಿಕ ಜಾಲತಾಣದಲ್ಲಿ ಟ್ವೀಟ್ ಮಾಡಿದ್ದು, ದಾಖಲೆ ಬರೆದ 'ಅಭಿನವ ಅರಸು'ಗೆ ಅಭಿನಂದನೆಗಳು, ನಿಮ್ಮ ಆಡಳಿತದಲ್ಲಿನ ವೈಫಲ್ಯದ ದಾಖಲೆ ಸಾಧನೆಗಳ ಮೇಲೂ ಒಮ್ಮೆ ಕಣ್ಣಾಡಿಸುವುದು ಉತ್ತಮ ಎಂದಿದೆ.

ಔಟ್ ಗೋಯಿಂಗ್ ಮುಖ್ಯಮಂತ್ರಿ ಸಿದ್ದರಾಮಯ್ಯ ನವರೇ, ಕೊನೆಗೂ ಕುಂಟುತ್ತಾ, ತೆವಳುತ್ತಾ, ರಾಜೀನಾಮೆ ನೀಡುವ ಭಯದಲ್ಲಿಯೇ ಅತೀ ಹೆಚ್ಚು ವರ್ಷಗಳ ಕಾಲ ಮುಖ್ಯಮಂತ್ರಿ ಆದ ದಾಖಲೆಗೆ ಪಾತ್ರರಾಗಿದ್ದೀರಿ. ನಿಮ್ಮ ಮಹಾನ್ ಸಾಧನೆಗಳನ್ನು ಒಮ್ಮೆ ಮೆಲುಕು ಹಾಕೋಣ ಬನ್ನಿ ಎನ್ನುವ ಮೂಲಕ ವೈಫಲ್ಯಗಳ ಪಟ್ಟಿ ಪ್ರಕಟಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ■ 6ನೇ ಪುಟಕ್ಕೆ





ಸುಮಧ್ವ ಸಭಾ ಭವನ ಉದ್ಘಾಟನೆ



ಮೈಸೂರಿನಲ್ಲಿ ನಿರ್ಮಿಸಿರುವ ಸುಮಧ್ವ ಸಭಾ ಭವನವನ್ನು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಉದ್ಘಾಟಿಸಿದರು.

ಮೈಸೂರು,ಜ.6(ಎಸ್‌ಪಿಎನ್)– ಮೈಸೂರಿನ ಮಧ್ವಾಚಾರ್ಯ ರಸ್ತೆಯ ಕೆ.ಆರ್.ವನಂನಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲ ಮೈಸೂರು ಶಾಖೆ ವತಿಯಿಂದ ನಿರ್ಮಿಸಿರುವ 'ಸುಮಧ್ವ ಸಭಾ ಭವನ'ವನ್ನು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಸೋಮವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಶ್ರೀಗಳು, ಮೈಸೂರು ಸಾಂಸ್ಕೃತಿಕ ನಗರಿಯೂ ಹೌದು, ಶೈಕ್ಷಣಿಕ ನಗರಿಯೂ ಹೌದು. ಇಲ್ಲಿಗೆ ಆಗಮಿಸುವ ವಿದ್ಯಾರ್ಥಿಗಳ ಬದುಕಿಗೆ ಆಸರೆಯಾಗಲು ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು, ಮಾಧ್ವ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಮುನ್ನುಡಿ ಹಾಕಿದ್ದ ಪ್ರಸಂಗವನ್ನು ಸ್ಮರಿಸಿದರು.

ಇನ್ನೂ ಐದು ವರ್ಷದಲ್ಲಿ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಜನ್ಮ ಶತಾಬ್ಧಿ ಉತ್ಸವ ಬರಲಿದ್ದು, ಅವರು ಆರಂಭಿಸಿದ ಸಾಮಾಜಿಕ ಕಾರ್ಯಗಳನ್ನು ಸುಸ್ಥಿತಿಯಲ್ಲಿ ನಡೆಸುವುದು ನಾವು ನೀಡಬಹುದಾದ ಅತೀ ದೊಡ್ಡ ಗೌರವ. ಸಹಸ್ರಾರು ವಿದ್ಯಾರ್ಥಿಗಳಿಗೆ ಆಸರೆಯಾದ ವಿದ್ಯಾರ್ಥಿ ನಿಲಯವು ಇಂದು ಶಿಥಿಲವಾಗಿದ್ದು, ಜೀರ್ಣೋದ್ಧಾರಕ್ಕೆ ಎಲ್ಲರೂ ಸಹಕರಿಸಬೇಕು ಎಂದರು.

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಉಪಾಧ್ಯಕ್ಷ ಪಿ.ಜಯರಾಮ್ ಭಟ್ ಮಾತನಾಡಿ, ಸಮುದಾಯದ ಬಡವರಿಗೂ ಕೈಗೆಟುಕುವ ದರದಲ್ಲಿ ಭವನ ಒದಗಿಸುವುದು ನಮ್ಮ ಉದ್ದೇಶವಾಗಿದೆ. ಸುಮಾರು 120 ಜನ ಸಾಮರ್ಥ್ಯದ ಸಭಾಂಗಣ, ಊಟದ ಭವನ, ಅಡುಗೆ ಕೊಠಡಿ ನಿರ್ಮಿಸಲಾಗಿದೆ. ಸಾಧ್ಯವಾದಷ್ಟು ಕಡಿಮೆ ದರದಲ್ಲಿ ಸಭಾಭವನ ಬಾಡಿಗೆ ನೀಡುವ ಕುರಿತು ಚಿಂತನೆ ನಡೆದಿದೆ ಎಂದರು.

ಸದಸ್ಯ ಆರ್.ವಾಸುದೇವಭಟ್ ಮಾತನಾಡಿ, 8 ಕೋಟಿ ವೆಚ್ಚದಲ್ಲಿ ಮಾಧ್ವ ವಿದ್ಯಾರ್ಥಿನಿಲಯವನ್ನು ಪುನರ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಹಳೆ ವಿದ್ಯಾರ್ಥಿಗಳು 2.5 ಕೋಟಿ ರೂ. ಒದಗಿಸುವ ಭರವಸೆ ನೀಡಿದ್ದಾರೆ. ಉಳಿದ ಹಣವನ್ನು ಮೈಸೂರಿನ ತ್ರಿಮತಸ್ಥರು ಉದಾರವಾಗಿ ನೀಡಬೇಕು. ನಿಲಯದಲ್ಲಿ ಎಲ್ಲಾ ಬ್ರಾಹ್ಮಣ ವಿದ್ಯಾರ್ಥಿಗಳಿಗೂ ಪ್ರವೇಶವಿದೆ ಎಂದರು. ಈ ವೇಳೆ ಮಹಾಮಂಡಲ ಅಧ್ಯಕ್ಷ ಪಿ.ಜಿ.ಸತ್ಯ ಪ್ರಕಾಶ್, ಕಾರ್ಯದರ್ಶಿ ಆರ್.ಸುಬ್ರಮಣ್ಯ ತಂತ್ರಿ, ಮಾಜಿ ಅಧ್ಯಕ್ಷ ನಾಗೇಶ್ ಇನ್ನಿತರರು ಉಪಸ್ಥಿತರಿದ್ದರು.

ಸಮಾನತೆ, ಸರಳತೆ, ಗೌರವಿಸುವುದ ಕಲಿತರೆ ಭಿನ್ನಾಭಿಪ್ರಾಯ, ವೈಷಮ್ಯಗಳೇ ಇರುವುದಿಲ್ಲ

ರಾಷ್ಟ್ರೀಯ ಐಕ್ಯತಾ ದಿನಾಚರಣೆಯಲ್ಲಿ ಹಾಸನ ವಿವಿ ಕುಲಪತಿ ಪ್ರೊ.ಟಿ.ಸಿ.ತಾರಾನಾಥ ಸಲಹೆ



ಮೈಸೂರಿನ ಕರ್ನಾಟಕ ಮುಕ್ತ ವಿವಿ ಆವರಣದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಐಕ್ಯತಾ ದಿನಾಚರಣೆಯನ್ನು ಹಾಸನ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಟಿ.ಸಿ. ತಾರಾನಾಥ ಉದ್ಘಾಟಿಸಿದರು.

ಮೈಸೂರು, ಜ.6(ಜಿಎ)–ಸಮಾನತೆ, ಸರಳತೆ ಮತ್ತು ಎಲ್ಲರನ್ನೂ ಗೌರವಿಸುವುದು ನಮ್ಮ ಭಾವನೆಗಳಲ್ಲಿ ಹಾಗೂ ನಡವಳಿಕೆಗಳಲ್ಲಿ ಇದ್ದಾಗ ಯಾವ ಕ್ಲೇಶಗಳಾಗಲಿ, ಭಿನ್ನಾಭಿಪ್ರಾಯಗಳಾಗಲಿ ಹಾಗೂ ವೈಷಮ್ಯಗಳಾಗಲಿ ಬರಲು ಅವಕಾಶ ಇರುವುದಿಲ್ಲ. ಅಂತಹ ವ್ಯಕ್ತಿತ್ವವನ್ನು ನಾವು ಜೀವನದಲ್ಲಿ ದಿನನಿತ್ಯ ಅಳವಡಿಸಿಕೊಳ್ಳಬೇಕು ಎಂದು ಹಾಸನ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಟಿ.ಸಿ.ತಾರಾನಾಥ ತಿಳಿಸಿದರು.

ಮೈಸೂರಿನ ಕರ್ನಾಟಕ ಮುಕ್ತ ವಿವಿ ಆವರಣದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಐಕ್ಯತಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಿಸರ್ಗ ಯಾವ ಜೀವಿಗೂ ಭೇದ ಭಾವ ತೋರದೆ ಪ್ರತಿಯೊಂದು ಜೀವಿಗೂ ಆಶ್ರಯ ನೀಡಿದೆ. ಹಾಗೆಯೇ ಮನುಷ್ಯನೂ ಯಾವ ಬೇದ ಭಾವವಿಲ್ಲದೆ ಜೀವಿಸಬೇಕು ಎಂದರು.

ಬಸವಣ್ಣನವರು ಹೇಳಿರುವ ವಚನಗಳನ್ನೇ ನಾವು ಹಾಗೂ ಮಕ್ಕಳ ಜೀವನದಲ್ಲಿ ಅಳವಡಿಸಿಕೊಂಡು ಜೀವಿಸಿದರೆ ಸಮಾಜದಲ್ಲಿ ಅತ್ಯುತ್ತಮ ಹಾಗೂ ಸರ್ವಶ್ರೇಷ್ಠ ವ್ಯಕ್ತಿಗಳಾಗಬಹುದು. ಕಾಯಕವೇ ಕೆಲಸ ಎಂದು ಬಸವಣ್ಣ ಹೇಳಿದ್ದಾರೆ. ಹೀಗಾಗಿ ಮನುಷ್ಯನಲ್ಲಿ ಕ್ರಿಯೆ ಮತ್ತು ಜ್ಞಾನ ಸಂಯೋಜನೆಗೊಂಡರೆ ಉನ್ನತ ಮಟ್ಟಕ್ಕೆ ಹೋಗಬಹುದು ಎಂದು ತಿಳಿಸಿದರು.

ಭರತಖಂಡ ಭೌಗೋಳಿಕವಾಗಿ ವೈವಿಧ್ಯತೆ ಹೊಂದಿದೆ. ಜಗತ್ತಿನಲ್ಲಿ ಇರುವ ಎಲ್ಲಾ ರೀತಿಯ ಭೂ ಭೌಗೋಳಿಕ ವಾತಾವರಣ ನಮ್ಮ ಭರತ ದೇಶದಲ್ಲಿದೆ. ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರ, ನಮ್ಮ ಸಂಸ್ಕೃತಿ, ಬೇರೆ ಬೇರೆ ಆಹಾರ ಪದ್ಧತಿಗಳು, ಸಂಸ್ಕಾರಗಳಲ್ಲಿ ಭಿನ್ನತೆಯಿದ್ದರೂ ಕೂಡ ಈ ಭರತ ಭೂಮಿ ಏಕತೆಯಿಂದ ಕೂಡಿದೆ ಎಂದರು.

ಕೆಎಸ್‌ಒಯು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಮಾನವನ ಕುಲವೆಲ್ಲ ಒಂದು ದೇಶದ ರಾಜ್ಯಗಳು ಹೇಗೆ ಐಕ್ಯತೆಯಿಂದ ಕೂಡಿದಿಯೋ ಹಾಗೆಯೇ ಮನುಷ್ಯರೆಲ್ಲವೂ ಐಕ್ಯತೆಯಿಂದ ಬಾಳಬೇಕು. ಸರ್ದಾರ್ ವಲ್ಲಭ ಭಾಯಿ ಪಟೇಲರು ದೇಶದ ಸಂಸ್ಥಾನಗಳನ್ನೆಲ್ಲಾ ಒಗ್ಗೂಡಿಸಿ ಭಾರತವೆಂಬ ರಾಷ್ಟ್ರವನ್ನು ಪರಿಪೂರ್ಣವಾಗುವಂತೆ ಮಾಡಿದರು ಎಂದು ಹೇಳಿದರು.

ತಂದೆ ತಾಯಿಗಳಾಗಿ ನಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸಿದರೆ ದೇಶವನ್ನು ಉಳಿಸಬಹುದು. ಮಕ್ಕಳನ್ನು ಕಣ್ಣಲ್ಲಿ ಕಣ್ಣಿಟ್ಟು ಬೆಳೆಸಬೇಕು. ಇದರಿಂದ ದೇಶ ರಾಮರಾಜ್ಯವಾಗಿ ಪರಿವರ್ತನೆಯಾಗುತ್ತದೆ. ರಾಮಾಯಣ ಬರೆದ ವಾಲ್ಮೀಕಿ ಅವರು ಪರಿವರ್ತನೆಯಾದ್ದರಿಂದಲೇ ಅಂತಹ ಶ್ರೇಷ್ಠ ಕಾವ್ಯ ರಚನೆಯಾಯಿತು.

ಹಾಗೆಯೇ ಪ್ರತಿಯೊಬ್ಬರಲ್ಲಿಯೂ ಎರಡೂ ಗುಣ ಇರುತ್ತದೆ. ನಮ್ಮಲ್ಲಿರುವ ಒಳ್ಳೆಯ ಗುಣಗಳನ್ನು ಬೆಳೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕೆಎಸ್‌ಒಯು ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಜೈನಹಳ್ಳಿ ಸತ್ಯನಾರಾಯಣಗೌಡ, ಕಾರ್ಯಕ್ರಮದ ಸಂಯೋಜನಾಧಿಕಾರಿಗಳಾದ ಡಾ.ಎನ್.ಆನಂದಗೌಡ, ಡಾ.ಅವರೆಕಾಡು ವಿಜಯಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು,ಜ.6– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಗ್ರಾಮೀಣ ಪುನರ್ವಸತಿ ಯೋಜನೆಯಡಿ, ನಂಜನಗೂಡು ತಾಲೂಕಿನ ನೇರಳೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಬ್ಬರು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ ರೂ.10000 ಗಳ ಗೌರವಧನದ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಿದೆ

ಅರ್ಹ ಸಮರ್ಥ ವಿಕಲಚೇತನ ವ್ಯಕ್ತಿಗಳು ಅರ್ಜಿ ನಮೂನೆಯನ್ನು ನಂಜನಗೂಡು ತಾಲೂಕು ಪಂಚಾಯಿತಿಯಲ್ಲಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಜನವರಿ 20 ರೊಳಗಾಗಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ರಂಗಸ್ವಾಮಿ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು, ನಂಜನಗೂಡು ತಾಲೂಕು ಮೊ.ಸಂ :8951113120 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು, ಜ. 6– ಡಾ.ಆದಿತ್ಯ ಕುಮಾರಿ ಹೆಚ್. ಅವರ ಮಾರ್ಗದರ್ಶನದಲ್ಲಿ ಎಂ. ಸಂತೋಷ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಷೇರು ಮಾರುಕಟ್ಟೆಯಲ್ಲಿ ಹಣ ದ್ವಿಗುಣ ಆಸೆ ತೋರಿಸಿ 1.77 ಕೋಟಿ ವಂಚನೆ

ಮೈಸೂರು, ಜ.6–ಷೇರು ಮಾರುಕಟ್ಟೆಯಲ್ಲಿ ಹಣ ದುಪ್ಪಟ್ಟಾಗುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಗೆ ಬರೋಬ್ಬರಿ 1.77 ಕೋಟಿ ರೂ. ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜೆ.ಪಿ.ನಗರದ 51 ವರ್ಷದ ವ್ಯಕ್ತಿಗೆ ಕಳೆದ ಡಿಸೆಂಬರ್‌ನಲ್ಲಿ ಬಂದ ವಾಟ್ಸಾಪ್ ಮೆಸೇಜ್‌ನಲ್ಲಿ ಷೇರು ಮಾರುಕಟ್ಟೆ ಮತ್ತು ಟ್ರೇಡಿಂಗ್ ಬಗ್ಗೆ ಮಾಹಿತಿ ನೀಡಲಾಗಿದೆ. ಹೂಡಿಕೆ ಹಣವನ್ನು ದ್ವಿಗುಣ ಮಾಡಿಕೊಳ್ಳಬಹುದು ಎಂದು ಆಸೆ ತುಂಬಲಾಗಿದೆ. ನಂತರ ಪೋಲೆನ್ ಕ್ಯಾಪ್ ಆಪ್‌ನಲ್ಲಿ ಟ್ರೇಡಿಂಗ್‌ಗೆ ರಿಜಿಸ್ಟರ್ ಮಾಡಿಸಲಾಗಿದೆ. ಬಳಿಕ ಈ ವ್ಯಕ್ತಿ, ಹಂತ ಹಂತವಾಗಿ 1.77 ಕೋಟಿ ಹೂಡಿಕೆ ಮಾಡಿದ್ದಾರೆ. ನಂತರ ಆಪ್‌ನಲ್ಲಿ ವಿತ್‌ಡ್ರಾ ಮಾಡಲು ಮುಂದಾದಾಗ ಹಣವನ್ನು ಫ್ರೀಜ್ ಮಾಡಿರುವುದಾಗಿ ಸಂದೇಶ ಬಂದಿದ್ದು, ಪೊಲೀಸರಿಗೆ ದೂರು ನೀಡಿದ್ದಾರೆ.

ಹುಲಿವಾಹನ ಮೆರವಣಿಗೆ...



ಮೈಸೂರಿನಿಂದ ನಾಗಮಲೆಗೆ ಪಾದಯಾತ್ರೆ ಹಮ್ಮಿಕೊಂಡಿರುವ ಬಿ.ಎಂ.ಶ್ರೀ ನಗರದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪಾದಯಾತ್ರಿಗಳಿಂದ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಶ್ರೀ ಮಹದೇಶ್ವರಸ್ವಾಮಿ ಹುಲಿವಾಹನ ಮೆರವಣಿಗೆ ನೆರವೇರಿಸಲಾಯಿತು. ಮಂಗಳವಾರ ಅನ್ನಸಂತರ್ಪಣೆ ನಡೆಯಿತು.

ಎಂ.ಪಿ.ಜೆ.ಎ. 2026ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರು ಫೋಟೊ ಜರ್ನಲಿಸ್ಟ್ ಅಸೋಸಿಯೇಷನ್‌ನ 2026ನೇ ವರ್ಷದ ದಿನದರ್ಶಿಕೆಯನ್ನು ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೈಸೂರು ಕೈಗಾರಿಕಾ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಅಸೋಸಿಯೇಷನ್ ಅಧ್ಯಕ್ಷ ಪ್ರಗತಿಗೋಪಾಲಕೃಷ್ಣ, ಉಪಾಧ್ಯಕ್ಷ ಎಸ್.ಆರ್. ಮಧುಸೂದನ್, ಪ್ರಧಾನ ಕಾರ್ಯದರ್ಶಿ ಎಂ.ಎನ್.ಲಕ್ಷ್ಮಿನಾರಾಯಣ ಯಾದವ್, ಖಜಾಂಚಿ ಎ.ನಂದನ್, ಸಮಿತಿ ಸದಸ್ಯರಾದ ಎಂ.ಎಸ್.ಬಸವಣ್ಣ(ಅನುರಾಗ್ ಬಸವರಾಜು), ಕೆ.ಎಚ್.ಚಂದ್ರು, ನಾಗೇಶ್ ಪಾಣತ್ತಲೆ, ಗವಿಮಠ ರವಿ, ಅನೂಪ್‌ರಾಘ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹವೀಕ ಸಂಘದ ನೂತನ ಪದಾಧಿಕಾರಿಗಳು

ಮೈಸೂರು,ಜ.6–ಮೈಸೂರಿನ ಹವೀಕ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ಮಹಾ ಪ್ರಬಂಧಕ ಡಿ.ಶಂಕರ್ ನಾರಾಯಣ್, ನಿವೃತ್ತ ರಸಾಯನಶಾಸ್ತ್ರ ಪ್ರಾಧ್ಯಾಪಕರಾದ ಶ್ರೀಮತಿ ಟಿ.ಎಸ್.ಯಮುನಾ ಭಾಗವಹಿಸಿದ್ದರು. ಡಿ.ಎನ್. ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ 2 ವರ್ಷದ ಅವಧಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಕೃಷ್ಣ ಹೆಗಡೆ, ಉಪಾಧ್ಯಕ್ಷರಾಗಿ ಶಾಂತಾರಾಮ್ ಭಟ್, ಕಾರ್ಯದರ್ಶಿಯಾಗಿ ಚಂದ್ರಶೇಖರ್ ಜಿ. ಭಟ್, ಸಹ ಕಾರ್ಯದರ್ಶಿಯಾಗಿ ವಿದ್ವಾನ್ ಪ್ರಸನ್ನ ಭಟ್ (ಪಿ.ಜಿ.ಭಟ್), ಖಜಾಂಚಿಯಾಗಿ ಜಿ.ಎನ್. ಅನಂತವರ್ಧನ್.

ಕಾರ್ಯಕಾರಿ ಸಮಿತಿ ಸದಸ್ಯರು : ಲಕ್ಷ್ಮೀಕಾಂತ ಹೆಗಡೆ, ಮಧುಕೇಶ್ವರ ಹೆಗಡೆ, ಶ್ಯಾಮಸುಂದರ ಹೆಗಡೆ, ಕೆ.ಎಂ. ಮಂಜುನಾಥ್, ಸಚ್ಚಿದಾನಂದ ಹೆಗಡೆ, ಮೋಹನ ಪ್ರಶಾಂತ್, ಗೋಪಾಲ ಎನ್. ಗಾಂವ್ಕರ್, ಅನಂತ ಭಟ್, ಸತೀಶ್ ಹೆಗಡೆ, ಶ್ರೀಮತಿ ಸಹನಾ ಎಂ.ಎಸ್., ಶುಭಾ ಶ್ಯಾಮ್ ಹೆಗಡೆ.

ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಕುರಿತು ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮ

ಮೈಸೂರು, ಜ. 6– ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ 'ಶಿಕ್ಷಕರ ಮುಂದಿರುವ ಸವಾಲುಗಳು ಹಾಗೂ ಅದರ ಪರಿಣಾಮಗಳು' ವಿಷಯ ಕುರಿತು ಒಂದು ದಿನದ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮವನ್ನು ನಾಳೆ (ಜ.7) ಬೆಳಿಗ್ಗೆ 10 ಗಂಟೆಯಿಂದ ಸಂಜೆ 4ರವರೆಗೆ ನಗರದ ಬೋಗಾದಿಯ 2ನೇ ಹಂತದಲ್ಲಿರುವ ಅಮೃತ ವಿಶ್ವವಿದ್ಯಾಪೀಠದ ಆವರಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಗ್ಲೋಬಲ್ ಎಫ್‌ಟಿಐ ಸಹಯೋಗದಲ್ಲಿ ವಿಶೇಷವಾಗಿ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಉಪ ಮುಖ್ಯೋಪಾಧ್ಯಾಯರಿಗಾಗಿ ಆಯೋಜಿಸಲಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ, ಅದರ ಪರಿಣಾಮಗಳು ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ಶಿಕ್ಷಕರು ಎದುರಿಸುತ್ತಿರುವ ಹೊಸ ಸವಾಲುಗಳ ಕುರಿತು ಚರ್ಚಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ.

ಮುಖ್ಯ ಅತಿಥಿಯಾಗಿ ಇಂಟರ್ ನ್ಯಾಷನಲ್ ಫೌಂಡೇಶನ್ ಫಾರ್ ಸಸ್ಟೇನೆಬಲ್ ಪೀಸ್ ಅಂಡ್ ಡೆವಲಪ್‌ಮೆಂಟ್ (ಐಎಫ್‌ಎಸ್‌ಪಿಡಿ), ಯುರೋಪ್ ಅಧ್ಯಕ್ಷ ಸಂಗೀತ್ ವರ್ಗೀಸ್ ಭಾಗವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿ ಇಂಟರ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ಟೆಕ್ನಾಲಜಿ ಕೌನ್ಸಿಲ್ (ಐಐಎಂಎಸ್‌ಟಿಸಿ) ಅಧ್ಯಕ್ಷ ಡಾ. ಶ್ರೀಧರ್ ಸರಸ್ವತಿ ಭಾಗವಹಿಸಲಿದ್ದಾರೆ.

ಡಿಡಿ–ಪಿಯು ಶ್ರೀಮತಿ ಎಂ.ಪಿ. ನಾಗಮ್ಮ ಹಾಗೂ ನ್ಯಾಷನಲ್ ಪಬ್ಲಿಕ್ ಸ್ಕೂಲಿನ ಸಂಸ್ಥಾಪಕರು ಹಾಗೂ ಮುಖ್ಯಸ್ಥರಾದ ಡಾ. ಕೆ.ಪಿ.ಗೋಪಾಲ ಕೃಷ್ಣ ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಗ್ಲೋಬಲ್ ಎಫ್‌ಟಿಐನ ಸಂಸ್ಥಾಪಕ ನಾರಾಯಣನ್ ನಂಬಿಯಾರ್, ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ನಿರ್ದೇಶಕರಾದ ಬ್ರಹ್ಮಚಾರಿ ಅನಂತಾನಂದ ಚೈತನ್ಯ; ಸಂಚಾಲಕರಾದ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ; ಅಸೋಸಿಯೇಟ್ ಡೀನ್ ಡಾ.ಶೇಖರ್ ಬಾಬು; ಪ್ರಾಂಶುಪಾಲರಾದ ಡಾ.ಜಿ.ರವೀಂದ್ರನಾಥ್, ಶೈಕ್ಷಣಿಕ ಸಂಯೋಜಕರಾದ ಡಾ.ರೇಖಾ ಭಟ್ ಹಾಗೂ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಪೌರಾಣಿಕ ನಾಟಕಗಳ ಕಲಾವಿದರಿಗೆ ಗೌರವಧನ ಬಿಡುಗಡೆಗೆ ಆಗ್ರಹ



ರಾಮಸ್ವಾಮಿ

ಮೈಸೂರು, ಜ.6–ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆ ಪ್ರಾಯೋಜಿತ ಪೌರಾಣಿಕ ನಾಟಕಗಳ ಕಲಾವಿದರಿಗೆ ಗೌರವ ಧನ ಬಿಡುಗಡೆ ಮಾಡುವಂತೆ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಆಗ್ರಹಿಸಿದ್ದಾರೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ 2023–24ರಿಂದ ಪ್ರಾಯೋಜಿಸಲಾದ ಪೌರಾಣಿಕ ನಾಟಕಗಳ ತಂಡಗಳಿಗೆ ಈವರೆಗೂ ಯಾವುದೇ ಪ್ರಾಯೋಜನೆ(ಗೌರವ ಧನ) ನೀಡಿಲ್ಲ. ಇದರಿಂದ ಮೊದಲೇ ಆರ್ಥಿಕ ಸಂಕಷ್ಟದಲ್ಲಿರುವ ಕಲಾವಿದರಿಗೆ ಮತ್ತಷ್ಟು ಸಮಸ್ಯೆ ಎದುರಾಗಿದೆ. ಕೂಡಲೇ ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತ ಇಲಾಖೆ ಗಮನಹರಿಸಿ, ಸರ್ಕಾರದ ಮೇಲೆ ಒತ್ತಡ ತಂದು ಪ್ರಾಯೋಜನೆ ಮೊತ್ತ ಬಿಡುಗಡೆಗೆ ಕ್ರಮ ವಹಿಸಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

ಮೈಸೂರಿನ ಪುರಭವನ, ಕಲಾಮಂದಿರ, ಜಗನ್ಮೋಹನ ಅರಮನೆ ಸೇರಿದಂತೆ ವಿವಿಧ ಸಭಾಂಗಣ ಹಾಗೂ ಜಾತ್ರೆ–ಉತ್ಸವಗಳಲ್ಲಿ ಕಳೆದ ನಾಲ್ಕು ವರ್ಷಗಳಿಂದ ಪೌರಾಣಿಕ ನಾಟಕಗಳನ್ನು ಆಯೋಜಿಸಿಕೊಂಡು ಬಂದಿದ್ದೇವೆ. ಬಡ್ಡಿಗೆ ಸಾಲ ಪಡೆದು ಮಹಿಳಾ ಕಲಾವಿದರು, ಸೀನರಿ ಮಾಲೀಕರು, ವಾದ್ಯಗೋಷ್ಠಿಯವರಿಗೆ ಸಂಭಾವನೆ ನೀಡುತ್ತಿದ್ದೇವೆ. ಬಹುತೇಕ ಕಲಾವಿದರ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದ್ದರೂ ರಂಗಭೂಮಿ ಕಲೆಯನ್ನು ಉಳಿಸಿ, ಬೆಳೆಸಬೇಕೆಂಬ ಏಕೈಕ ಸಂಕಲ್ಪದೊಂದಿಗೆ ಕಲಾ ಶಾರದೆಯ ಸೇವೆ ಮಾಡುತ್ತಿದ್ದೇವೆ. ಆದರೆ ಬಡ ಕಲಾವಿದರ ಗೋಳು ಕೇಳುವವರು ಯಾರೂ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಜನರಲ್ಲಿ ಅಡಕವಾಗಿರುವ ಜಾನಪದ ಕಲೆಗಳಿಂದ ನಮ್ಮ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆ ಹೆಚ್ಚಿದೆ. ಕಲೆಯೇ ನಮ್ಮ ಸಂಸ್ಕೃತಿ ಜೀವಾಳವೆಂದು ನಂಬಿರುವ ಎಷ್ಟೋ ಕುಟುಂಬಗಳು, ತಮ್ಮ ಬದುಕನ್ನು ಕಟ್ಟಿಕೊಳ್ಳಲಾಗದಷ್ಟು ಆರ್ಥಿಕವಾಗಿ ಅಶಕ್ತರಾಗಿದ್ದಾರೆ. ಕಲೆ ಉಳಿದರೆ ಮಾತ್ರ ನಮ್ಮ ಸಂಸ್ಕೃತಿ ಉಳಿಯಲು ಸಾಧ್ಯ. ಆದರೆ ಕಲಾವಿದರ ನೆರವಿಗೆ ನಿಲ್ಲಬೇಕಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಮ್ಮ ನೋವನ್ನು ನಿರ್ಲಕ್ಷಿಸಿದೆ. ಎಷ್ಟೋ ಬಡ ಹವ್ಯಾಸಿ ಕಲಾವಿದರು ಇಲಾಖೆಯ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಈಗಲಾದರೂ ಇಲಾಖೆ ಅಧಿಕಾರಿಗಳು ಬಡ ಕಲಾವಿದರ ರಕ್ಷಣೆಯೊಂದಿಗೆ ಕಲೆಯ ಉಳಿವಿಗೆ ಮುಂದಾಗಬೇಕು ಎಂದು ರಾಮಸ್ವಾಮಿ ಆಗ್ರಹಿಸಿದ್ದಾರೆ.

ಶ್ರೀಮತಿ ಪ್ರಮೀಳಾ ರಾಜಶೇಖರ್ ನಿಧನ



ಮೈಸೂರು, ಜ.6– ಮೈಸೂರಿನ ಮೇಟಗಳ್ಳಿಯ ಮಥುರಾ ನಗರದ ನಿವಾಸಿ ಶ್ರೀಮತಿ ಪ್ರಮೀಳಾ ರಾಜಶೇಖರ್(82) ಜ.4ರಂದು ನಿಧನರಾದರು. ಮೃತರು ಪುತ್ರ, ನಂಜನಗೂಡಿನ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಲಯನ್ ಸಿ.ಆರ್ ದಿನೇಶ್, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ಜ.5ರಂದು ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.1.2026 ಬುಧವಾರ, ಮಳೆ ನಕ್ಷತ್ರ: ಮೂಲ, 29.12.2025ರಿಂದ 10.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಅಮೃತ ವಿಶ್ವವಿದ್ಯಾಪೀಠಂ:** ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಕುರಿತು ಒಂದು ದಿನದ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಇಂಟರ್‌ನ್ಯಾಷನಲ್ ಫಾರ್ ಸಸ್ಟೇನೆಬಲ್ ಪೀಸ್ ಅಂಡ್ ಡೆವಲಪ್‌ಮೆಂಟ್ ಯೂರೋಪ್ ಅಧ್ಯಕ್ಷ ಸಂಗೀತ್ ವರ್ಗೀಸ್, ಉಪಸ್ಥಿತರು: ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ಟೆಕ್ನಾಲಜಿ ಕೌನ್ಸಿಲ್ ಅಧ್ಯಕ್ಷ ಡಾ. ಶ್ರೀಧರ್ ಸರಸ್ವತಿ, ಡಿಡಿಪಿಯು ಎಂ.ಪಿ.ನಾಗಮ್ಮ, ನ್ಯಾಷನಲ್ ಪಬ್ಲಿಕ್ ಸ್ಕೂಲ್ ಸಂಸ್ಥಾಪಕ ಡಾ. ಕೆ.ವಿ. ಗೋಪಾಲಕೃಷ್ಣ, ಗ್ಲೋಬಲ್ ಎಫ್‌ಟಿಐನ ಸಂಸ್ಥಾಪಕ ನಾರಾಯಣನ್ ನಂಬಿಯಾರ್, ಅಮೃತ ವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ನಿರ್ದೇಶಕ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ಸಂಚಾಲಕ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ಅಸೋಸಿಯೇಟ್ ಡೀನ್ ಡಾ.ಶೇಖರ್‌ಬಾಬು, ಪ್ರಿನ್ಸಿಪಾಲ್ ಡಾ. ಜಿ. ರವೀಂದ್ರನಾಥ್, ಶೈಕ್ಷಣಿಕ ಸಂಯೋಜಕಿ ಡಾ.ರೇಖಾ ಭಟ್, ಸ್ಥಳ: ಅಮೃತ ವಿಶ್ವವಿದ್ಯಾಪೀಠಂ ಆವರಣ, ಬೆಳಗ್ಗೆ 10 ರಿಂದ.
- **ವಿಮಾ ನಿಗಮ ಪಿಂಚಣಿದಾರರ ಸಂಘ, ಮೈಸೂರು ವಿಭಾಗ :** ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆ, ಉದ್ಘಾಟನೆ : ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ ಜಂಟಿ ಕಾರ್ಯದರ್ಶಿ ಕೆ. ಗೋಪಾಲ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಭಾರತದ ಮೊದಲ ಶಿಕ್ಷಕಿ ಅಕ್ಷರದವ್ವ ಮಾತೆ ಸಾವಿತ್ರಿಬಾಯಿ ಫುಲೆ ಅವರ 195ನೇ ಜನ್ಮ ದಿನಾಚರಣೆ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ. ನವೀನ್ ಕುಮಾರ್, ಸ್ಥಳ: ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಕರಾಮುವಿವಿ, ಮುಕ್ತ ಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ:** 2025–26ನೇ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವ ಪ್ರೊ.ಎನ್.ನಾಗರಾಜ, ಉಪಸ್ಥಿತರು: ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಚಂದ್ರಶೇಖರ ದಾಮ್ಲೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಿ. ಪುರುಷೋತ್ತಮ್ ಹಾಗೂ ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ತಿರುವಯ್ಯಾರಿನಲ್ಲಿ ನಡೆಯುವ ಶ್ರೀ ತ್ಯಾಗರಾಜರ ಆರಾಧನ ಮಹೋತ್ಸವದ ನೇರ ಪ್ರಸಾರ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಟಿ.ಎನ್.ಎಸ್. ಕೃಷ್ಣ–ಹಾಡುಗಾರಿಕೆ, 4.00 ಮಹಿಳಾರಂಗ, ಭಾಷಾ ಶಾಸ್ತ್ರ ಮಕ್ಕಳ ಸಾಹಿತ್ಯ ಮತ್ತು ಅನುವಾದ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿರುವ ಅಮೆರಿಕೆಯ ಟೆಕ್ಸಾಸ್ ವಿಶ್ವವಿದ್ಯಾಲಯ ಪ್ರೊಫೆಸರ್ ಕಲ್ಪನಾ ಅಯ್ಯಂಗಾರ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 4.30 ಹಿಂದಿ ಚಿತ್ರಗೀತೆಗಳು 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಸ್ಮಿತಾ ಚಿಪ್ಳೂಣ್‌ಕರ್, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್. ವಿಷಯ–ಕಿಟಕಿಗಳು, ಬಾಗಿಲುಗಳು ಮತ್ತು ಗ್ಲೇಜಿಂಗ್‌ಗಳ ವೈಜ್ಞಾನಿಕ ಮಹತ್ವ ಭಾಗವಹಿಸುತ್ತಾರೆ–ಪ್ರಮೂರ್ ಗ್ರೂಪ್‌ನ ಛೇರ್ಮನ್ ಎಸ್. ಪ್ರಕಾಶ್ ಹಾಗೂ ಪಿರಮಿಡ್ ಟಿಂಬರ್ಸ್‌ನ ಅಲಿ ಅಸ್ಗರ್ ವಾಗ್, ಪ್ರಸ್ತುತಿ –ಎನ್. ಕೇಶವಮೂರ್ತಿ, 6.50 ಕೃಷಿರಂಗ–ಮಂಡ್ಯ ತಾಲ್ಲೂಕು ಕಿಲಾರ ಗ್ರಾಮದಲ್ಲಿ ನಡೆದ ಬಾನುಲಿ ಕೃಷಿ ಕಾರ್ಯಕ್ರಮದ ಬಾನುಲಿ ವರದಿ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡ ಚಿತ್ರಗೀತೆಗಳು, 8.00 ಮಕ್ಕಳ ಮಂಟಪ, ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಪ್ರಥಮ ಭಾಷೆ ಕನ್ನಡ ಭಾಗವಹಿಸುವವರು–ಭಾರತೀಯ ವಿದ್ಯಾಭವನ ಶಾಲೆಯ ಅಧ್ಯಾಪಕರಾದ ಕೃಷ್ಣಪ್ಪ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 9.30 ಕ್ರೀಡಾಲೋಕ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025–ಶ್ರೀಮತಿ ವಿಶಾಖ ಹರಿ – ಹಾಡುಗಾರಿಕೆ

- **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ವಾರದ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ವಾದ್ಯ ಸಂಗೀತ ಕಛೇರಿ, ವಿ. ವಂಶೀಧರ್–ಕೊಳಲು, ಆರ್. ಅಚ್ಯುತಾರಾವ್–ವಯೋಲಿನ್, ಜಿ.ಎಸ್. ರಾಮಾನುಜನ್–ಮೃದಂಗ, ಎಸ್. ಮಂಜುನಾಥ್–ಘಟಂ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.


ಜಾತಿ ಆಧಾರಿತ ಶೋಷಣೆ ಇಂದೂ ಇದೆ, ಮುಂದೆಯೂ ಇರುತ್ತದೆ!

ಮೈಸೂರು,ಜ.6(ಎಂಟಿವೈ)– ಜಾತಿ ಆಧಾರದ ಮೇಲೆ ಶೋಷಣೆ ಮಾಡುವ ಪಟ್ಟಭದ್ರ ಹಿತಾಸಕ್ತಿಗಳು ಇಂದು ಇದ್ದಾರೆ, ಮುಂದೆಯೂ ಇರುತ್ತಾರೆ ಎಂದು ಸಿದ್ದರಾಮಯ್ಯ ಹೇಳಿದರು.

ತಮ್ಮ ಭಾಷಣದಲ್ಲಿ ಜಾತಿ ವ್ಯವಸ್ಥೆಯನ್ನು ಸುದೀರ್ಘವಾಗಿ ವಿವರಿಸಿದ ಸಿದ್ದ ರಾಮಯ್ಯ, ಸ್ವಾತಂತ್ರ್ಯ ಬಂದು 79 ವರ್ಷವಾದರೂ ಇನ್ನೂ ಜಾತಿ ವ್ಯವಸ್ಥೆ ಗಟ್ಟಿಯಾಗಿ ಬೇರೂರಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇವನಾರವ, ಇವನಾರವ... ಎಂದು ಬಸವಣ್ಣನವರ ವಚನ ಹೇಳುತ್ತಾರೆ. ತರುವಾಯ ನಿನ್ನ ಜಾತಿ ಯಾವುದು ಎಂದು ಪ್ರಶ್ನಿಸುತ್ತಾರೆ. ಈ ಮೂಲಕ ಜಾತಿ ಆಧಾರಿತ ಸಮಾಜ, ಮೌಢ್ಯ, ಕಂದಾಚಾರವನ್ನು ಜೀವಂತ ಸ್ಥಿತಿಯಲ್ಲಿ ಇಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂದಿನ ಸಾಮಾಜಿಕ ವ್ಯವಸ್ಥೆ ಬಗ್ಗೆ ನಾವು ತಿಳಿದುಕೊಳ್ಳಬೇಕು. ಜಾತಿ ವ್ಯವಸ್ಥೆ, ಚತುರ್ವರ್ಣ ವ್ಯವಸ್ಥೆ, ಅಸಮಾನತೆ ಏಕೆ ಇದೆ ಎಂಬ ಬಗ್ಗೆ ಅರಿವು ಹೊಂದಬೇಕು. ಈ ಮೂಲಕ ವೈಚಾರಿಕ ಹಾಗೂ ವೈಜ್ಞಾನಿಕ ಶಿಕ್ಷಣ ಪಡೆಯಬೇಕು. ಇಲ್ಲದಿದ್ದರೆ ಪ್ರಸ್ತುತ ಸಾಮಾಜಿಕ ಪರಿಸ್ಥಿತಿ ಬಗ್ಗೆ ತಿಳುವಳಿಕೆ ಮೂಡುವುದಿಲ್ಲ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.



ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಮಂಗಳವಾರ ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಹಾಗೂ ಅವರ ಪತ್ನಿ ಡಾ.ಸರಸ್ವತಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು.

ಮೊದಲು ನಾವು ಗುಲಾಮಗಿರಿ ಮನಸ್ಥಿತಿಯಿಂದ ಮುಕ್ತರಾಗಬೇಕು. ನಾವೇಕೆ ಹೀಗಿದ್ದೇವೆ ಎಂದು ಪ್ರಶ್ನೆ ಮಾಡಿಕೊಂಡು ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ವಾತಂತ್ರ್ಯ ದೊರೆಯದ ಹೊರತು ರಾಜಕೀಯ ಸ್ವಾತಂತ್ರ್ಯ ಸಿಗದು ಎಂಬ ಕಟು ಸತ್ಯವನ್ನು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಡ್ತಿಯಲ್ಲಿ ಮೀಸಲಾತಿ, ಗುತ್ತಿಗೆಯಲ್ಲಿ ಮೀಸಲಾತಿ ಸೇರಿದಂತೆ ಹಲವು ಮೀಸಲಾತಿ ಸೌಲಭ್ಯವನ್ನು ನಾನು ಕಲ್ಪಿಸಿದೆ. ಆದರೆ ಇದು ಬಿಜೆಪಿಯವರಿಗೆ ಏಕೆ ಸಾಧ್ಯವಾಗಲಿಲ್ಲ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಈಗಲೂ ದಲಿತರಿಗೆ ಶೇಕಡ 18 ರಷ್ಟು ಮೀಸಲಾತಿ ಕಲ್ಪಿಸುತ್ತಿಲ್ಲ ಎಂದು ಆರೋಪಿಸಿದರು.

ಮನರೇಗಾ ಯೋಜನೆಯಲ್ಲಿ ಗಾಂಧಿ ಹೆಸರನ್ನು ಕಿತ್ತುಹಾಕಿದ್ದಾರೆ. ಜಿ ರಾಮ್ ಜಿ ಎಂದು ಪರಿವರ್ತಿಸಿದ್ದಾರೆ. ಆದರೆ ದುರದೃಷ್ಟಕರ ಸಂಗತಿ ಅಂದರೆ ಶೇಕಡ 18 ರಷ್ಟಿರುವ ಪರಿಶಿಷ್ಟ ಜಾತಿಯವರು, ಶೇಕಡ 11ರಷ್ಟಿರುವ ಪರಿಶಿಷ್ಟ ಪಂಗಡದವರು ಈ ಬಗ್ಗೆ ಚಕಾರವೆತ್ತಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಮಾತನಾಡಲು ತಾಕತ್ತು ಬೇಕು ಎಂದು ಸಭಿಕನೊಬ್ಬ ಕೂಗಿ ಹೇಳಿದಾಗ ಆಕ್ರೋಶಗೊಂಡ ಸಿದ್ದರಾಮಯ್ಯ, ಇದರ ಬಗ್ಗೆ ಮಾತನಾಡಲು ತಾಕತ್ತು ಏಕೆ ಬೇಕು, ಸಂವಿಧಾನ ನಿಮಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿಲ್ಲವೆ ಎಂದು ಖಾರವಾಗಿ ಪ್ರಶ್ನಿಸಿದರು.

ಬಡವರ ಕೈಯ್ಯಲ್ಲಿ ಹಣ ಇರಬಾರದು ಎಂಬುದು ಮನುವಾದಿಗಳ ಮೂಲ ಉದ್ದೇಶ. ಬಡವರ ಕೈಯ್ಯಲ್ಲಿ ಹಣವಿದ್ದರೆ ನಾವು ಹೇಳಿದಂತೆ ಕೇಳುವುದಿಲ್ಲ, ತಮ್ಮ ಗುಲಾಮರಾಗುವುದಿಲ್ಲ ಎಂದು ಜನಪರವಾದ ಯೋಜನೆಗೆ ಕತ್ತರಿ ಹಾಕಿದ್ದಾರೆ ಎಂದು ದೂರಿದರು.

ವಾಸ್ತವ ಸ್ಥಿತಿ ತಿಳಿಯಲು ಮುಂದಾದರೆ ಮೌಢ್ಯದ ಬೀಜ ಬಿತ್ತುತ್ತಾರೆ. ಹಿಂದಿನ ಜನ್ಮದಲ್ಲಿ ಮಾಡಿದ ಪಾಪದಿಂದ ಈ ಜನ್ಮದಲ್ಲಿ ಹೀಗೆ ಹುಟ್ಟಿದ್ದೀಯಾ, ನಿನ್ನ ಹಣೇಬರಹ ಸರಿ ಇಲ್ಲ ಎಂದು ಕಥೆ ಕಟ್ಟುತ್ತಾರೆ ಎಂದು ಸಿದ್ದರಾಮಯ್ಯ ಕಿಡಿಕಾರಿದರು.

ಮಹಿಳೆಯರು ಕೂಡ ಶೂದ್ರರಂತೆ ಇದ್ದರು. ಈ ಹಿನ್ನೆಲೆಯಲ್ಲಿ ಮಹಿಳೆಯರ ಪರವಾದ ಗ್ಯಾರಂಟಿ ಯೋಜನೆ ಅನುಷ್ಠಾನ ಗೊಳಿಸಿದ್ದೇನೆ. ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಲು ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿ ರಚನೆ ಮಾಡಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಹಾಗೂ ಅವರ ಪತ್ನಿ ಡಾ.ಸರಸ್ವತಿ ಅವರಿಗೆ ಸಿದ್ದರಾಮಯ್ಯ ಅವರು ಶಾಲು ಹೊದಿಸಿ, ಫಲತಾಂಬೂಲ, ಸ್ಮರಣಾ ಸಂಚಿಕೆ ನೀಡಿ ಅಭಿನಂದಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಎ.ಆರ್.ಕೃಷ್ಣಮೂರ್ತಿ, ಡಾ.ತಿಮ್ಮಯ್ಯ, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ದಲಿತ ಮುಖಂಡ ಹರಿಹರ ಆನಂದ ಸ್ವಾಮಿ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

72 ಸಾವಿರ ಹುದ್ದೆ ಭರ್ತಿಗೆ ನಿರ್ಧಾರ

ರಾಜ್ಯ ಸರ್ಕಾರ 72 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ತೀರ್ಮಾನ ಕೈಗೊಂಡಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು.

ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಲು ಸಿದ್ದರಾಮಯ್ಯ ಅವರು ನನ್ನ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿ ರಚನೆ ಮಾಡಿದ್ದಾರೆ. ಈಗಾಗಲೇ 900 ಬ್ಯಾಕ್‌ಲಾಗ್ ಹುದ್ದೆ ಗುರುತಿಸಲಾಗಿದೆ. ಅಲ್ಲದೆ ಬ್ಯಾಕ್‌ಲಾಗ್‌ನಲ್ಲಿ ಮತ್ತಷ್ಟು ಹುದ್ದೆ ಗುರುತಿಸಲು ಐದು ತಂಡ ರಚನೆ ಮಾಡಿದ್ದೇನೆ ಎಂದು ಡಾ. ಮಹದೇವಪ್ಪ ಹೇಳಿದರು.

ಸಿದ್ದರಾಮಯ್ಯ ಇಲ್ಲದ ಕಾಂಗ್ರೆಸ್ ಊಹಿಸಿಕೊಳ್ಳಲು ಸಾಧ್ಯವಿಲ್ಲ...!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಲ್ಲಾಡಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹೇಳಿದರು.

ದೀರ್ಘಾವಧಿ ಮುಖ್ಯಮಂತ್ರಿ ಎಂಬ ದಾಖಲೆ ನಿರ್ಮಾಣ ಮಾಡಿರುವ ಸಿಎಂ ಸಿದ್ದರಾಮಯ್ಯ ಅವರು 2028 ರ ವಿಧಾನಸಭಾ ಚುನಾವಣೆಯಲ್ಲಿ ಕೂಡ ಗಟ್ಟಿಯಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು.

ಹಾಗಾದರೆ 2028ಕ್ಕೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಅನ್ನಿ ಎಂದು ಸಭಿಕನೊಬ್ಬ ಎದ್ದುನಿಂತು ಪ್ರಶ್ನಿಸಿದಾಗ, ಇರಲಿ ಬಿಡಿ, ಇದಕ್ಕೆ ನನ್ನ ತಕರಾರಂತೂ ಇಲ್ಲ ಎಂದು ಸ್ಪಷ್ಟನೆ ನೀಡಿದರು.

ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷಕ್ಕೆ ಒಂದು ದೊಡ್ಡ ಶಕ್ತಿ, ಅವರು ಇಲ್ಲದಿದ್ದರೆ ಈ ಸರ್ಕಾರ ಇರುವುದಿಲ್ಲ. ಸಿದ್ದರಾಮಯ್ಯ ಇಲ್ಲದ ಕಾಂಗ್ರೆಸ್ ಪಕ್ಷ ಊಯಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಇತ್ತೀಚಿಗೆ 'ನಾನೇ ಮುಖ್ಯಮಂತ್ರಿ' ಎಂಬ ನಾಟಕ ನೋಡಿದೆ. ಸಿಎಂ ಮುಂದೆ ಹೊಗಳುತ್ತಾರೆ, ಹಿಂದೆ ತೆಗಳುತ್ತಾರೆ. ಇದರಿಂದ ಯಾರನ್ನು ನಂಬುವುದು, ಯಾರನ್ನು ಬಿಡುವುದು ಎಂಬ ಯೋಚನೆಯಾಯಿತು. ಆದರೆ ಸಿದ್ದರಾಮಯ್ಯ ಅವರಂತೂ ಯಾವುದೇ ಹೊಗಳಿಕೆ, ತೆಗಳಿಕೆಗೆ ಸೊಪ್ಪು ಹಾಕುವುದಿಲ್ಲ ಎಂದರು.

ಸಿದ್ದರಾಮಯ್ಯರಿಲ್ಲದಿದ್ದರೆ ದಲಿತರು, ಬಡವರು ಬೀದಿ ಪಾಲಾಗ್ತಾರೆ: ಜನರ ಹಕ್ಕುಗಳ ರಕ್ಷಣೆಗೆ ಸಿದ್ದರಾಮಯ್ಯ ಅವರ ಆಡಳಿತ ಪ್ರತಿಬಿಂಬವಾಗಿದೆ. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರಿಲ್ಲದಿದ್ದರೆ ದಲಿತ ಹಾಗೂ ಹಿಂದುಳಿದವರು ಬೀದಿ ಪಾಲಾಗುತ್ತಾರೆ. ಮುಳುಗಿ ಹೋಗುತ್ತಾರೆ. ಇದನ್ನು ಇಲ್ಲಿ ನೆರೆದಿರುವ ನೀವೆಲ್ಲಾ ಅರಿಯಬೇಕು ಎಂದು ಸಲಹೆ ನೀಡಿದರು.

ಸಿದ್ದರಾಮಯ್ಯ ಮಾಸ್ ಲೀಡರ್, ಅಷ್ಟೇ ಅಲ್ಲದೆ ಪ್ರಶ್ನಾತೀತ ನಾಯಕ. ಭ್ರಷ್ಟಚಾರಿಗಳಿಗೆ ಮಣೆ ಹಾಕುವುದಿಲ್ಲ, ಕಳ್ಳ ಕಾಕರನ್ನು ನಂಬುವುದಿಲ್ಲ. ಮಾನವೀಯ ಗುಣವುಳ್ಳ ವಿಶಿಷ್ಟ ನಾಯಕತ್ವ ಸಿದ್ದರಾಮಯ್ಯ ಅವರಲ್ಲಿದೆ ಎಂದು ಹೇಳಿದರು.

ಅಧಿಕಾರ ಯೋಗ್ಯರಲ್ಲಿರಬೇಕು: ಸಿದ್ದರಾಮಯ್ಯ ಒಂದು ವೇಳೆ ಮುಂದುವರೆಯದಿದ್ದರೆ ದಲಿತರನ್ನು ಮುಖ್ಯಮಂತ್ರಿ ಮಾಡಿ ಎಂದು ದಲಿತರು ಹೇಳುತ್ತಾರೆ. ಆದರೆ, ಅಧಿಕಾರ ಯೋಗ್ಯರು ಹಾಗೂ ಸಮರ್ಥರ ಕೈಯ್ಯಲ್ಲಿರಬೇಕು. ಅಭಿಮಾನಿಗಳು ಘೋಷಣೆ ಕೂಗುವುದು ಸಹಜ. ನಾನು ಸಿಎಂ ಆಗಬೇಕು ಅಂತಾರೆ, ಪರಮೇಶ್ವರ್ ಸಿಎಂ ಆಗಬೇಕು ಎನ್ನುತ್ತಾರೆ. ಅಭಿಮಾನಿಗಳು ಅಭಿಮಾನ ತೋರಿಸುವುದರಲ್ಲಿ ತಪ್ಪಿಲ್ಲ ಎಂದರು.

ಸಿದ್ದರಾಮಯ್ಯ ಅವರ ವಿರುದ್ಧ ಕೆಲವರು ಆಧಾರ ರಹಿತ ಆರೋಪ ಮಾಡಿದರು, ಷಡ್ಯಂತ್ರ ರೂಪಿಸಿದರು. ಆದರೆ ಅವರಿಗೆ ಬೆಟ್ಟ ಅಗೆದು, ಇಲಿ ಹಿಡಿದ ಪರಿಸ್ಥಿತಿಯಾಯಿತು ಎಂದು ಡಾ.ಮಹದೇವಪ್ಪ ತಿಳಿಸಿದರು.

ಡಾ.ಶಿವಕುಮಾರ್ ಅವರು ಪತ್ರಕರ್ತರಾಗಿ ಇಂದು ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ದೇಶದ ಅಭಿವೃದ್ಧಿಯಲ್ಲಿ ಪತ್ರಿಕೋದ್ಯಮ ಪ್ರಮುಖ ಪಾತ್ರ ವಹಿಸುತ್ತದೆ. ಪತ್ರಕರ್ತರು ಇಲ್ಲದಿದ್ದರೆ ಜನ ವಿರೋಧಿ ನೀತಿ ತಲೆ ಎತ್ತುತ್ತದೆ. ಹೇಳುವರು–ಕೇಳುವವರು ಇಲ್ಲದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಆದರೆ ಇತ್ತೀಚಿಗೆ ಮಾಧ್ಯಮಗಳು ಕಾರ್ಪೊರೇಟ್ ವಲಯದವರ ಕೈಗೊಂಬೆಯಾಗಿವೆ. ವರದಿಗಾರ ನಿಷ್ಪಕ್ಷಪಾತವಾಗಿ ವರದಿ ಕಳುಹಿಸಿದರೆ, ಡೆಸ್ಕ್‌ನಲ್ಲಿ ಅದಕ್ಕೆ ಕತ್ತರಿ ಹಾಕುತ್ತಾರೆ ಎಂದು ಡಾ. ಮಹದೇವಪ್ಪ ಹೇಳಿದರು.

ದಲಿತ, ಹಿಂದುಳಿದವರಿಗೆ ಭೂ ದಾಖಲೆ ನೀಡಲು ಅಭಿಯಾನ

ಶೇಕಡ 80ರಷ್ಟು ದಲಿತರು ಹಾಗೂ ಹಿಂದುಳಿದವರಿಗೆ ಭೂ ದಾಖಲೆಗಳಿಲ್ಲ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಲ್ಯಾಂಡ್ ರೆಕಾರ್ಡ್ ಮಾಡಲು ಅಭಿಯಾನ ರೂಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಕೆ. ಶಿವಕುಮಾರ್ ಮನವಿ ಮಾಡಿದರು.

ಅಲ್ಲದೆ ಬುದ್ಧಿಸಂ ಬಗ್ಗೆ ಪಠ್ಯ ಪರಿಚಯಿಸಬೇಕು. ಆರ್‌ಎಸ್‌ಎಸ್ ಬಗ್ಗು ಬಡಿಯಲು ಇದರಿಂದ ಮಾತ್ರ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸರ್ಕಾರ ಕೂಡಲೇ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಬೇಕು. ಬಹಳಷ್ಟು ಮಂದಿ ಪದವಿ, ಸ್ನಾತಕೋತ್ತರ ಪದವಿ ಪಡೆದು ನಿರುದ್ಯೋಗಿಗಳಾಗಿದ್ದಾರೆ. ಓದಿದರೂ ಅದರಿಂದ ಉಪಯೋಗವಾಗಿಲ್ಲವೆಂದು ಚಿಂತಾಕ್ರಾಂತರಾಗಿದ್ದಾರೆ. ಇದರ ಗಂಭೀರತೆ ಅರಿತು ಬ್ಯಾಕ್‌ಲಾಗ್ ಭರ್ತಿ ಮಾಡಿ ಎಂದು ಕೋರಿದರು.

ಡಾ. ಅಂಬೇಡ್ಕರ್ ಅವರನ್ನು ಬಲಪಂಥಿಯರೆಂದು ಬಿಂಬಿಸುವ ಯತ್ನ ನಡೆಯುತ್ತಿದೆ. ಈ ಬಗ್ಗೆ ದಲಿತರು ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.

ದಲಿತ ಪತ್ರಕರ್ತರನ್ನು ಎಂಎಲ್ ಸಿ ಮಾಡಲು ಯಾರೂ ಮುಂದಾಗಲಿಲ್ಲ. ಪತ್ರಿಕೋದ್ಯಮದಲ್ಲಿ ದಲಿತರಿಲ್ಲ ಎನ್ನುತ್ತಿದ್ದರು, ದಲಿತರು ಇದ್ದಾರಲ್ಲ ಎಂದು ಗುರುತಿಸಿ ತೋರಿಸಿದರೆ ಅವರಿಗೆ ವಯಸ್ಸಾಗಿಲ್ಲ ಎನ್ನುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ನನ್ನನ್ನು ಸಿದ್ದರಾಮಯ್ಯ ಎಂಎಲ್‌ಸಿ ಮಾಡಿದ್ದಾರೆ ಎಂದರು.

ದೇಶದಲ್ಲಿ ಬಹಳಷ್ಟು ಮಂದಿ ಸಿಎಂ ಆಗಿದ್ದಾರೆ, ಆದರೆ ಸಿದ್ದರಾಮಯ್ಯ ಅಂತಹವರು ಬಹಳ ಅಪರೂಪ. ಬಡ್ತಿಯಲ್ಲಿ ಮೀಸಲಾತಿ, ಗುತ್ತಿಗೆಯಲ್ಲಿ ಮೀಸಲಾತಿ ಸೇರಿದಂತೆ ಹಲವು ಮೀಸಲಾತಿ ಸೌಲಭ್ಯ ಕಲ್ಪಿಸಿದ್ದಾರೆ. ಪ್ರಾಯಶಃ ದಲಿತರೇ ಮುಖ್ಯಮಂತ್ರಿ ಆಗಿದ್ದರೂ ದಲಿತರ ಪರವಾಗಿ ಇಂತಹ ಕಾರ್ಯಕ್ರಮ ಕೊಡಲು ಸಾಧ್ಯವಾಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ದೇವರ ದರ್ಶನ..



ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ 25ಕ್ಕೂ ಹೆಚ್ಚು ಭಕ್ತರು ಹಿಟ್ಟುವಳ್ಳಿ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನಕ್ಕೆ ಪಾದಯಾತ್ರೆ ಮೂಲಕ ತಲುಪಿ ದೇವರ ದರ್ಶನ ಪಡೆದರು. ಪ್ರಧಾನ ಆಗಮಿಕ ಟಿ.ಎನ್ ಅಭಿಜಿತ್, ನಾಗಮಣಿ ನಾಗರಾಜನ್, ಟಿ.ಎ ಶ್ರೀಧರ್, ಟಿ.ಎನ್ ಅಜಯ್, ಟಿ.ಎಸ್ ಅರುಣ್, ಸ್ವಪ್ನ, ರಾಘವ ಸಿಂಹ, ಅನಘ ಹಾಗೂ ಪಾದಯಾತ್ರೆ ಮೂಲಕ ಬಂದ ಭಕ್ತರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಆರ್‌ಎಸ್‌ಎಸ್ ಕುರಿತು ಅವಹೇಳನಕಾರಿ ಹೇಳಿಕೆ

ಸಚಿವ ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್‌ಗೆ ಕೋರ್ಟ್ ನೋಟಿಸ್

ಬೆಂಗಳೂರು, ಜ.6– ಆರ್‌ಎಸ್‌ಎಸ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಹಿನ್ನೆಲೆಯಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹಾಗೂ ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಅವರಿಗೆ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್ ನೋಟಿಸ್ ಜಾರಿ ಮಾಡಿದೆ.



ಪ್ರಿಯಾಂಕ್ ಖರ್ಗೆ



ದಿನೇಶ್

ನಗರದ ನಿವಾಸಿ ಹಾಗೂ ಆರ್‌ಎಸ್‌ಎಸ್ ಸದಸ್ಯರಾದ ತೇಜಸ್ ಎ ಅವರು ಸಲ್ಲಿಸಿದ ಖಾಸಗಿ ದೂರಿನ ಮೇರೆಗೆ ನ್ಯಾಯಾಲಯ ಮೂವರಿಗೆ ನೋಟಿಸ್ ಜಾರಿ ಮಾಡಿದೆ.

ಭಾರತೀಯ ನ್ಯಾಯ ಸಂಹಿತೆ (BNS) ಸೆಕ್ಷನ್ 356(2) ಅಡಿಯಲ್ಲಿ ದೂರು ದಾಖಲಿಸಲಾಗಿದ್ದು, ಈ ಸಂಬಂಧ BNSS ನಿಯಮಾವಳಿಗಳಂತೆ ನ್ಯಾಯಾಲಯವು ದೂರುದಾರ ಮತ್ತು ಸಾಕ್ಷಿಗಳಾದ ಮಹೇಶ್ ಹಾಗೂ ಸತೀಶ್ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದೆ.

ಬಿಎನ್‌ಎಸ್‌ಎಸ್ 2023ರ ಸೆಕ್ಷನ್ 223ರಂತೆ ಪ್ರಕರಣವನ್ನು ಸ್ವೀಕರಿಸುವ ಮೊದಲು ಆರೋಪಿಗಳ ಹೇಳಿಕೆಯನ್ನು ಆಲಿಸುವುದು ಕಡ್ಡಾಯವಾಗಿರುವುದರಿಂದ ನೋಟಿಸ್ ಜಾರಿ ಮಾಡಲಾಗುತ್ತಿದೆ ಎಂದು ನ್ಯಾಯಾಲಯದ ತಿಳಿಸಿದೆ. ಇದೇ ವೇಳೆ ಪ್ರಕರಣದ ವಿಚಾರಣೆಯನ್ನು ಜನವರಿ 14ಕ್ಕೆ ಮುಂದೂಡಲಾಗಿದೆ.

ಸಾರ್ವಜನಿಕ ಮೈದಾನಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳನ್ನು ನಿಷೇಧಿಸುವ ಕುರಿತು 2025ರ ಅಕ್ಟೋಬರ್ 13ರಂದು ಮುಖ್ಯಮಂತ್ರಿಗೆ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದರು. ಅದೇ ದಿನ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಅಮ್ಮ, ಆರ್‌ಎಸ್‌ಎಸ್ ಸದಸ್ಯರೊಂದಿಗೆ ಸ್ನೇಹ ಮಾಡಬೇಡಿ, ಅವರು ಕುಟುಂಬದವರಾಗಿರಲಿ, ಸಹೋದರರಾಗಿರಲಿ, ತಂದೆ ಅಥವಾ ಮಗನಾಗಿರಲಿ. ಅವರು ವಿಷಕಾರಿಗಳು ಎಂದು ಪೋಸ್ಟ್ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಅಕ್ಟೋಬರ್ 14ರಂದು ಮತ್ತೊಂದು ಪೋಸ್ಟ್ ಕೂಡ ಮಾಡಿದ್ದು, ಇವು ಆರ್‌ಎಸ್‌ಎಸ್‌ನ ಗೌರವಕ್ಕೆ ಧಕ್ಕೆ ತಂದಿವೆ ಎಂದು ದೂರಿನಲ್ಲಿ ಹೇಳಲಾಗಿದೆ.

ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗಳಿಗೆ ಬೆಂಬಲವಾಗಿ ದಿನೇಶ್ ಗುಂಡೂರಾವ್ ಮಾಧ್ಯಮಗಳಿಗೆ ನೀಡಿದ ಹೇಳಿಕೆಗಳು ಹಾಗೂ ನಲಪಾಡ್ ಸಾಮಾಜಿಕ ಜಾಲತಾಣದಲ್ಲಿ ಮಾಡಿದ ಪ್ರತಿಕ್ರಿಯೆಗಳೂ ಸಂಘಟನೆಯ ಪ್ರತಿಷ್ಠೆಗೆ ಹಾನಿಯುಂಟು ಮಾಡಿವೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

53 ಮಂದಿ ಪಿಐ, 19 ಮಂದಿ ಡಿವೈಎಸ್ಪಿ ವರ್ಗಾವಣೆ


ಮೈಸೂರು, ಜ.6(ಎಸ್‌ಪಿಎನ್)– ರಾಜ್ಯದ ವಿವಿಧೆಡೆ ಕರ್ತವ್ಯ ನಿರ್ವಹಿಸುತ್ತಿದ್ದ 53 ಮಂದಿ ಪೊಲೀಸ್ ಇನ್ಸ್‌ಪೆಕ್ಟರ್(ಸಿವಿಲ್), 19 ಮಂದಿ ಡಿವೈಎಸ್ಪಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರಿನ ಕೆಪಿಎಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಿವೈಎಸ್ಪಿ ಮೊಹಮ್ಮದ್ ಹಸ್ಮತ್ ಖಾನ್ ಅವರನ್ನು ಡಿಜಿ ಮತ್ತು ಐಜಿಪಿ ಅವರ ನಿರ್ದೇಶನದ ಮೇರೆಗೆ ಹಿರಿಯ ಐಪಿಎಸ್ ಅಧಿಕಾರಿ ಸೌಮೇಂದು ಮುಖರ್ಜಿ ಅವರು ಹಾಸನ ಜಿಲ್ಲೆ ಹೊಳೆನರಸೀಪುರ ಉಪವಿಭಾಗಕ್ಕೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದಾರೆ.

ಮೋದಿ–ಶಾಗೆ ಸಮಾಧಿ ತೋಡುತ್ತೇವೆ: ಉಮರ್–ಶಾರ್ಜೀಲ್‌ಗೆ 'ಸುಪ್ರೀಂ' ಜಾಮೀನು ನಿರಾಕರಣೆ ಬೆನ್ನಲ್ಲೇ JNUನಲ್ಲಿ ಘೋಷಣೆ

ನವದೆಹಲಿ, ಜ.6– ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ (ಜೆಎನ್‌ಯು) ಮತ್ತೊಮ್ಮೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ವಿರುದ್ಧ ಪ್ರತಿಭಟನೆಗಳು ಮತ್ತು ಆಕ್ಷೇಪಾರ್ಹ ಘೋಷಣೆಗಳಿಗೆ ಸಾಕ್ಷಿಯಾಗಿದೆ.

ದೆಹಲಿ ಗಲಭೆಯ ಆರೋಪಿ ಉಮರ್ ಖಾಲಿದ್ ಮತ್ತು ದೇಶದ್ರೋಹದ ಆರೋಪ ಹೊತ್ತಿರುವ ಶಾರ್ಜೀಲ್ ಇಮಾಮ್‌ನನ್ನು ಬೆಂಬಲಿಸಿ ಜೆಎನ್‌ಯು ವಿದ್ಯಾರ್ಥಿಗಳು ಪ್ರತಿಭಟನೆ ಮತ್ತು ಘೋಷಣೆಗಳನ್ನು ಕೂಗಿದ್ದಾರೆ. ವರದಿಗಳ ಪ್ರಕಾರ, ವಿದ್ಯಾರ್ಥಿಗಳು ಮೋದಿ–ಶಾಗೆ ಸಮಾಧಿ ತೋಡುತ್ತೇವೆ ಎಂಬ ಘೋಷಣೆಗಳನ್ನು ಕೂಗಿದ್ದು ವಿವಾದಕ್ಕೆ ಕಾರಣವಾಯಿತು. ದೇಶದ ಅತ್ಯಂತ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಜೆಎನ್‌ಯು ಕಳೆದ ಕೆಲವು ವರ್ಷಗಳಿಂದ ವಿವಾದದಲ್ಲಿ ಸಿಲುಕಿಕೊಂಡಿದೆ.



ಸಬರಮತಿ ಹಾಸ್ಟೆಲ್ ಹೊರಗೆ ರಾತ್ರಿಯಿಡೀ ವಿವಾದಾತ್ಮಕ ಘೋಷಣೆಗಳು ಮತ್ತು ಪ್ರತಿಭಟನೆಗಳು ನಡೆದವು. ಪ್ರತಿಭಟನೆಯ ಸಮಯದಲ್ಲಿ, ಎಡಪಂಥೀಯ ವಿದ್ಯಾರ್ಥಿಗಳು ಸುಪ್ರೀಂಕೋರ್ಟ್‌ನ ತೀರ್ಪಿನ ವಿರುದ್ಧ ಘೋಷಣೆಗಳನ್ನು ಕೂಗಿದರು. ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ ಅವರ ಜಾಮೀನು ಅರ್ಜಿಗಳನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿತು. ಇದನ್ನು ವಿರೋಧಿಸಿ ಪ್ರತಿಭಟನೆ ನಡೆಯಿತು. ಪ್ರತಿಭಟನೆಯ ಸಂದರ್ಭದಲ್ಲಿ, ವಿದ್ಯಾರ್ಥಿಗಳು ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಶಾ ವಿರುದ್ಧ ಆಕ್ಷೇಪಾರ್ಹ ಘೋಷಣೆಗಳನ್ನು ಕೂಗಿದರು. ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ ಅವರನ್ನು ಬೆಂಬಲಿಸಿ ಈ ಘೋಷಣೆಗಳನ್ನು ಕೂಗಲಾಯಿತು. ಚಿಕನ್ ನೆಕ್ ಕತ್ತರಿಸಿ ಈಶಾನ್ಯವನ್ನು ಭಾರತದಿಂದ ಬೇರ್ಪಡಿಸಬೇಕೆಂದು ಹೇಳಿಕೆ ನೀಡಿದ್ದಕ್ಕಾಗಿ ಶಾರ್ಜೀಲ್ ಇಮಾಮ್ ದೇಶದ್ರೋಹ ಪ್ರಕರಣ ಎದುರಿಸುತ್ತಿದ್ದರೆ, ಉಮರ್ ಖಾಲಿದ್ ದೆಹಲಿ ಗಲಭೆ ಆರೋಪ ಎದುರಿಸುತ್ತಿದ್ದಾನೆ.

ಜೆಎನ್‌ಯುನಲ್ಲಿ ಘೋಷಣೆ ಬಗ್ಗೆ ಪ್ರತಿಕ್ರಿಯಿಸಿದ ಬಿಜೆಪಿ ನಾಯಕ ಮತ್ತು ಸಚಿವ ಕಪಿಲ್ ಮಿಶ್ರಾ, ಹೆಡೆ ಎತ್ತಿದ ಹಾವುಗಳ ತಲೆ ಮೇಲೆ ಹೊಡೆದಾಗ ನೋವಿನಿಂದ ನರಳುತ್ತಿವೆ. ಜೆಎನ್‌ಯುನಲ್ಲಿ ನಕ್ಸಲೀಯರು, ಭಯೋತ್ಪಾದಕರು ಮತ್ತು ಗಲಭೆಕೋರರನ್ನು ಬೆಂಬಲಿಸಿ ಅಸಭ್ಯ ಘೋಷಣೆಗಳನ್ನು ಕೂಗಿದವರು, ನಕ್ಸಲೀಯರನ್ನು ನಿರ್ಮೂಲನೆ ಮಾಡಲಾಗುತ್ತಿದೆ. ಭಯೋತ್ಪಾದಕರನ್ನು ನಿಭಾಯಿಸಲಾಗುತ್ತಿದೆ. ಗಲಭೆಕೋರರನ್ನು ನ್ಯಾಯಾಲಯ ಗುರುತಿಸಿದೆ ಎಂಬ ಕಾರಣದಿಂದಾಗಿ ಹತಾಶರಾಗಿದ್ದಾರೆ ಎಂದು ಹೇಳಿದರು.

ಜ.11ಕ್ಕೆ ದಸರಾ ವಸ್ತು ಪ್ರದರ್ಶನ ಅಂತ್ಯ

ಮೈಸೂರು,ಜ.6(ಎಸ್‌ಪಿಎನ್)– 2025ರ ದಸರಾ ವಸ್ತು ಪ್ರದರ್ಶನ ಜ.11ಕ್ಕೆ ಕೊನೆಗೊಳ್ಳಲಿದೆ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಈ ಬಾರಿಯ ದಸರಾ ವಸ್ತು ಪ್ರದರ್ಶನ 112 ದಿನಗಳು ನಡೆದಂತಾಗಲಿದೆ. 2025ರ ಮೈಸೂರು ದಸರಾ ವಸ್ತು ಪ್ರದರ್ಶನ 2025ರ ಸೆ.22ರಂದು ಆರಂಭಗೊಂಡು ಡಿ.20ಕ್ಕೆ ಮುಕ್ತಾಯಗೊಳಿಸಲು ತೀರ್ಮಾನಿಸಲಾಗಿತ್ತು. ಆದರೆ, ದಸರಾ ವಸ್ತು ಪ್ರದರ್ಶನಕ್ಕೆ ಸಾರ್ವಜನಿಕರು, ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದ ಹಿನ್ನಲೆಯಲ್ಲಿ ಪ್ರದರ್ಶನ ಅವಧಿಯನ್ನು ಡಿ.21 ರಿಂದ ಜ.5ರವರೆಗೆ ವಿಸ್ತರಿಸಲಾಗಿತ್ತು. ಆದರೆ, ಮತ್ತೆ ವಿಸ್ತರಿಸುವ ಗುತ್ತಿಗೆದಾರರ ಕೋರಿಕೆ ಹಾಗೂ ಸಾರ್ವಜನಿಕರ ಬೇಡಿಕೆಯನ್ನು ಪರಿಗಣಿಸಿ, ಜ.11ರವರೆಗೆ ವಿಸ್ತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಹಿಂದೆ ದಸರಾ ವಸ್ತುಪ್ರದರ್ಶನ 90ರಿಂದ 95ಗಳವರೆಗೆ ಇರುತ್ತಿತ್ತು. ಆದರೆ, ರಾಜೀವ್‌ಗಾಂಧಿ ಡ್ರ್ಯಾಗನ್ ಪಾಂಡ್, ಅಜೀಜ್ ಸೇಠ್ ಮ್ಯೂಜಿಕಲ್ ಫೌಂಟೇನ್, ಪೋಲಾರ್ ಬಿಯರ್ ಸೇರಿದಂತೆ ಇತರೆ ಆಕರ್ಷಣೀಯ ಮಳಿಗೆಗಳು ತೆರೆದಿದ್ದ ಹಿನ್ನಲೆಯಲ್ಲಿ ವಸ್ತು ಪ್ರದರ್ಶನಕ್ಕೆ ಆಗಮಿಸುವವರ ಸಂಖ್ಯೆ ಹೆಚ್ಚಾಗಲು ಕಾರಣವಾಗಿವೆ ಎಂದರು.

2025ರ ವಸ್ತುಪ್ರದರ್ಶನದಲ್ಲಿ 45 ಸರ್ಕಾರಿ ಮಳಿಗೆಗಳು, ಸಿದ್ದರಾಮಯ್ಯ ಅಂಗಳದಲ್ಲಿ 155 ಖಾಸಗಿ ಮಳಿಗೆಗಳು ಹಾಗೂ 100ಕ್ಕೂ ಅಧಿಕ ಹೋಟೆಲ್‌ಗಳು ತೆರೆದಿದ್ದವು. ಜೊತೆಗೆ ಇಲ್ಲಿನ ಮಳಿಗೆಗಳ ವ್ಯಾಪಾರ ವಹಿವಾಟು ಚೆನ್ನಾಗಿದ್ದು, 110 ದಿನಗಳಲ್ಲಿ ದಸರಾ ವಸ್ತುಪ್ರದರ್ಶನಕ್ಕೆ ಭೇಟಿ ನೀಡಿರುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವುದರಿಂದ ಅಂದಾಜು 20 ಲಕ್ಷ ಮಂದಿ ದಸರಾ ವಸ್ತು ಪ್ರದರ್ಶನಕ್ಕೆ ಭೇಟಿ ನೀಡಿದ್ದಾರು ಎಂದು ಮಾಹಿತಿ ನೀಡಿದರು.

ದಸರಾ ಗಜಪಡೆಯ 4 ಆನೆಗಳೊಂದಿಗೆ ಮೈಸೂರು ವಿಮಾನ ನಿಲ್ದಾಣದಲ್ಲಿ

ಹುಲಿಗಾಗಿ ಇಂದಿನಿಂದ ಕಾರ್ಯಾಚರಣೆ



ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸಲು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬೀಡು ಬಿಟ್ಟಿರುವ ಹರ್ಷ, ಸುಗ್ರೀವ, ಕಂಜನ್, ಪ್ರಶಾಂತ ಆನೆಗಳು.

ಮೈಸೂರು, ಜ.6(ಎಂಟಿವೈ)– ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಆವರಣದಲ್ಲಿ ಪ್ರತ್ಯಕ್ಷವಾಗಿದ್ದ ಹುಲಿಗಾಗಿ ಕಾರ್ಯಾಚರಣೆ ಉದ್ದೇಶದಿಂದ ದುಬಾರೆ ಕ್ಯಾಂಪ್‌ನಿಂದ ನಾಲ್ಕು ಸಾಕಾನೆಗಳನ್ನು ಕರೆಸಲಾಗಿದ್ದು, ಬುಧವಾರ ಕೂಂಬಿಂಗ್ ಪ್ರಕ್ರಿಯೆ ನಡೆಸಲಾಗುತ್ತಿದೆ.

ಮಂಡಕಳ್ಳಿ ವಿಮಾನ ನಿಲ್ದಾಣದ ಆವರಣದಲ್ಲಿ ಸೋಮವಾರ ಮುಂಜಾನೆ ಗಸ್ತಿನಲ್ಲಿದ್ದ ಭದ್ರತಾ ಸಿಬ್ಬಂದಿಗೆ ಹುಲಿ ಕಾಣಿಸಿಕೊಂಡಿತ್ತು. ಅದೇ ದಿನ ಬೆಳಗ್ಗೆ 6 ಗಂಟೆಗೆ ವಿಮಾನ ನಿಲ್ದಾಣದ ಆವರಣದಲ್ಲಿ, ರೈಲ್ವೆ ಹಳಿ ಕಡೆ ಹಾದು ಹೋಗಿರುವ ಕಾಂಪೌಂಡ್ ಪಕ್ಕದ ರಸ್ತೆಯಲ್ಲಿ ಹುಲಿ ವಿಹರಿಸುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಆ ರಸ್ತೆಯಿಂದ ರನ್‌ವೆ ಕಡೆ ಹೋದ ಹುಲಿ, ನಾಪತ್ತೆಯಾಗಿದೆ. ಸೋಮವಾರ ಬೆಳಗ್ಗೆಯಿಂದ ರಾತ್ರಿವರೆಗೆ ನಡೆಸಿದ ಕೂಂಬಿಂಗ್ ಕಾರ್ಯಾಚರಣೆ ಹಾಗೂ ಥರ್ಮಲ್ ಡ್ರೋನ್‌ನಲ್ಲೂ ಹುಲಿ ಸುಳಿವು ಪತ್ತೆಯಾಗಿಲ್ಲ. ಹಾಗಾಗಿ ಅರಣ್ಯ ಹಾಗೂ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಬೇಲಿ ಹಾರಿರುವ ಶಂಕೆ: ಹುಲಿ ವಿಮಾನ ನಿಲ್ದಾಣದ ಹಿಂಭಾಗದ ಬೇಲಿ ಹಾರಿರುವ ಶಂಕೆ ವ್ಯಕ್ತವಾಗಿದೆ. ಕಾಂಪೌಂಡ್ ಮೇಲೆ ಅಳವಡಿಸಿರುವ ಸುರುಳಿಯಾಕಾರದ ತಂತಿ ಬೇಲಿಯ ಮುಳ್ಳಿನಲ್ಲಿ ಹುಲಿಯ ಕೂದಲು ಸಿಲುಕಿರುವುದು ಪತ್ತೆಯಾಗಿದೆ. ಇದರಿಂದ ತಂತಿ ಬೇಲಿಯ ಸುರುಳಿಯೊಳಗಿನಿಂದ ಹುಲಿ ಪರಾರಿಯಾಗಿರುವ ಶಂಕೆ ವ್ಯಕ್ತವಾಗಿದೆ.

ಸಿಸಿ ಕ್ಯಾಮರಾದಲ್ಲಿ ಸುಳಿವಿಲ್ಲ: ಅರಣ್ಯ ಸಿಬ್ಬಂದಿ ಟಿವಿಎಸ್ ಫ್ಯಾಕ್ಟರಿ ಬಳಿ ಇರುವ ಸಿಸಿ ಕ್ಯಾಮರಾ ದೃಶ್ಯಾವಳಿಯನ್ನು ಪರಿಶೀಲಿಸಿದ್ದಾರೆ. ಆದರೆ, ಆ ಕ್ಯಾಮರಾದಲ್ಲಿ ಹುಲಿಯ ಸುಳಿವು ದಾಖಲಾಗಿಲ್ಲ. ಹಾಗಾಗಿ ಹುಲಿ ಬೇಲಿ ಹಾರಲು ಸಾಧ್ಯವಾಗದೇ ವಿಮಾನ ನಿಲ್ದಾಣದ ಒಳಗೇ ಇರುವ ಸಾಧ್ಯತೆಯೂ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಕೂಂಬಿಂಗ್ ಮುಂದುವರೆಸಲು ನಿರ್ಧರಿಸಲಾಗಿದೆ.

ವಿಮಾನ, ಹೆಲಿಕಾಪ್ಟರ್ ಶಬ್ದದಿಂದ ಗಜಪಡೆ ವಿಚಲಿತ!

ವಿಮಾನ ನಿಲ್ದಾಣದ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಯ ನಾಲ್ಕು ಆನೆಗಳು ಕೂಂಬಿಂಗ್ ಕಾರ್ಯಾಚರಣೆ ವೇಳೆ ವಿಮಾನ ಹಾಗೂ ಹೆಲಿಕಾಪ್ಟರ್ ಲ್ಯಾಂಡಿಂಗ್ ವೇಳೆ ಘಾಸಿಗೊಳ್ಳುವುದನ್ನು ತಪ್ಪಿಸಲು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಾಗಿದೆ. ರನ್‌ವೇ ಬಳಿ ಗಜಪಡೆ ಸುಳಿಯುವುದಿಲ್ಲವಾದರೂ, ಕಾರ್ಯಾಚರಣೆ ವೇಳೆ ಲ್ಯಾಂಡಿಂಗ್ ಮತ್ತು ಟೇಕಾಫ್ ಆಗುವ ವಿಮಾನ, ಹೆಲಿಕಾಪ್ಟರ್ ಶಬ್ದದಿಂದ ಗಜಪಡೆ ವಿಚಲಿತಗೊಳ್ಳುವ ಸಾಧ್ಯತೆ ಇದ್ದು, ಈ ನಿಟ್ಟಿನಲ್ಲಿ ವಿಮಾನ ನಿಲ್ದಾಣದ ಕಂಟ್ರೋಲ್ ರೂಮ್‌ನಿಂದ ಸೂಕ್ತ ಮಾಹಿತಿ ಪಡೆದು ಕಾರ್ಯಾಚರಣೆ ನಡೆಸಲು ಆದ್ಯತೆ ನೀಡಬೇಕಿದೆ.

ವಿಮಾನ ನಿಲ್ದಾಣಕ್ಕೆ ಬಂದಿಳಿದ ದಸರಾ ಗಜಪಡೆ

ಹುಲಿಗಾಗಿ ಬುಧವಾರ(ಜ.7) ಕೂಂಬಿಂಗ್ ಕಾರ್ಯಾಚರಣೆ ನಡೆಸಲು ದುಬಾರೆ ಕ್ಯಾಂಪ್‌ನಿಂದ ದಸರಾ ಆನೆಗಳಾದ ಹರ್ಷ, ಸುಗ್ರೀವ, ಪ್ರಶಾಂತ ಹಾಗೂ ಕಂಜನ್ ಮಂಗಳವಾರ ಸಂಜೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿಳಿದಿವೆ. ಸಂಜೆ ಆಗಮಿಸಿದ ಗಜಪಡೆ ವಿಶ್ರಾಂತಿ ಪಡೆಯುತ್ತಿದ್ದು, ನಾಳೆ ಬೆಳಗ್ಗೆ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಲಿವೆ. ಅಲ್ಲದೆ, ಮಂಗಳವಾರ ರಾತ್ರಿ ಥರ್ಮಲ್ ಡ್ರೋನ್‌ನಲ್ಲಿ ಪರಿಶೀಲನೆ ನಡೆಸಲಾಗುವುದು. ಹುಲಿ ಸುಳಿವು ಸಿಕ್ಕರೆ ಸಾಕಾನೆಯೊಂದಿಗೆ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಅರಣ್ಯ ಸಿಬ್ಬಂದಿ ತಿಳಿಸಿದ್ದಾರೆ.

ಸುಳಿವು ಸಿಕ್ಕಿಲ್ಲ

ಸದ್ಯ, ಮಂಡಕಳ್ಳಿ ವಿಮಾನ ನಿಲ್ದಾಣದ ಆವರಣದಲ್ಲಿ ಕಾಣಿಸಿಕೊಂಡಿದ್ದ ಹುಲಿ ಸುಳಿವು ಇಲ್ಲ. ಮಂಗಳವಾರವೂ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿದೆ. ವಿಮಾನ ನಿಲ್ದಾಣದ ಹಿಂಭಾಗದಲ್ಲಿ ಕಾಂಪೌಂಡ್ ಹಾರಿರುವ ಶಂಕೆ ಇದೆ. ಆದರೆ, ಟಿವಿಎಸ್ ಫ್ಯಾಕ್ಟರಿ ಬಳಿಯ ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಲಾಗಿದ್ದು ಅಲ್ಲಿ ಹುಲಿ ಚಲನವಲನ ಪತ್ತೆಯಾಗಿಲ್ಲ. ನಾಲ್ಕು ಸಾಕಾನೆ ತರಿಸಿಕೊಳ್ಳಲಾಗಿದ್ದು, ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗುತ್ತದೆ.

– ಪರಮೇಶ್, ಡಿಸಿಎಫ್, ಮೈಸೂರು ವಿಭಾಗ

ನಕ್ಕರೆ ಅದೇ ಸ್ವರ್ಗ

ಮಗ : ಅಮ್ಮ, ಇವತ್ತು ಏನ್ ಸ್ಪೆಷಲ್?
ಅಮ್ಮ : ಸಾಲದ ಟೀ ಮಗನೆ
ಮಗ : ಹಾಗೆಂದರೆ?
ಅಮ್ಮ : ಹಾಲು ಎದುರು ಮನೆಯದು, ಟೀ ಪುಡಿ ಪಕ್ಕದ ಮನೆಯದು, ಸಕ್ಕರೆ ಹಿಂದಿನ ಮನೆಯದು!

ಮೈಸೂರು ಮಿತ್ರ

ಬುಧವಾರ, ಜನವರಿ 7, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೈಗಳಿಲ್ಲದ ಬೀಗಗಳು ತಯಾರಾಗುವುದೇ ಇಲ್ಲ.. ಪರಿಹಾರವಿಲ್ಲದ ಕಷ್ಟಗಳೂ ಇಲ್ಲ...ತೊಂದರೆಗಳನ್ನು ನಿವಾರಿಸಿಕೊಳ್ಳಲು ತಾಳ್ಮೆ ಬೇಕು ಅಷ್ಟೇ!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚಿಂತೆ ಮಾಡಿದರೆ ಸಂತೆ ಸಾಗೀತೆ?

ನಿಮ್ಮ ಪತ್ರಗಳು

ಮಣಿಪಾಲ್ ಆಸ್ಪತ್ರೆ ಸಮೀಪದ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಿ



ಮಾನ್ಯರೇ,

ಮೈಸೂರು–ಬೆಂಗಳೂರು ರಸ್ತೆ: ಮಣಿಪಾಲ್ ಆಸ್ಪತ್ರೆ ಸಿಗ್ನಲ್ ಸಮೀಪ ದಂಡಿನ ಮಾರಿಯಮ್ಮ ದೇವಸ್ಥಾನ ಸಮೀಪದ ಬಳಿ ರಾಜಕಾಲುವೆ ರಸ್ತೆಗೆ ತಡೆಗೋಡೆ ಇಲ್ಲದೆ ಅಪಘಾತದ ಭೀತಿ ಉಂಟಾಗಿದೆ.

ಮೈಸೂರು–ಬೆಂಗಳೂರು ರಸ್ತೆ ನಡುವೆ ಇರುವ ರಾಜ ಕಾಲುವೆಗಳು ದಿನದಿಂದ ದಿನಕ್ಕೆ ಅಪಘಾತ ವಲಯಗಳಾಗಿ ಮಾರ್ಪಡುತ್ತಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ರಸ್ತೆ ಮತ್ತು ಕಾಲುವೆ ನಡುವೆ ಯಾವುದೇ ರೀತಿಯ ತಡೆಗೋಡೆ ಅಥವಾ ಸುರಕ್ಷತಾ ವ್ಯವಸ್ಥೆ ಇಲ್ಲದೆ ಇರುವುದರಿಂದ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ವಾಹನ ಸವಾರರು ಜೀವಪಾಯದೊಂದಿಗೆ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ಸಮಯದಲ್ಲಿ ಹಾಗೂ ಮಳೆಗಾಲದ ದಿನಗಳಲ್ಲಿ ದೃಶ್ಯತೆ ಕಡಿಮೆಯಾಗುವುದರಿಂದ, ಬೈಕ್, ಕಾರು ಮತ್ತು ಟ್ರ್ಯಾಕ್ಟರ್‌ಗಳು ನಿಯಂತ್ರಣ ತಪ್ಪಿ ಕಾಲುವೆಗೆ ಬೀಳುವ ಘಟನೆಗಳು ಸಂಭವಿಸುತ್ತಿವೆ. ಇತ್ತೀಚಿನ ತಿಂಗಳುಗಳಲ್ಲಿ ಈ ಭಾಗದಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಹಲವರು ಗಾಯಗೊಂಡಿದ್ದು, ಇದು ದುಃಖದ ಸಂಗತಿ. ರಸ್ತೆಯ ಪಕ್ಕದಲ್ಲಿರುವ ರಾಜ ಕಾಲುವೆಗಳಿಗೆ ಬಲಿಷ್ಠ ತಡೆಗೋಡೆ (ಕ್ರ್ಯಾಶ್ ಬ್ಯಾರಿಯರ್) ನಿರ್ಮಿಸುವುದು ಈಗ ತುರ್ತು ಅಗತ್ಯವಾಗಿದೆ. ಇದರಿಂದ ವಾಹನಗಳು ರಸ್ತೆ ಮಿತಿಯನ್ನು ದಾಟದಂತೆ ತಡೆಯಲು ಸಾಧ್ಯವಾಗುವುದರ ಜೊತೆಗೆ, ಪಾದಚಾರಿಗಳು ಹಾಗೂ ಶಾಲಾ ಮಕ್ಕಳಿಗೂ ಸುರಕ್ಷತೆ ಒದಗುತ್ತದೆ. ಸ್ಥಳೀಯ ಆಡಳಿತ, ಹಾಗೂ ರಾಜಕಾಲುವೆಗೆ ಅನಗತ್ಯ ತ್ಯಾಜ್ಯವನ್ನು ಹಾಕುವುದು ಕೂಡ ಕಡಿಮೆಯಾಗುತ್ತದೆ. ಸಾರ್ವಜನಿಕ ಕಾಮಗಾರಿಗಳ ಇಲಾಖೆ ಪರಸ್ಪರ ಸಮನ್ವಯ ಸಾಧಿಸಿ ತಕ್ಷಣ ಕ್ರಮ ಕೈಗೊಳ್ಳಬೇಕಾಗಿದೆ. ಜೀವಹಾನಿಯಾಗುವ ಮೊದಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅಧಿಕಾರಿಗಳ ನೈತಿಕ ಜವಾಬ್ದಾರಿಯಾಗಿದೆ. ಇನ್ನಾದರೂ ಸಂಬಂಧಿಸಿದವರು ಎಚ್ಚೆತ್ತು, ರಸ್ತೆ ಪಕ್ಕದ ರಾಜ ಕಾಲುವೆಗಳಿಗೆ ತಡೆಗೋಡೆ ನಿರ್ಮಿಸಿ ಜನರ ಜೀವ ರಕ್ಷಿಸಬೇಕಾಗಿದೆ ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

–ಗೋವಿತ್ ಕಿರಣ್ ರಾಜೇಂದ್ರ ನಗರ ಮೈಸೂರು

ಮಹಿಳೆಯರಿಗೆ ಸಾರ್ವಜನಿಕವಾಗಿ ಶುಚಿ ಪ್ಯಾಡ್ ದೊರೆಯುವಂತಾಗಲಿ

ಮಾನ್ಯರೆ,

ದೇಶದ ಅಭಿವೃದ್ಧಿಗಾಗಿ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಶಿಕ್ಷಣ ಕ್ಷೇತ್ರದಿಂದ ಹಿಡಿದು ಕೇಂದ್ರ ಮತ್ತು ರಾಜ್ಯ ಸರ್ಕಾರಿ ಮತ್ತು ಖಾಸಗಿ ನೌಕರರೊಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿದು ದೇಶದ ಪ್ರಗತಿಗಾಗಿ ಶ್ರಮಿಸುತ್ತಿರುವ ಹೆಣ್ಣು ಮಕ್ಕಳು, ಮಹಿಳೆಯರು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರತಿನಿತ್ಯ ಓಡಾಡುವುದರ ಜೊತೆಗೆ ಆಗಾಗ ಬಿಡುವಿನ ವೇಳೆಯಲ್ಲಿ ದೇವಸ್ಥಾನವು ಸೇರಿದಂತೆ ವಿವಿಧ ಪ್ರೇಕ್ಷಣಿಯ ಸ್ಥಳಗಳು, ಮನರಂಜನೆ, ಮೃಗಾಲಯ, ಪ್ರಕೃತಿ ಸೌಂದರ್ಯದ ಸ್ಥಳಗಳಿಗೂ ಸಹ ಪ್ರವಾಸ ಮಾಡುತ್ತಾರೆ. ಇಂತಹ ಸಮಯಗಳಲ್ಲಿ ಗ್ರಾಮೀಣ ಭಾಗದಿಂದ ಹಿಡಿದು ನಗರ ಪ್ರದೇಶದ ಹೆಣ್ಣು ಮಕ್ಕಳು, ಮಹಿಳೆಯರು ಓಡಾಡುತ್ತಾರೆ, ಇಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಮತ್ತು ಮಹಿಳೆಯರ ನೈಸರ್ಗಿಕ ಸಹಜ ಕ್ರಿಯೆಯಾಗಿರುವ ಋತುಚಕ್ರ ಎದುರಾದರೆ ಕೆಲವರು ಶುಚಿ ಪ್ಯಾಡ್ ಇಟ್ಟುಕೊಂಡಿಲ್ಲದ ಸಮಯಗಳಲ್ಲಿ ತಕ್ಷಣಕ್ಕೆ ಹತ್ತಿರದಲ್ಲಿ ಯಾವುದೋ ಮೆಡಿಕಲ್ ಸ್ಟೋರ್‌ಗಳಾಗಲಿ, ಅಂಗಡಿಗಳಾಗಲಿ ಸಿಗುವುದಿಲ್ಲ. ಇದರಿಂದ ಹೆಣ್ಣು ಮಕ್ಕಳು ಸಾರ್ವಜನಿಕವಾಗಿ ಮುಜುಗರಕ್ಕೊಳಗಾಗಿ ಭಯಭೀತರಾಗುತ್ತಾರೆ. ಆದ್ದರಿಂದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಸುರಕ್ಷತೆ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸಾರ್ವಜನಿಕ ಶೌಚಾಲಯಗಳು ಸೇರಿದಂತೆ ಬಸ್ ಹಾಗೂ ರೈಲಿನಲ್ಲೂ ಸಹ ಕಡ್ಡಾಯವಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರೋಗ್ಯ ಇಲಾಖೆ ವತಿಯಿಂದ ಉಚಿತ ಶುಚಿ ಪ್ಯಾಡ್‌ಗಳು ದೊರೆಯುವಂತೆ ಯೋಜನೆ ಕೈಗೊಂಡು, ಪ್ರಥಮ ಚಿಕಿತ್ಸೆ ಪೆಟ್ಟಿಗೆಯನ್ನು ಇಲ್ಲದಿರುವ ಸಾರ್ವಜನಿಕ ಶೌಚಾಲಯಗಳಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯನ್ನು ಅಳವಡಿಸಿ ಶುಚಿ ಪ್ಯಾಡ್ ದೊರೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ರೈತರ ಬದುಕು ಅಯೋಮಯ

ಮಾನ್ಯರೆ,

ರಾಜ್ಯದಲ್ಲಿ ಮೆಕ್ಕೆಜೋಳದ ಉತ್ಪಾದನೆ ಶೇ.24ರಷ್ಟು ಹೆಚ್ಚಾಗಿದ್ದರೂ ರೈತರಿಗೆ ಸಿಗುತ್ತಿರುವ ಬೆಲೆ ಮಾತ್ರ ಶೂನ್ಯಕ್ಕೆ ತಲುಪುತ್ತಿರುವುದು ದುರಂತ. ಕೇಂದ್ರ ಸರ್ಕಾರ 2,400 ರೂ. ಬೆಂಬಲ ಬೆಲೆ ಘೋಷಿಸಿ ಸುಮ್ಮನಿದ್ದರೆ, ರಾಜ್ಯ ಸರ್ಕಾರ ನೀಡುತ್ತಿರುವ 1800 ರೂ. ರೈತನ ಬೆವರು ಮತ್ತು ಹೂಡಿಕೆಗೆ ಮಾಡುತ್ತಿರುವ ಅವಮಾನವಾಗಿದೆ. ಸರ್ಕಾರದ ಈ ಅರೆಬರೆ ನೀತಿಗಳು ರೈತರನ್ನು ಸಾಲದ ಸುಳಿಗೆ ತಳ್ಳುತ್ತಿವೆ.ಇನ್ನೂ ರೈತರು ದ್ವಿದಳ ಧಾನ್ಯಗಳನ್ನು ಬೆಳೆದಾಗ ವಿದೇಶದಿಂದ ಆಮದು ಮಾಡಿಕೊಂಡು ಬೆಲೆ ಕುಸಿಯುವಂತೆ ಮಾಡುವ ಕೇಂದ್ರದ ನೀತಿ ಮತ್ತು ಮಾರುಕಟ್ಟೆ ಹಸ್ತಕ್ಷೇಪ ಮಾಡದ ರಾಜ್ಯದ ನಿರ್ಲಕ್ಷ್ಯ ಎರಡೂ ರೈತ ವಿರೋಧಿಯಾಗಿವೆ. ಸರ್ಕಾರಗಳು ಕೇವಲ ಅಂಕಿ–ಅಂಶಗಳ ಆಟ ಆಡುವುದನ್ನು ಬಿಟ್ಟು, ಪ್ರತಿ ಬೆಳೆಗೂ ವೈಜ್ಞಾನಿಕ ಬೆಲೆ ಮತ್ತು ಸಮರ್ಪಕ ದಾಸ್ತಾನು ವ್ಯವಸ್ಥೆ ಕಲ್ಪಿಸಬೇಕು.

–ಡಾ. ಎಚ್.ಕೆ.ವಿಜಯಕುಮಾರ, ಮೈಸೂರು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಭಾರತದ ಪ್ರಾಣನಾಡಿಗಳಾದ ಏಳು ನದಿಗಳು

ಸಂಸ್ಕೃತದಲ್ಲಿ ಜೀವನ ಎಂಬ ಶಬ್ದಕ್ಕೆ ನೀರು, ಬದುಕು ಎಂಬ ಎರಡು ಅರ್ಥಗಳಿವೆ. ಏಕೆಂದರೆ ನೀರಿಲ್ಲದೆ ಯಾವ ಜೀವವೂ ಬದುಕಲಾರದು. ಮಾನವರ ಬದುಕು ನದಿಗಳ ನೀರನ್ನೇ ಹೆಚ್ಚಾಗಿ ಅವಲಂಬಿಸಿದೆ. ಅನೇಕ ಪಟ್ಟಣಗಳು ನದೀ ತೀರದಲ್ಲಿ ಬೆಳೆದಿವೆ. ಪ್ರಕೃತಿಯು ನೀಡಿರುವ ವರಗಳಲ್ಲಿ ನದಿಗಳೇ ಮುಖ್ಯವಾದುವು. ನಾವು ಪ್ರತಿದಿನವೂ ಪೂಜೆಯನ್ನು ಮಾಡುವಾಗ ಕೆಲಶೋಧಕದಲ್ಲಿ ಏಳು ನದಿಗಳನ್ನು ಆವಾಹನೆ ಮಾಡುತ್ತೇವೆ. ಆಗ ಹೇಳುವ ಶ್ಲೋಕ–


ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ ಜಲೇSಸ್ಮಿನ್ ಸನ್ನಿಧಿಂಕುರು॥

ಇಲ್ಲಿ ಗಂಗಾ, ಯಮುನಾ, ಗೋದಾವರೀ, ಸರಸ್ವತೀ, ನರ್ಮದಾ, ಸಿಂಧು, ಕಾವೇರೀ ಎಂಬ ಏಳು ನದಿಗಳನ್ನು ಸಂಭೋದಿಸಿ ಕಲಶದ ನೀರಲ್ಲಿ ಬರಬೇಕೆಂಬ ಕೋರಿಕೆಯನ್ನು ಸಲ್ಲಿಸಲಾಗಿದೆ. ಇವುಗಳಲ್ಲಿ ಗಂಗಾ, ಯಮುನಾ, ಸರಸ್ವತೀ, ಸಿಂಧು ಎಂಬುವನ್ನು ವೇದಗಳಲ್ಲೂ ಸ್ತುತಿಸಿದ್ದಾರೆ. ಈ ಏಳು ನದಿಗಳು ಅತ್ಯಂತ ಪವಿತ್ರ. ಇವುಗಳಲ್ಲಿ ಸ್ನಾನ ಮಾಡಿದರೆ ಶರೀರವೂ ಮನಸ್ಸೂ ಬುದ್ಧಿಯೂ ಶುದ್ಧವಾಗುತ್ತವೆ ಎಂಬ ನಂಬಿಕೆಯಿದೆ.

ಗಂಗಾನದಿ: ಇದು ಪವಿತ್ರಗಳಲ್ಲಿ ಪವಿತ್ರವಾದುದು. ಇದಕ್ಕೆ ಭಾಗೀರಥಿ, ಜಾಹ್ನವೀ ಮುಂತಾದ ಹೆಸರುಗಳೂ ಇವೆ. ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ ಗಂಗಾನದಿಯು ಭೂಲೋಕಕ್ಕೆ ಹೇಗೆ ಬಂದಿತೆಂಬ ಕಥೆಯಿದೆ. ಸಗರನೆಂಬ ಚಕ್ರವರ್ತಿಯು ಅಶ್ವ ಮೇಧ ಯಾಗವನ್ನು ಮಾಡಲು ಹೊರಟಾಗ ಯಜ್ಞದ ಕುದುರೆಯನ್ನು ಇಂದ್ರನು ಅಪಹರಿಸಿ ಪಾತಾಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ತಪಸ್ಸು ಮಾಡುತ್ತಿದ್ದ ಕಪಿಲ ಮಹರ್ಷಿಯ ಬಳಿ ಬಿಟ್ಟನಂತೆ. ಯಜ್ಞದ ಕುದುರೆಯನ್ನು ಹುಡುಕುತ್ತಾ ಬಂದ ಸಗರಪುತ್ರರು ಕುದುರೆಯನ್ನು ನೋಡಿ ಕಪಿಲ ಮಹರ್ಷಿಯೇ ಅದನ್ನು ಕದ್ದಿರಬೇಕೆಂದು ಊಹಿಸಿ ಅವನ ತಪಸ್ಸಿಗೆ ಭಂಗವನ್ನು ತಂದರು. ಅದರಿಂದ ಕ್ಷುದ್ರನಾದ ಕಪಿಲ ಮಹರ್ಷಿ ಶಾಪಕೊಟ್ಟು ಅವರೆಲ್ಲರೂ ಬೂದಿಯಾಗುವಂತೆ ಮಾಡಿದನು. ಹಾಗೆ ಸುಟ್ಟು ಹೋದರೆ ಸ್ವರ್ಗವೂ ಇಲ್ಲದೆ ಪುನರ್ಜನ್ಮವೂ ಇಲ್ಲದೆ ಸಗರಪುತ್ರರು ನರಳುವಂತೆ ಆಯಿತು. ಆ ದುರ್ದೆಸೆಯಿಂದ ಹೊರಗೆ ಬರಬೇಕಾದರೆ ಅವರ ಬೂದಿಯ ಮೇಲೆ ಗಂಗೆಯ ನೀರು ಹರಿಯಬೇಕು ಎಂದು ತಿಳಿದುಕೊಂಡ ಸಗರನಾಗಲಿ, ಅವನ ಮಕ್ಕಳಾಗಲಿ ಏನೂ ಮಾಡಲಾಗಲಿಲ್ಲ. ಅವರ ವಂಶದಲ್ಲಿ ಹುಟ್ಟಿದ ಭಗೀರಥನು ತಪಸ್ಸಿನಿಂದ ಗಂಗೆಯನ್ನೂ ಶಿವನನ್ನೂ ಒಲಿಸಿಕೊಂಡು ಗಂಗೆಯನ್ನು ಭೂಲೋಕಕ್ಕೆ ತಂದನು. ಅವನ ವಂಶಜರಿಗೆ ಸದ್ಗತಿಯು ದೊರಕಿತು. ಗಂಗೆ ತನ್ನ ಮಹಿಮೆಯಿಂದ ಲೋಕದ ಪಾಪವನ್ನು ತೊಳೆಯುತ್ತಿದ್ದಾಳೆ. ಇದು ವಾಲ್ಮೀಕಿ ಹೇಳಿರುವ ಗಂಗಾವತರಣದ ವೃತ್ತಾಂತ.

ಮಹಾಭಾರತದಲ್ಲೂ ಗಂಗೆಯ ಪಾತ್ರವಿದೆ. ಸಂತನು ಮಹಾರಾಜನ ಪತ್ನಿಯಾಗಿ ಗಂಗೆ ದೇವವ್ರತನಿಗೆ ಜನ್ಮ ಕೊಡುತ್ತಾಳೆ. ಆ ದೇವವ್ರತನೇ ಶಾಶ್ವತ ಬ್ರಹ್ಮಚರ್ಯದ ಪ್ರತಿಜ್ಞೆಯನ್ನು ಮಾಡಿ ಭೀಷ್ಮ ಎಂಬ ಹೆಸರನ್ನು ಪಡೆಯುತ್ತಾನೆ.

ಯಮುನಾ ನದೀ : ಯಮುನೆ ಸೂರ್ಯನ ಮಗಳು, ಯಮನ ಸೋದರಿ. ಯಮ, ಯಮುನೆ ಸೂರ್ಯನಿಂದ ಸಂಜ್ಞಾದೇವಿಯಲ್ಲಿ ಹುಟ್ಟಿದ ಅವಳಿ ಮಕ್ಕಳಂತೆ. ಗಂಗೆಯದು ಶುಭ್ರ ಶ್ವೇತವರ್ಣವಾದರೆ ಯಮುನೆಯದು ಕಪ್ಪು ಬಣ್ಣ. ಪ್ರಯಾಗವೆಂಬ ಪವಿತ್ರ ಸ್ಥಳದಲ್ಲಿ ಗಂಗಾಯಮುನಾ ಸಂಗಮ. ಅವುಗಳೊಡನೆ



ಗುಪ್ತಗಾಮಿನಿ ಸರಸ್ವತಿಯೂ ಸೇರಿ ತ್ರಿವೇಣೀ ಸಂಗಮ ಎಂಬುದು ಭಕ್ತರ ನಂಬಿಕೆ. ಯಮುನಾನದಿಯ ದಡದಲ್ಲಿಯೇ ಪಾಂಡವರು ಇಂದ್ರಪ್ರಸ್ಥವನ್ನು ಕಟ್ಟಿದರಂತೆ. ಅದೇ ಈಗ ದೆಹಲಿಯಾಗಿದೆ. ಯಮುನೆಯ ದಡದಲ್ಲೇ ಮಥುರಾನಗರವೂ ಇದೆ. ರಾಧೆಯೊಡನೆ ಕೃಷ್ಣನು ವಿಹರಿಸಿದುದು ಯಮುನಾ ತೀರದಲ್ಲಿ. ಬಳಿಯಲ್ಲೇ ಬೃಂದಾವನವೂ ಇದೆ. ಶ್ರೀ ಕೃಷ್ಣನ ಜನ್ಮ ವಾದುದು ಮಥುರೆಯಲ್ಲಿ ಅವನು ಕಂಸನನ್ನು ಕೊಂದದ್ದೂ ಅಲ್ಲೇ. ಹೀಗೆ ಕೃಷ್ಣನಿಗೂ ಮಥುರೆಗೂ ನಿಕಟ ಸಂಬಂಧ. ಕೃಷ್ಣ ಭಕ್ತರಿಗೆ ಯಮುನೆ ಅತ್ಯಂತ ಪ್ರಿಯವಾದ ನದಿ.

ಗೋದಾವರೀ : ಮಹಾರಾಷ್ಟ್ರದಲ್ಲಿ ಹುಟ್ಟಿ ಆಂಧ್ರ ಪ್ರದೇಶದಲ್ಲಿ ಹರಿದು ಸಮುದ್ರವನ್ನು ಸೇರುವ ಗೋದಾವರಿ ದಕ್ಷಿಣ ದೇಶದ ಗಂಗೆ ಎಂಬ ಖ್ಯಾತಿ ಇದೆ. ವಾಲ್ಮೀಕಿಯ ರಾಮಾಯಣದಲ್ಲಿ ಹೇಳಿರುವಂತೆ, ಸೀತಾರಾಮ ಲಕ್ಷ್ಮಣರು ಗೋದಾವರಿಯ ದಡದ ಮೇಲೆ ಪರ್ಣಶಾಲೆಯನ್ನು ಕಟ್ಟಿಕೊಂಡಿದ್ದರು. ಸನ್ಯಾಸಿಯ ವೇಷದಲ್ಲಿ ಬಂದ ರಾವಣನು ಸೀತೆಯನ್ನು ಅಪಹರಿಸಿದುದು ಇಲ್ಲೇ. ಚಿನ್ನದ ಜಿಂಕೆಯ ರೂಪದಲ್ಲಿ ಬಂದು ವಂಚನೆಯನ್ನು ಮಾಡಿದ ಮಾರೀಚನನ್ನು ರಾಮನು ಕೊಂದದ್ದೂ ಇಲ್ಲೇ. ಗೋದಾವರಿಯ ತೀರದಲ್ಲಿ ರುವ ನಾಸಿಕ್ ಎಂಬ ಸ್ಥಳಕ್ಕೆ ಆ ಹೆಸರು ಬರಲು ಶೂರ್ಪನಕಿಯ ನಾಸಿಕವನ್ನು ಅಲ್ಲಿ ಕತ್ತರಿಸಿದುದೇ ಕಾರಣವಿರಬಹುದೆ?

ಗೋದಾವರಿಯ ದಡದ ಸಮೀಪದಲ್ಲಿರುವ ಭದ್ರಾಚಲಂನಲ್ಲಿರುವ ಸೀತಾ ರಾಮರ ದೇವಾಲಯವೂ ವಿಶ್ವಪ್ರಸಿದ್ಧವಾಗಿದೆ.

ಸರಸ್ವತೀ ನದಿ : ವೇದ ಕಾಲದಲ್ಲಿ ಸರಸ್ವತೀ ನದಿಯು ದೊಡ್ಡದಾಗಿ ಹರಿಯುತ್ತಿತ್ತು. ಋಗ್ವೇದದಲ್ಲಿ ಸರಸ್ವತೀ ನದಿಯ ವೈಭವವನ್ನು ವರ್ಣಿಸಲು ಹಲವು ಸೂಕ್ತಗಳೇ ಮೀಸಲಾಗಿವೆ. ಅಂಬಿತಮೇ ನದೀತಮೇ ಸರಸ್ವತಿ ಎಂದು ಹಾಡಿ ಹೊಗಳಿರುವ ಋಷಿಗಳು ಸರಸ್ವತೀ ನದಿಯೇ ತಮ್ಮ ಶ್ರೇಷ್ಠ ತಾಯಿ, ಶ್ರೇಷ್ಠ ನದಿ ಎಂದು ಹೇಳಿದ್ದಾರೆ. ಆಮೇಲೆ ಈ ನದಿಯನ್ನು ವಿದ್ಯಾಧಿದೇವತೆಯೊಡನೆ ಸಮೀಕರಿಸಲಾಗಿದೆ.

ಇಂದು ಸರಸ್ವತೀ ನದಿ ಹರಿಯುತ್ತಿಲ್ಲ. ಭೂಕಂಪ ಮುಂತಾದ ಕಾರಣಗಳಿಂದ ವೇದಕಾಲದ ಆ ನದಿ ಬತ್ತಿ ಹೋಗಿ ಅದೃಶ್ಯವಾಗಿದೆ. ಗುಪ್ತಗಾಮಿನಿಯಾಗಿ ಹರಿಯುತ್ತಿದ್ದಾಳೆ ಎಂದು ಶ್ರದ್ಧಾಳುಗಳ ನಂಬಿಕೆ. ಹಿಂದೆ ಸರಸ್ವತೀ ಎಲ್ಲಿ ಹರಿಯುತ್ತಿದ್ದಳೆಂಬುದನ್ನು ಮಾನವನೇ ಆಕಾಶಕ್ಕೆ ಕಳುಹಿಸಿರುವ ಉಪಗ್ರಹ (Satellite) ಗಳಿಂದ ವಿಜ್ಞಾನಿಗಳು ಗುರುತಿಸಿದ್ದಾರೆ.

ನರ್ಮದಾ ನದೀ : ನರ್ಮ ಎಂದರೆ ಪರಮ ಸುಖ–ನರ್ಮದಾತೀತಿ ನರ್ಮದಾ. ಎಲ್ಲರಿಗೂ ಸುಖವನ್ನು ತರುವವಳು ನರ್ಮದಾ. ಇದು ಮಧ್ಯ ಪ್ರದೇಶದಲ್ಲಿ ಹುಟ್ಟಿ ಗುಜರಾತಿನಲ್ಲೂ ಹರಿದು ಪಶ್ಚಿಮ ಸಮುದ್ರವನ್ನು ಸೇರುತ್ತದೆ. ಇದಕ್ಕೆ ಅಡ್ಡವಾಗಿ ದೊಡ್ಡ ಅಣೆಕಟ್ಟನ್ನು ಕಟ್ಟಿ ಸಾವಿರಾರು ಎಕರೆಗಳ ಕೃಷಿಗೆ ನೀರನ್ನು ಒದಗಿಸಲಾಗುತ್ತಿದೆ. ನರ್ಮದಾ ಪರಿಕ್ರಮ ಎಂಬ ಪವಿತ್ರ ಯಾತ್ರೆಯನ್ನು ಇಂದಿಗೂ ಶ್ರದ್ಧಾಳುಗಳು ಕೈಗೊಳ್ಳುತ್ತಾರೆ. ನರ್ಮದೆಯು ಹುಟ್ಟುವ ಸ್ಥಳದಿಂದ ಹೊರಟು ಕಾಲು ನಡಿಗೆಯಿಂದ ಅದು ಸಮುದ್ರವನ್ನು ಸೇರುವ ಪ್ರದೇಶವನ್ನು ತಲುಪಿ, ಅದನ್ನು ದಾಟಿ ಮತ್ತೆ ಅಲ್ಲಿಂದ ಹೊರಟು ನರ್ಮದೆ ಹುಟ್ಟುವ ಜಾಗವನ್ನು ತಲುಪಿ ಮಾಡುವ ಯಾತ್ರೆ ನರ್ಮದಾ ಪರಿಕ್ರಮ. ಇದಕ್ಕೆ ಎರಡು ವರ್ಷಗಳ ಕಾಲ ಬೇಕಾಗುತ್ತದೆ. ನರ್ಮದಾ ನದಿಯ ಇನ್ನೊಂದು ಹೆಸರು ರೇವಾ.

ಸಿಂಧೂ ನದಿ : ಹಿಮಾಲಯದಲ್ಲಿ ಹುಟ್ಟುವ ಈ ನದಿಯು ನಮ್ಮ ದೇಶಕ್ಕೆ ಇಂಡಿಯಾ ಎಂಬ ಹೆಸರು ಬರಲು ಮತ್ತು ಹಿಂದೂ ಧರ್ಮ ಮುಂತಾದ ಶಬ್ದಗಳು ಹುಟ್ಟಲು ಕಾರಣ. ಪಾಶ್ಚಾತ್ಯರ ಉಚ್ಚಾರಣೆಯಲ್ಲಿ ಸಿಂಧೂ ಎಂಬ ಪದವೇ ಹಿಂದೂ ಆಯಿತು. ನದಿಯನ್ನು ಇಂಡಸ್ ಎಂದು ಅವರು ಕರೆದರು. ಆ ನದಿಗೆ ಪೂರ್ವ ದಿಕ್ಕಿನಲ್ಲಿದ್ದ ದೇಶ ಇಂಡಿಯಾ ಆಯಿತು. ಈ ನದಿಗೆ ಹಲವು ಉಪನದಿಗಳಿವೆ. ಈಗ ಈ ನದಿಯು ಹರಿಯುತ್ತಿರುವ ಪ್ರದೇಶವು ಪಾಕಿಸ್ಥಾನವಾಗಿದೆ. ಹಿಂದೆ ಸಾಂಸ್ಕೃತಿಕವಾಗಿ ಎಲ್ಲವೂ ಒಂದಾಗಿದ್ದು ಭರತವರ್ಷವಾಗಿತ್ತು. ಈಗಲೂ ವೇದ ಮಂತ್ರಗಳಲ್ಲಿ ಪೂಜೆಯಲ್ಲಿ ಸಿಂಧೂ ನದಿಯನ್ನು ಸ್ಮರಿಸುತ್ತೇವೆ.

ಕಾವೇರೀ ನದೀ : ಕರ್ನಾಟಕ ರಾಜ್ಯದ ಕೊಡಗಿನಲ್ಲಿ ಹುಟ್ಟಿ ಮಂಡ್ಯ, ಮೈಸೂರು, ಆಮೇಲೆ ತಮಿಳುನಾಡಿನಲ್ಲಿ ಹರಿದು ಪೂರ್ವ ಸಮುದ್ರವನ್ನು ಸೇರುವ ಪುಣ್ಯ ನದಿ ಕಾವೇರಿ.

ಕೊಡಗು ಜಿಲ್ಲೆಯ ಭಾಗಮಂಡಲದ ಬಳಿ ಇರುವ ತಲಕಾವೇರಿ ಎಂಬ ಸ್ಥಳದಲ್ಲಿ ಕಾವೇರಿ ಉದ್ಭವಿಸುತ್ತಾಳೆ. ತಮಿಳುನಾಡಿನಲ್ಲಿ ಕಾವೇರಿಯು ಸಮುದ್ರವನ್ನು ಸೇರುವ ಸ್ಥಳ ಕಾವೇರಿ ಪತ್ತನಂ ಎಂದೇ ಪ್ರಸಿದ್ಧವಾಗಿದೆ. ಈ ನದಿಯು ಹರಿಯುವಾಗ ಮಧ್ಯೆ ಕವಲಾಗಿ ಮೂರು ದ್ವೀಪಗಳನ್ನು ಸೃಷ್ಟಿಸುತ್ತದೆ. ಆ ಮೂರು ಪವಿತ್ರ ಸ್ಥಳಗಳಲ್ಲಿ ರಂಗನಾಥ ಸ್ವಾಮಿಯ ದೇವಾಲಯಗಳಿವೆ. ಶ್ರೀರಂಗಪಟ್ಟಣ, ಶಿವನಸಮುದ್ರದ ಬಳಿ ಇರುವ ಮಧ್ಯರಂಗ, ಶ್ರೀರಂಗಮ್ ಎಂಬವು ಈ ಮೂರೂ ಕ್ಷೇತ್ರಗಳೆಂದು ಪ್ರಸಿದ್ಧ. ಭಕ್ತರು ಒಂದೇ ದಿನ ಮೂವರು ರಂಗನಾಥರನ್ನು ದರ್ಶನ ಮಾಡಿದರೆ ಅನಂತ ಪುಣ್ಯಕ್ಕೆ ಭಾಜನರಾಗುತ್ತಾರೆ ಎಂಬ ನಂಬಿಕೆಯಿದೆ. ಕಪಿಲಾ ನದಿಯು ಕಾವೇರಿಯೊಡನೆ ಸೇರಿಕೊಳ್ಳುವ ಸ್ಥಾನವನ್ನು ತಿರುಮಕೂಡಲು ನರಸೀಪುರವೆಂದು ಕರೆಯುತ್ತಾರೆ. ಇಲ್ಲಿರುವ ಗುಂಜಾ ನರಸಿಂಹ ಸ್ವಾಮಿಯ ದೇವಾಲಯ ಪುರಾಣ ಪ್ರಸಿದ್ಧ.

ಕವೇರ ಎಂಬ ರಾಜನ ಮಗಳಾದ್ದರಿಂದ ಕಾವೇರೀ ಎಂಬ ಹೆಸರು ಅಗಸ್ತ್ಯ ಮಹರ್ಷಿಗಳ ಕಮಂಡಲುವಿನಲ್ಲಿದ್ದ ನೀರೇ ಹರಿದು ಈ ನದಿಯಾಯಿತು ಎಂಬ ಪ್ರತೀತಿಯೂ ಇದೆ. ಇಂದು ಕಾವೇರಿಯೇ ಮೈಸೂರು, ಬೆಂಗಳೂರು ಮುಂತಾದ ಅನೇಕ ನಗರಗಳಿಗೆ ನೀರನ್ನು ಉಣಿಸುತ್ತಿರುವ ತಾಯಿ. ಕೃಷ್ಣರಾಜ ಸಾಗರ, ಮೆಟ್ಟೂರು ಅಣೆಕಟ್ಟು ಸಾವಿರಾರು ಎಕರೆ ಭೂಮಿಯ ಕೃಷಿಗೆ ಆಧಾರವಾಗಿವೆ. ಇಂತಹ ಭೂಮಿಯನ್ನು ಸಂಸ್ಕೃತದಲ್ಲಿ ನದೀ ಮಾತೃಕಾ ಎಂದು ಕರೆಯುತ್ತಾರೆ. ಅಲ್ಲಿರುವ ಜನರಿಗೆ ನದಿಯೇ ತಾಯಿ ಎಂದು ಆ ಮಾತಿನ ತಾತ್ಪರ್ಯ. ಅಂತಹ ನದಿಗಳನ್ನು ಶುದ್ಧವಾಗಿಟ್ಟುಕೊಳ್ಳುವುದು ನಮ್ಮ ಕರ್ತವ್ಯ. ಕೈಗಾರೀಕರಣದ ಹೆಸರಿನಲ್ಲಿ ಅವನ್ನು ಮಲಿನಗೊಳಿಸಿದರೆ ನಾವೇ ತಾಯಿಗೆ ವಿಷ ವನ್ನುಣಿಸಿದಂತೆ. ನದಿಗಳಿಗೆ ತ್ಯಾಜ್ಯವನ್ನು ಬಿಡದೆ ಅವುಗಳ ಪವಿತ್ರತೆಯನ್ನು ಕಾಪಾಡುವ ಪ್ರತಿಜ್ಞೆ ಮಾಡೋಣ.

ಸಿದ್ದರಾಮಯ್ಯ ದಾಖಲೆ; ವಿಶೇಷ ಪೂಜೆ



ಮುಖ್ಯಮಂತ್ರಿ ಆಗಿ 2793 ದಿನ ಪೂರೈಸಿದ ಸಿದ್ದರಾಮಯ್ಯನವರ ಶ್ರೇಯಸಿಗೆ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ವತಿಯಿಂದ ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಅವರ ಹೆಸರಿನಲ್ಲಿ ಪೂಜೆ ಸಲ್ಲಿಸಿ, ಈಡುಗಾಯಿ ಒಡೆಯಲಾಯಿತು. ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಸಂಚಾಲಕ ಲಕ್ಷ್ಮಿ ನಾರಾಯಣ್, ಪ್ರಧಾನ ಕಾರ್ಯದರ್ಶಿ ವಿನೋದ ಉಪ್ಪಾರ್, ಕಾರ್ಯದರ್ಶಿಗಳಾದ ಮಹೇಶ್, ರವಿ ಕುಂಬಾರ್, ಎಲ್ ರೂಪ, ರಾಜ್ಯ ಕಾರ್ಯದರ್ಶಿ ರವಿಕುಮಾರ್, ರೆಡ್ಡಿ, ರಾಜು ರೆಡ್ಡಿ, ಭಾಗ್ಯ, ವನಜ, ಸೌಮ್ಯ ಉಪಸ್ಥಿತರಿದ್ದರು.

ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ಸೀಟುಗಳಿಗೆ ನೇರ ದಾಖಲಾತಿ

ಮೈಸೂರು: 2025–26ನೇ ಸಾಲಿನಲ್ಲಿ ಕೆಇಎ ಮೂಲಕ ಅಂತಿಮ ಸುತ್ತಿನ ಸೀಟು ಹಂಚಿಕೆ ನಂತರ ಸರ್ಕಾರಿ ಕಾಲೇಜುಗಳಲ್ಲಿ ಉಳಿದಿರುವ 186 ಬಿ.ಎಸ್ಸಿ ಅಲೈಡ್ ಹೆಲ್ತ್ ಸೈನ್ಸ್ ಸೀಟುಗಳನ್ನು ಭರ್ತಿ ಮಾಡಲು ಜ.8ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಅರ್ಹ ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಕೆ.ಇ.ಎ ವತಿಯಿಂದ ಹಂಚಿಕೆಯಾಗದೆ ಉಳಿದಿರುವ ಸೀಟುಗಳನ್ನು ನೇರ ದಾಖಲಾತಿ ಮಾಡಲಾಗುವುದು. ಈ ಸಂಸ್ಥೆಯಲ್ಲಿ ಬಿಎಸ್ಸಿ ಅನಾಸ್ತೇಷಿಯಾ ಮತ್ತು ಆಪರೇಷನ್ ಥಿಯೇಟರ್ ಟೆಕ್ನಾಲಜಿ–20, ಬಿಎಸ್ಸಿ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ–22, ಬಿಎಸ್ಸಿ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ–21, ಬಿಎಸ್ಸಿ ರೀನಲ್ ಡಯಾಲಿಸೀಸ್ ಟೆಕ್ನಾಲಜಿ–20, ಬಿಎಸ್ಸಿ ಎಮರ್ಜೆನ್ಸಿ ಮತ್ತು ಟ್ರಾಮಾಕೇರ್ ಟೆಕ್ನಾಲಜಿ–20, ಬಿಎಸ್ಸಿ ಕಾರ್ಡಿಯಾಕ್ ಕೇರ್ ಟೆಕ್ನಾಲಜಿ–20, ಬಿಎಸ್ಸಿ ನ್ಯೂರೋ ಸೈನ್ಸ್ ಟೆಕ್ನಾಲಜಿ–20, ಬಿಎಸ್ಸಿ ಆಪ್ಟಮೆಟ್ರಿ–32, ಬಿಎಸ್ಸಿ ರೆಸ್ಪಿರೇಟರಿ ಕೇರ್ ಟೆಕ್ನಾಲಜಿ–21 ಕೋರ್ಸ್‌ಗಳ ಒಟ್ಟು 186 ಸೀಟುಗಳು ಖಾಲಿ ಇರುತ್ತವೆ ಎಂದು ಪ್ರಕಟಣೆ ತಿಳಿಸಿವೆ.

ಹಳೆ ಪಿಂಚಣಿಯೂ ಸೇರಿ ನಾನಾ ಬೇಡಿಕೆ ಈಡೇರಿಕೆಗಾಗಿ ಶಿಕ್ಷಕರು ಕಪ್ಪುಪಟ್ಟಿ ಧರಿಸಿ ಬೋಧನೆ

ಮೈಸೂರು,ಜ.6(ಎಸ್‌ಪಿಎನ್)– ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ರದ್ದುಗೊಳಿಸಿ, ಹಳೆ ಪಿಂಚಣಿ ಯೋಜನೆ(ಒಪಿಎಸ್)ಮರು ಜಾರಿಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರಾಥಮಿಕ ಶಾಲಾ ಶಿಕ್ಷಕರು ಜ.8ರಂದು ಕಪ್ಪುಪಟ್ಟಿ ಧರಿಸಿ ಪಾಠ ಮಾಡಲಿದ್ದಾರೆ.

ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಸೇವಾನಿರತರಿಗೂ ಕಡ್ಡಾಯಗೊಳಿಸಿರುವ ಸುಪ್ರೀಂಕೋರ್ಟ್ ಆದೇಶ ಶಿಕ್ಷಕರಿಗೆ ನೋವು ತರಿಸಿದೆ. ಈ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕು. ಟಿಇಟಿ ಕಡ್ಡಾಯ ಮಾಡಬಾರದು. ಗುತ್ತಿಗೆ ಆಧಾರದ ನೇಮಕಾತಿಗಳನ್ನು ಕೈಬಿಟ್ಟು ಕಾಯಂ ನೇಮಕಕ್ಕೆ ಆದ್ಯತೆ ನೀಡಬೇಕು.

ದೇಶದ ಎಲ್ಲ ಶಿಕ್ಷಕರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಕೇಂದ್ರದ ವೇತನವನ್ನು ರಾಜ್ಯದ ಶಿಕ್ಷಕರಿಗೂ ಅನ್ವಯಿಸಬೇಕು ಎಂಬ ಬೇಡಿಕೆ ಸೇರಿದಂತೆ ಇತರೆ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಒಂದು ದಿನದ ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಂಡಿದ್ದು, ಅಖಿಲ ಭಾರತ ಶಿಕ್ಷಕರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆಯ ಮೇರೆಗೆ ಅಂದು ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಯ ಶಿಕ್ಷಕರು ಕಪ್ಪು ಪಟ್ಟಿ ಧರಿಸಿ ಶಾಲೆಗೆ ಹಾಜರಾಗಲಿದ್ದಾರೆ.

ಮೈಸೂರಿನ ಆರ್‌ಐಇಗೂ ಬಾಂಬ್ ಬೆದರಿಕೆ!

ಮೈಸೂರು, ಜ.6– ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಪ್ರಾದೇಶಿಕ ಶಿಕ್ಷಣ ಸಂಸ್ಥೆ(ಆರ್‌ಐಇ)ಗೆ ಬಾಂಬ್ ಇಟ್ಟಿರುವುದಾಗಿ ಸೋಮವಾರ ಬೆದರಿಕೆ ಹಾಕಿದ್ದು ಇಂದು ಬೆಳಕಿಗೆ ಬಂದಿದೆ.

ಈ ಸಂಬಂಧ ಪ್ರಾದೇಶಿಕ ಶಿಕ್ಷಣ ಸಂಸ್ಥೆ(ಆರ್‌ಐಇ) ಪ್ರಾಂಶುಪಾಲ ಪ್ರದ್ಯುಮ್ನ ಕುಮಾರ್ ಸೇಥಿ ಅವರು ನೀಡಿ ರುವ ದೂರಿನನ್ವಯ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸೋಮವಾರ(ಜ.5) ಬೆಳಗ್ಗೆ 10.17ಕ್ಕೆ ಮೊಹಮ್ಮದ್ ವಿಕ್ರಮ್ ರಾಜಗುರು ಹೆಸರಿನಲ್ಲಿ ಬಂದಿದ್ದ ಮೇಲ್‌ನಲ್ಲಿ ಪತ್ರವೊಂದನ್ನು ಅಟ್ಯಾಚ್ ಮಾಡಲಾಗಿತ್ತು. ಅದರಲ್ಲಿ 'ತಮಿಳುನಾಡಿನಲ್ಲಿ ನಡೆದ ಜಾಕ್ಟೋ– ಜಿಂಯೋ ಪ್ರತಿಭಟನೆ ಹಿನ್ನೆಲೆಯಲ್ಲಿ ಸ್ಥಳೀಯ ಸಮಸ್ಯೆಗಳಿಂದ ಬೇರೆಡೆ ಗಮನ ಸೆಳೆಯಲು ನಿಮ್ಮ ಮೈಸೂರಿನ ಶಾಲೆಯತ್ತ ಗುರಿ ಮಾಡಲಾಗಿದೆ. ಆದ್ದರಿಂದ ಕಾಶ್ಮೀರದ ಐಎಸ್‌ಕೆಪಿ ಸದಸ್ಯರೊಂದಿಗೆ ಸೇರಿ ಮಾಜಿ ಎಲ್‌ಟಿಟಿಇ ಸದಸ್ಯರು ಇಂದು ನಿಮ್ಮ ಶಾಲಾ ಶಾಖೆಯನ್ನು ಗುರಿಯಾಗಿಸಿಕೊಂಡಿದ್ದಾರೆ. ಅಮೋನಿಯಂ ನೈಟ್ರೇಟ್ ಬಳಸಿ ತಯಾರಿಸಿದ 3 ಆರ್‌ಡಿಎಕ್ಸ್ ಐಇಡಿಗಳನ್ನು ಈಗಾಗಲೇ ಶಾಲಾ ಕಟ್ಟಡದ ನಿರ್ಣಾಯಕ ಸ್ಥಳಗಳಲ್ಲಿ ಇರಿಸಲಾಗಿದೆ. ಓರ್ವ ಇಲ್ಲ ಇಬ್ಬರು ಸದಸ್ಯರು ಊಟದ ಸಮಯದಲ್ಲಿ ಶಾಲೆಯ ನಿಕಟ ಸಂಪರ್ಕಕ್ಕೆ ಬರುತ್ತಾರೆ. ರಿಮೋಟ್ ಕಂಟ್ರೋಲ್ ಟ್ರಿಗ್ಗರ್‌ಗಳನ್ನು ಹೊತ್ತು ಶಾಲಾ ಆವರಣದಿಂದ 100 ಅಡಿಗಳ ಒಳಗೆ ಬಂದಾಗ ಐಇಡಿಗಳು ಸ್ವಯಂಚಾಲಿತವಾಗಿ ಸ್ಫೋಟಗೊಳ್ಳುತ್ತವೆ. ವಿಫಲವಾದರೆ ಸದಸ್ಯರು ಸ್ವತಃ ಆವರಣದೊಳಗೆ ಬಂದು ಶ್ರೀಲಂಕಾದ ಈಸ್ಟರ್ ಕಾರ್ಯಾಚರಣೆಯಂತೆಯೇ ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಜೊತೆಗೆ ತಮ್ಮನ್ನೂ ಸ್ಫೋಟಿಸಿ ಕೊಳ್ಳುತ್ತಾರೆ. ದಯವಿಟ್ಟು ಅದಕ್ಕೂ ಮೊದಲು ಆವರಣವನ್ನು ತೆರವುಗೊಳಿಸಿ' ಎಂದು ಬರೆದಿದ್ದಾಗಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.



ಬಾಂಬ್ ಬೆದರಿಕೆ ಮೇಲ್ ಬಂದಿರುವ ಬಗ್ಗೆ ಮಾಹಿತಿ ತಿಳಿದ ಕೂಡಲೇ ಪೊಲೀಸರು ಪರಿಶೀಲನೆ ನಡೆಸಿದ್ದು, ಆ ವೇಳೆ ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ವಿವಿ ಮೊಹಲ್ಲಾ ಉಪ ವಿಭಾಗದ ಒಂಟಿಕೊಪ್ಪಲು ಹಾಗೂ



ಜಯಲಕ್ಷ್ಮಿಪುರಂ ಶಾಖಾ ವ್ಯಾಪ್ತಿಯ 11 ಕೆ.ವಿ ಯಾದವಗಿರಿ ವಿದ್ಯುತ್ ಮಾರ್ಗ ಮತ್ತು 11 ಕೆ.ವಿಜಯಲಕ್ಷ್ಮಿಪುರಂ ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜ.8ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಯಾದವಗಿರಿ, ವಿವೇಕಾನಂದ ಮುಖ್ಯರಸ್ತೆ, ಜಾವ ಸರ್ಕಲ್, ಸಂಕಲ್ಪ ಸೆಂಟ್ರಲ್ ಪಾರ್ಕ್, ವೈಷ್ಣವಿ ಸರೋವರ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಜಯಲಕ್ಷ್ಮಿಪುರಂ, ಬಿಎಸ್‌ಎನ್‌ಎಲ್ ಕಚೇರಿ, ಮಹಾಜನ ಕಾಲೇಜು, ಬಿಎಂಹೆಚ್ ಆಸ್ಪತ್ರೆ, ರಾಘವೇಂದ್ರಸ್ವಾಮಿ ಮಠ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನ ಚಾಮರಾಜ ಕ್ಷೇತ್ರದಿಂದ ಓಂ ಶಕ್ತಿ ಯಾತ್ರೆಗೆ ಪ್ರಯಾಣ

7 ಬಸ್ಸುಗಳಲ್ಲಿ ಹೊರಟ ಯಾತ್ರಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಶುಭ ಹಾರೈಕೆ



ಚಾಮರಾಜ ಕ್ಷೇತ್ರದಿಂದ ಓಂ ಶಕ್ತಿ ಯಾತ್ರೆಗೆ ಹೊರಟ ಯಾತ್ರಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಶುಭ ಹಾರೈಸಿ ಬೀಳ್ಕೊಟ್ಟರು.

ಮೈಸೂರು, ಜ.6(ಜಿಎ)–ಮೈಸೂರಿನ ಚಾಮರಾಜ ಕ್ಷೇತ್ರದಿಂದ ಓಂ ಶಕ್ತಿ ಯಾತ್ರೆಗೆ ಹೊರಟ ಯಾತ್ರಾರ್ಥಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಶುಭ ಹಾರೈಸಿ ಕಳುಹಿಸಿಕೊಟ್ಟರು. ಶಾಸಕ ಕೆ.ಹರೀಶ್ ಗೌಡ ನೇತೃತ್ವದಲ್ಲಿ ಚಾಮರಾಜ ಕ್ಷೇತ್ರದ ವಿವಿಧ ವಾರ್ಡ್‌ಗಳಿಂದ ಹಂತ ಹಂತವಾಗಿ ಮಹಿಳೆಯರು ಓಂ ಶಕ್ತಿ ಯಾತ್ರೆಗೆ ಬಸ್‌ಗಳ ಮೂಲಕ ತೆರಳುತ್ತಿದ್ದು, ಮೊದಲ ಹಂತದ ಯಾತ್ರೆಯ ಏಳು ಬಸ್‌ಗಳಿಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ವಿಶೇಷ ಪೂಜೆ ಸಲ್ಲಿಸಿ, ಯಾತ್ರೆ ಆರಂಭಿಸಿದರು.

ಕೆ.ಹರೀಶ್‌ಗೌಡ ಮಾತನಾಡಿ, ಎಲ್ಲರೂ ಕ್ಷೇಮವಾಗಿ ಹೋಗಿ ದೇವರ ದರ್ಶನ ಮಾಡಿಕೊಂಡು ಬನ್ನಿ. ಎಚ್ಚರಿಕೆಯಿಂದ ಪ್ರಯಾಣ ಮಾಡಿ. ದೇವರು ಎಲ್ಲರಿಗೂ ಒಳಿತು ಮಾಡಲಿ ಎಂದು ಶುಭ ಹಾರೈಸಿ ಮೈಸೂರಿನಿಂದ ಬೀಳ್ಕೊಟ್ಟರು.


ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಎಸ್.ಆರ್.ರವಿಕುಮಾರ್, ಜಗದೀಶ್, ಸುಶೀಲ ಮರೀಗೌಡ, ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಯೋಗೇಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಾದೇಶ್, ಮಹೇಶ್, ಮೋಹನ್, ವರದರಾಜು, ಕುಮುದಾ, ಕುಮಾರ್, ಸಂತೋಷ್, ಪ್ರದೀಪ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕೊಡವ ಅಂತರ–ಸಂಘ ಮಹಿಳಾ ಥ್ರೋಬಾಲ್ ಪಂದ್ಯಾವಳಿ ವಿಜೇತರು



ಮೈಸೂರಿನ ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್ ವತಿಯಿಂದ ಆಯೋಜಿಸಲಾಗಿದ್ದ ವಾರ್ಷಿಕ ಕೊಡವ ಅಂತರ–ಸಂಘ ಮಹಿಳಾ ಥ್ರೋಬಾಲ್ ಪಂದ್ಯಾವಳಿಯನ್ನು ಖ್ಯಾತ ಟ್ರಕ್ಕರ್ ಮತ್ತು ಕೊಡವ ವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಜಮ್ಮಡ ಪ್ರೀತ್ ಅಯ್ಯಣ್ಣ ಉದ್ಘಾಟಿಸಿದರು. ಪಂದ್ಯಾವಳಿಯಲ್ಲಿ ಒಟ್ಟು 9 ತಂಡಗಳು ಭಾಗವಹಿಸಿದ್ದು, ಅವುಗಳಲ್ಲಿ ಹೆಬ್ಬಾಳಿನ ಶ್ರೀ ಇಗ್ಗುತಪ್ಪ ಕ್ಷೇಮಾಭಿವೃದ್ಧಿ ಸಂಘ ವಿಜೇತರಾದರು. ವಿಜೇತ ತಂಡದೊಂದಿಗೆ ಮುಖ್ಯ ಅತಿಥಿ ಜಮ್ಮಡ ಪ್ರೀತ್ ಅಯ್ಯಣ್ಣ, ಕ್ಲಬ್ ಉಪಾಧ್ಯಕ್ಷ ಮಾಚಂಡ ಪ್ರಕಾಶ್ ಬೆಳ್ಳಿಯಪ್ಪ, ಕ್ಲಬ್ ವಿಶೇಷ ಅತಿಥಿ ಮತ್ತು ಪ್ರಾಯೋಜಕರಾದ ಕುಟ್ಟಿಮಾಡ ಡಿ.ಮುತ್ತಪ್ಪ, ಕೊಡವ ಸಮಾಜ ಮೈಸೂರು ಅಧ್ಯಕ್ಷ ಪೂಂಜಂಡ ಗಣಪತಿ, ಶ್ರೀ ಕಾವೇರಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಚೊಟ್ಟೆಂಗಡ ಚೆಂಗಪ್ಪ ಹಾಗೂ ಕ್ರೀಡಾ ಕ್ಲಬ್‌ನ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

2026ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ...




ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗ ರಾಜ್ಯ ಸಮಿತಿಯ 2026ನೇ ವರ್ಷದ ಕ್ಯಾಲೆಂಡರ್ ಅನ್ನು ಸಮಾಜ ಕಲ್ಯಾಣ ಸಚಿವ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಮ್ಮ ಮೈಸೂರಿನ ನಿವಾಸದಲ್ಲಿ ಬಿಡುಗಡೆಗೊಳಿಸಿದರು. ಈ ವೇಳೆ ಅಭಿಮಾನಿ ಬಳಗದ ಗೌರವಾಧ್ಯಕ್ಷ ಬನ್ನೂರು ಸ್ವಾಮಿ, ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ, ಕಾರ್ಯಾಧ್ಯಕ್ಷ ಕುರುಬೂರು ಡಾ.ಬಸವರಾಜು, ಉಪಾಧ್ಯಕ್ಷ ಕಡಕೊಳ ಭರತ್, ಪ್ರಧಾನ ಕಾರ್ಯದರ್ಶಿ ಬೆನಕನಹಳ್ಳಿ ನಾಗರಾಜ್, ಮಾಧ್ಯಮ ಸಲಹೆಗಾರ ಮಂಜುನಾಥ್ ಕೋಟೆ, ಕಾರ್ಯದರ್ಶಿ ಹರದನಹಳ್ಳಿ ಮಹೇಶ್, ನಿರ್ದೇಶಕರಾದ ಮಾವಿನಹಳ್ಳಿ ನಾಗೇಶ್, ಹುಲ್ಲಹಳ್ಳಿ ಬಾಬು, ಬೆನಕನಹಳ್ಳಿ ಹರೀಶ್, ಮೈಸೂರು ಜಿಲ್ಲಾಧ್ಯಕ್ಷ ಕಗ್ಗಲಿಪುರ ಮಧುಕುಮಾರ್, ಪದಾಧಿಕಾರಿಗಳಾದ ಸ್ವಾಮಿ, ರುದ್ರ ಉಪಸ್ಥಿತರಿದ್ದರು.

ಫೆ.1ಕ್ಕೆ ಕ್ರೈಸ್ಟ್ ಮೈಸೂರು ಮ್ಯಾರಥಾನ್

ಮೈಸೂರು, ಜ.6(ಎಂಟಿವೈ)– ನಶಾ ಮುಕ್ತ ಭಾರತ ಅಭಿಯಾನದ ಅಂಗವಾಗಿ ಮೈಸೂರಿನ ಕ್ರೈಸ್ಟ್ ಕಾಲೇಜು ಆವರಣದಿಂದ ಫೆ.1ರಂದು ಬೆಳಿಗ್ಗೆ 5.30ಕ್ಕೆ 'ಕ್ರೈಸ್ಟ್ ಮೈಸೂರು ಮ್ಯಾರಥಾನ್' ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ಸಂಯೋಜಕ ರಾಬಿನ್ ಶರತ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದಕ ವಸ್ತುಗಳ ಸೇವನೆಯಿಂದ ಯುವ ಜನರನ್ನು ರಕ್ಷಿಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಮ್ಯಾರಥಾನ್ ನಡೆಸಲಾಗುತ್ತಿದೆ. ಈ ಮ್ಯಾರಥಾನ್‌ನಲ್ಲಿ 15 ವರ್ಷ ಮೇಲ್ಪಟ್ಟ ಸ್ಪರ್ಧಿಗಳು ಪಾಲ್ಗೊಳ್ಳಬಹುದಾಗಿದೆ. ಮಹಿಳಾ ಹಾಗೂ ಪುರುಷರ ವಿಭಾಗದಲ್ಲಿ ಪ್ರತ್ಯೇಕವಾಗಿ 10.5 ಕಿ.ಮೀ, ಹಾಗೂ 5 ಕಿ.ಮೀ ಸ್ಪರ್ಧೆ ನಡೆಯಲಿದೆ. ಪ್ರಥಮ ಬಹುಮಾನ 10 ಸಾವಿರ ರೂ., ದ್ವಿತೀಯ ಬಹುಮಾನ 5 ಸಾವಿರ ರೂ., ಮೂರು, ನಾಲ್ಕು ಮತ್ತು ಐದನೇ ಸ್ಥಾನ ಪಡೆದವರಿಗೆ ತಲಾ 3 ಸಾವಿರ ರೂ. ನಗದು, ಪದಕ ಮತ್ತು ಪ್ರಮಾಣಪತ್ರ ನೀಡಲಾಗುವುದು ಎಂದರು. ಮ್ಯಾರಥಾನ್ ಕಾಲೇಜು ಆವರಣದಿಂದ ಆರಂಭವಾಗಿ ವಿವೇಕಾನಂದ ವೃತ್ತ, ರಾಮಕೃಷ್ಣ ಪರಮಹಂಸ ವೃತ್ತ ಮಾರ್ಗವಾಗಿ ಹೊರ ವರ್ತುಲ ರಸ್ತೆ, ದಟ್ಟಗಳ್ಳಿ ಮಾರ್ಗವಾಗಿ ಹೆಚ್.ಡಿ.ಕೋಟೆ ಜಂಕ್ಷನ್ ಮೂಲಕ ಕಾಲೇಜು ಆವರಣಕ್ಕೆ ತಲುಪಲಿದೆ. ಹೆಚ್ಚಿನ ಮಾಹಿತಿಗಾಗಿ 7795418898 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲ ಜಿಂಟೋ ಜೋಶ್, ಜಾನ್ಸನ್, ಕನ್ನಡ ಪ್ರಾಧ್ಯಾಪಕ ವೇದರಾಜ್ ಉಪಸ್ಥಿತರಿದ್ದರು.

ಬೇಬಿಕಲಾಗೆ ಪಿ.ಹೆಚ್.ಡಿ ಪದವಿ




ಮೈಸೂರು: ಬೇಬಿಕಲಾ ಅವರು ಡಾ.ಸಿ.ಎನ್.ಮನು ಅವರ ಮಾರ್ಗದರ್ಶನದಲ್ಲಿ ರಾಜ್ಯಶಾಸ್ತ್ರ ವಿಷಯದಲ್ಲಿ ಸಾದರಪಡಿಸಿದ 'ಭಾರತದ ಹೊಸ ಆಲೋಚನೆಗಳು–ಸ್ವಚ್ಛ ಭಾರತ ಅಭಿಯಾನ ಅನುಷ್ಠಾನದಲ್ಲಿ ಸ್ಥಳೀಯ ಸರ್ಕಾರಗಳು, ಮಂಡ್ಯ ಮತ್ತು ಮದ್ದೂರು ತಾಲೂಕುಗಳು– ಒಂದು ತೌಲನಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿ.ಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಬಗೆಹರಿಯದ ಸರ್ವರ್ ಸಮಸ್ಯೆ: ರೆವಿನ್ಯೂ ಆಸ್ತಿಗಳ 'ಬಿ' ಖಾತಾ ನೋಂದಣಿ ಪ್ರಕ್ರಿಯೆ ಸ್ಥಗಿತ

ಮೈಸೂರು, ಜ. 6 (ಆರ್‌ಕೆ)– ಹಲವು ದಿನಗಳಿಂದ ನಿರೀಕ್ಷೆಯಲ್ಲಿರುವ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮನೆ, ನಿವೇಶನಗಳ ಮಾಲೀಕರು ತಮ್ಮ ಸ್ವತ್ತುಗಳಿಗೆ 'ಬಿ' ಖಾತೆ ನೋಂದಣಿಯಾಗದ ಕಾರಣ ನಿರಾಶರಾಗಿದ್ದಾರೆ.

'ಇ ಸ್ವತ್ತು' ಮಾದರಿಯಲ್ಲಿ ಆಸ್ತಿಗಳಿಗೆ ಖಾತೆ ನೋಂದಣಿ ಕಡ್ಡಾಯ ಎಂದು ಸರ್ಕಾರ ಘೋಷಿಸಿದ ಬಳಿಕ ಕಳೆದ ಒಂದು ತಿಂಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೊಸ ತಂತ್ರಾಂಶಕ್ಕೆ ಚಾಲನೆ ನೀಡಿದ್ದರಾದರೂ, ಸರ್ವರ್ ಸಮಸ್ಯೆಯಿಂದಾಗಿ ಈವರೆವಿಗೂ ಇಲಾಖಾ ಪ್ರಕ್ರಿಯೆ ಆರಂಭವಾಗಲಿಲ್ಲ.

ಗ್ರಾಮ ಪಂಚಾಯ್ತಿ ವ್ಯಾಪ್ತಿಗಳಲ್ಲಿ ಭೂ ಪರಿವರ್ತನೆ ಮಾಡದೆ ನಕ್ಷೆ ಅನುಮೋದನೆ ಪಡೆಯದೇ ರಚಿಸಿದ ವಸತಿ ಬಡಾವಣೆಗಳ ನಿವೇಶನ, ಮನೆಗಳಿಗೆ 'ಬಿ' ಖಾತಾ ನೋಂದಣಿ ಮಾಡುವುದಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಕಟಿಸಿ, ಅದಕ್ಕಾಗಿ ಕಾವೇರಿ 2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದರು. ಅವರಲ್ಲಿ ಸಿಟಿಜನ್ ಲಾಗಿನ್, ಪಂಚಾಯ್ತಿ ಕಾರ್ಯದರ್ಶಿ, ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರಿಗೆ ಲಾಗಿನ್ ಒದಗಿಸಿ ಅನುಮೋದನೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಲಾಗಿತ್ತು.



ಸ್ವತ್ತಿನ ಮಾಲೀಕರು ಸಿಟಿಜನ್ ಲಾಗಿನ್‌ನಲ್ಲಿ ಇ–ಖಾತಾ ಕೋರಿ ಅರ್ಜಿ ಸಲ್ಲಿಸಿದಲ್ಲಿ ಅದನ್ನು ಅಧಿಕಾರಿಗಳು ತಮ್ಮ ಲಾಗಿನ್‌ನಲ್ಲಿ ಪರಿಶೀಲಿಸಿ ಅನುಮೋದನೆ ನೀಡಬೇಕು. ತಪ್ಪಿದಲ್ಲಿ 15 ದಿನಗಳ ನಂತರ ಆ ಆಸ್ತಿಗೆ ಇ ಖಾತಾ ನೋಂದಣಿಯಾಗಿ ಸ್ವಯಂ ಚಾಲಿತ ದಾಖಲಾತಿ ಸೃಜನವಾಗುತ್ತದೆ ಎಂದು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿತ್ತು. ಆದರೆ, ಸದರಿ ತಂತ್ರಾಂಶದಲ್ಲಿ ಕೆಲ ತಾಂತ್ರಿಕ ದೋಷಗಳಿದ್ದ ಕಾರಣ ಹಾಗೂ ಸರ್ವರ್ ಡೌನ್ ಆಗಿದ್ದರಿಂದ ಈವರೆವಿಗೂ ಅರ್ಜಿ ಸಲ್ಲಿಕೆ ಪ್ರಕ್ರಿಯೆಯೇ ಆರಂಭವಾಗದ ಪರಿಣಾಮ ರೆವಿನ್ಯೂ ಸ್ವರೂಪದ ಆಸ್ತಿ ಮಾಲೀಕರು ಪರದಾಡುವಂತಾಗಿದೆ.

ಸೇಲ್ ಡೀಡ್ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿದ್ದ ಆಸ್ತಿಗಳಿಗೆ ಮಾತ್ರ ಇ–ಸ್ವತ್ತಿನಡಿ 'ಬಿ' ಖಾತಾ ನೀಡುವ ಪ್ರಕ್ರಿಯೆಗೆ ಅವಕಾಶ ಕಲ್ಪಿಸಲಾಗಿತ್ತು. ತೆರಿಗೆ ಪಾವತಿ ರಶೀದಿ, ವಿದ್ಯುತ್ ಬಿಲ್, ಪಹಣಿ, ಇಸಿ ಹಾಗೂ ಆಸ್ತಿಗೆ ಸಂಬಂಧಿಸಿದ ಇತರ ದಾಖಲೆಗಳ ಜೆರಾಕ್ಸ್ ಪ್ರತಿಗಳೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರೆ ಇ ಖಾತಾ ನೀಡಲಾಗುತ್ತದೆ ಎಂದು ಸರ್ಕಾರ ಘೋಷಿಸಿತ್ತು.

ಇದೀಗ ಸಾಫ್ಟ್‌ವೇರ್ ಇನ್ನೂ ಕಾರ್ಯನಿರ್ವಹಿಸುತ್ತಿಲ್ಲ. ಹಾಗೂ ಸರ್ವರ್ ಲಭ್ಯವಾಗುತ್ತಿಲ್ಲವಾದ ಕಾರಣ ಉದ್ದೇಶ ಸಫಲವಾಗುತ್ತಿಲ್ಲ. ಅದರಿಂದಾಗಿ ಖಾತಾ ಪಡೆಯುವ ನಿರೀಕ್ಷೆಯಲ್ಲಿದ್ದವರಿಗೆ ನಿರಾಸೆಯಾಗಿದೆ.

ವಾರಾಂತ್ಯದಲ್ಲಿ ಪ್ರಕ್ರಿಯೆ ಆರಂಭ: ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಸಾಫ್ಟ್‌ವೇರ್ ಹೊಸದಾಗಿರುವುದರಿಂದ ಕೆಲ ಲೋಪದೋಷಗಳಿದ್ದು, ಸರ್ಕಾರದ ಮಟ್ಟದಲ್ಲಿ ಸರಿಪಡಿಸಲಾಗುತ್ತಿದೆ. ಈ ವಾರಾಂತ್ಯದಲ್ಲಿ ಇ –ಸ್ವತ್ತು ಪ್ರಕ್ರಿಯೆ ಆರಂಭವಾಗುವ ನಿರೀಕ್ಷೆಯಿದೆ ಎಂದರು.

ಮಲೇಷಿಯಾದ ಹಬ್ ಪೆನಾಂಗ್ ಕರ್ನಾಟಕದೊಂದಿಗೆ ಕ್ವಾಂಟಮ್ ತಂತ್ರಜ್ಞಾನ ಅಭಿವೃದ್ಧಿ ಸಹಭಾಗಿತ್ವಕ್ಕೆ ಆಸಕ್ತಿ

● ವಿಜ್ಞಾನ–ತಂತ್ರಜ್ಞಾನ ಸಚಿವ ಬೋಸರಾಜು ಮಾಹಿತಿ ● ಪೆನಾಂಗ್ ನಿಯೋಗದೊಂದಿಗೆ ಸಭೆ: ಸಂಶೋಧನಾ ಪರಿಸರ ವಿಸ್ತರಣೆ

ಬೆಂಗಳೂರು, ಜ.6(ಕೆಎಂಶಿ)– ಮಲೇಷಿಯಾದ ಪ್ರಮುಖ ಸೆಮಿ ಕಂಡಕ್ಟರ್ ಹಬ್ ಪೆನಾಂಗ್ ರಾಜ್ಯದ ಉನ್ನತ ಮಟ್ಟದ ನಿಯೋಗ ಕರ್ನಾಟಕದೊಂದಿಗೆ ಕ್ವಾಂಟಮ್ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಸಹಭಾಗಿತ್ವಕ್ಕೆ ಆಸಕ್ತಿ ವ್ಯಕ್ತಪಡಿಸಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಇಂದಿಲ್ಲಿ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಪೆನಾಂಗ್ ರಾಜ್ಯದ ಉಪಮುಖ್ಯಮಂತ್ರಿ ಜಗದೀಪ್ ಸಿಂಗ್ ದಿಯೋ ನೇತೃತ್ವದ ನಿಯೋಗದ ಜೊತೆಗಿನ ಸಭೆ ನಂತರ ಈ ವಿಷಯ ತಿಳಿಸಿದ ಸಚಿವರು, ಭೌಗೋಳಿಕವಾಗಿ ಪೆನಾಂಗ್ ಸಣ್ಣ ರಾಜ್ಯವಾಗಿದ್ದರೂ, ಜಾಗತಿಕ ಮಟ್ಟದ ಸೆಮಿಕಂಡಕ್ಟರ್ ಶಕ್ತಿಯಾಗಿ ಹೊರಹೊಮ್ಮಿದೆ. ಇದಕ್ಕೆ ಮುಖ್ಯ ಕಾರಣ ಅಲ್ಲಿರುವ ಬಲವಾದ ಉದ್ಯಮ ಮತ್ತು ಸಂಶೋಧನಾ ಸಹಭಾಗಿತ್ವ ಎಂದರು.

ಈ ಅಭಿವೃದ್ಧಿಯಲ್ಲಿ ಪೆನಾಂಗ್ ವಿಶ್ವವಿದ್ಯಾಲಯ ನಿರ್ಣಾಯಕ ಪಾತ್ರ ವಹಿಸಿದೆ. ಉದ್ಯಮಗಳಿಗೆ ನೇರ ಬೆಂಬಲ ನೀಡುವಂತಹ ಸಂಶೋಧನಾ ಪರಿಸರ ವ್ಯವಸ್ಥೆಯನ್ನು ವಿವಿ ನಿರ್ಮಿಸಿದೆ. ಇದೇ ಮಾದರಿಯನ್ನು ಕರ್ನಾಟಕ ಮತ್ತು ಪೆನಾಂಗ್ ನಡುವೆ ವಿಸ್ತರಿಸುವ ಅಗತ್ಯವಿದೆ.



ವಿಜ್ಞಾನ–ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ವಿಕಾಸಸೌಧದಲ್ಲಿ ಪೆನಾಂಗ್ ರಾಜ್ಯದ ಡಿಸಿಎಂ ಜಗದೀಪ್‌ಸಿಂಗ್ ದಿಯೋ ನಿಯೋಗದ ಜೊತೆ ಸಭೆ ನಡೆಸಿದರು.

ಸಣ್ಣ ನೀರಾವರಿ ಕ್ಷೇತ್ರದಲ್ಲಿ ಕರ್ನಾಟಕ ಸಾಧಿಸಿರುವ ಮೈಲಿಗಲ್ಲುಗಳನ್ನು ಪೆನಾಂಗ್ ಉಪಮುಖ್ಯಮಂತ್ರಿ ಜಗದೀಪ್ ಸಿಂಗ್ ದಿಯೋ ಅವರಿಗೆ ಪರಿಚಯಿಸಲಾಯಿತು. ಅದರಲ್ಲೂ ವಿಶೇಷವಾಗಿ 'ತ್ಯಾಜ್ಯದಿಂದ ಸಂಪತ್ತು' ಪರಿಕಲ್ಪನೆಯಡಿ ಜಾರಿಗೆ ತಂದಿರುವ ಕೆ.ಸಿ.ವ್ಯಾಲಿ (ಕೋರ ಮಂಗಲ –ಚಲ್ಲಘಟ್ಟ) ಮತ್ತು ಎಚ್.ಎನ್.ವ್ಯಾಲಿ (ಹೆಬ್ಬಾಳ–ನಾಗವಾರ) ಯೋಜನೆಗಳ ವಿವರ ನೀಡಿದರು.

ನಗರದ ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ, ಕೋಲಾರ ಮತ್ತು ಚಿಕ್ಕಬಳ್ಳಾಪುರದಂತಹ ಬರಪೀಡಿತ ಜಿಲ್ಲೆಗಳ ಕೆರೆಗಳಿಗೆ ತುಂಬಿಸುವ ಮೂಲಕ ಅಂತರ್ಜಲ ಮಟ್ಟ ಯಶಸ್ವಿಯಾಗಿ ಹೆಚ್ಚಿಸಲಾಗಿದೆ. ಇದು ಕೃಷಿ ಚಟುವಟಿಕೆಗಳಿಗೆ ಜೀವ ತುಂಬಿದೆ. ಕರ್ನಾಟಕ ಸರ್ಕಾರ ಯುವಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ರೂಪಿಸಿರುವ ಮಹತ್ವಾಕಾಂಕ್ಷೆಯ 'ಕ್ವಾಂಟಮ್ ಆಕ್ಷನ್ ಪ್ಲಾನ್'ನಲ್ಲಿ ಭಾಗಿಯಾಗಲು ಪೆನಾಂಗ್ ನಿಯೋಗ ಆಸಕ್ತಿ ತೋರಿದೆ. ಪೂರ್ವದ ಸಿಲಿಕಾನ್ ವ್ಯಾಲಿ ಎಂದೇ ಕರೆಯಲ್ಪಡುವ ಪೆನಾಂಗ್ ಜೊತೆಗಿನ ಸಹಭಾಗಿತ್ವಕ್ಕೆ ಕರ್ನಾಟಕ ಸರ್ಕಾರ ಮುಕ್ತವಾಗಿದೆ. ಬೆಂಗಳೂರು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಹಾಗೂ ಪೆನಾಂಗ್ ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಹೊಂದಿರುವ ಪರಿಣಿತಿಯ ಸಮ್ಮಿಲನದಿಂದ ವಿಫುಲ ಅವಕಾಶಗಳು ಸೃಷ್ಟಿಯಾಗಲಿವೆ ಎಂದರು.

ಆಧುನಿಕ ತಂತ್ರಜ್ಞಾನ ಬಳಸಿ ಆರೋಪಿ ಪತ್ತೆ ಮಾಡುವಂತೆ ಭಾಸ್ಕರ್ ಆಗ್ರಹ

ಮೈಸೂರು, ಜ.6(ಬಿಎಲ್‌ಯು)– ಮೈಸೂರು ನ್ಯಾಯಾಲಯಕ್ಕೆ ಹುಸಿ ಬಾಂಬ್ ಬೆದರಿಕೆ ಹಾಕಿರುವ ಆರೋಪಿಯನ್ನು ಆಧುನಿಕ ತಂತ್ರಜ್ಞಾನದ ಸೌಲಭ್ಯ ಬಳಸಿಕೊಂಡು ಪತ್ತೆ ಮಾಡಿ, ಕಠಿಣ ಶಿಕ್ಷೆ ವಿಧಿಸಬೇಕು ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಪೊಲೀಸ್ ಇಲಾಖೆಯನ್ನು ಆಗ್ರಹಿಸಿದ್ದಾರೆ. ಮೈಸೂರು ನ್ಯಾಯಾಲಯಕ್ಕೆ ಹುಸಿ ಬಾಂಬ್ ಕರೆ ಬರುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಇದರಿಂದ ನೂರಾರು ವಕೀಲರು ಭಯಭೀತರಾಗಿ ಕಲಾಪ ಬಿಟ್ಟು ಹೊರಗೆ ಬರಬೇಕಾದ ಪರಿಸ್ಥಿತಿ ಎದುರಾಯಿತು ಎಂದು ಹೇಳಿದ್ದಾರೆ. ತರುವಾಯ ಇದು ಹುಸಿ ಬಾಂಬ್ ಕರೆ ಎಂಬುದು ಸ್ಪಷ್ಟವಾಯಿತು. ಆದರೆ ಆಗಾಗೆ ಇಂತಹ ಬಾಂಬ್ ಕರೆಗಳು ಬರುತ್ತಿರುವುದು ಅಪಾಯಕಾರಿ ಎಂದು ಭಾಸ್ಕರ್ ಆತಂಕ ವ್ಯಕ್ತಪಡಿಸಿದ್ದಾರೆ.



ಎನ್.ಭಾಸ್ಕರ್

ಜ.8ಕ್ಕೆ ಮೈಸೂರಲ್ಲಿ ಬಾಬಾ ಸಾಹೇಬ್ ನಾಟಕದ 25ನೇ ಪ್ರದರ್ಶನ

ದೆಹಲಿ, ಮುಂಬೈನಲ್ಲೂ ಪ್ರದರ್ಶನಕ್ಕೆ ಸಿದ್ಧತೆ

ಮೈಸೂರು,ಜ.6(ಎಂಟಿವೈ)–ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜ.8ರಂದು ಕೊಡಗಿನ ರಂಗಭೂಮಿ ಟ್ರಸ್ಟ್ ವತಿಯಿಂದ ನಿಜ ಮಹಾತ್ಮ ಬಾಬಾಸಾಹೇಬ್ ನಾಟಕದ 25ನೇ ಪ್ರದರ್ಶನ ಆಯೋಜಿಸಲಾಗಿದೆ ಎಂದು ನಾಟಕ ರಚನೆಕಾರ ಹಾಗೂ ನಿರ್ದೇಶಕರಾದ ಅಡ್ಡಂಡ ಕಾರ್ಯಪ್ಪ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.8ರಂದು ಬೆಳಗ್ಗೆ 10.30ಕ್ಕೆ ಮಹಿಳೆಯರಿಗಾಗಿ ವಿಶೇಷ ಪ್ರದರ್ಶನ, ಸಂಜೆ 6ಕ್ಕೆ ಸಾರ್ವಜನಿಕರಿಗೆ ಸಾಮಾನ್ಯ ಪ್ರದರ್ಶನ ಆಯೋಜಿಸಲಾಗಿದೆ. ಸಂಜೆ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹರ್ಷವರ್ಧನ್, ಸಮಾಜ ಸೇವಕ ಡಾ.ಸುಶ್ರುತ್‌ಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಡಾ.ಅಂಬೇಡ್ಕರ್ ಬಗ್ಗೆ ಅನೇಕ ಸತ್ಯ ಸಂಗತಿಗಳನ್ನು ಕಾಂಗ್ರೆಸ್ ಪಕ್ಷ ಮುಚ್ಚಿಟ್ಟಿದ್ದು, ನಾಟಕವು ಅದನ್ನು ಬಯಲಿಗೆಳೆದಿದೆ. ಇದರಿಂದ ಕೆಲವೆಡೆ ಸಮಸ್ಯೆಗಳನ್ನೂ ಎದುರಿಸಿದ್ದೇವೆ. ಹಾಗಿದ್ದರೂ ರಾಜ್ಯದ ಎಲ್ಲೆಡೆ ಯಶಸ್ವಿ ಪ್ರದರ್ಶನಗಳು ನಡೆದಿವೆ. ಎಲ್ಲರಿಗೂ ಉಚಿತ ಪ್ರವೇಶವಿದೆ. ಈ ನಾಟಕ ಅಂಬೇಡ್ಕರ್ ಕುರಿತಂತೆ ಅನೇಕ ಸಂಗತಿಗಳು ಒಳಗೊಂಡಿವೆ. ದೇಶ ವಿಭಜನೆ ವೇಳೆ ಅವರು ಒಂದು ವೇಳೆ ಪಾಕಿಸ್ತಾನ ರಚನೆಯಾದಲ್ಲಿ ಇಲ್ಲಿನ ಮುಸ್ಲಿಮರು ಅಲ್ಲಿಗೆ ಹೋಗಬೇಕು, ಅಲ್ಲಿನ ಹಿಂದೂಗಳು ಇಲ್ಲಿಗೆ ಬರಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದರು.



ಜೊತೆಗೆ ಆರ್‌ಎಸ್‌ಎಸ್ ಶಿಬಿರಗಳಿಗೆ ಭೇಟಿ ನೀಡಿ ಅಲ್ಲಿನ ಕಾರ್ಯ ವೈಖರಿ ಪ್ರಶಂಸಿಸಿದ್ದರು. ಈ ವಿಷಯಗಳನ್ನು ಮುಚ್ಚಿಡಲಾಗಿತ್ತು. ಈ ನಾಟಕ ನಾನಾ ಸತ್ಯಗಳನ್ನು ಬಯಲು ಮಾಡುತ್ತಾ ಸಾಗುತ್ತದೆ. ಇದರಿಂದಾಗಿ ಹಲವರು ನಾಟಕ ಪ್ರದರ್ಶನ ವೇಳೆ ತಂಟೆ ಎಬ್ಬಿಸುವುದು ಅಲ್ಲಲ್ಲಿ ನಡೆದಿದೆ. ಆದರೂ ಇದುವರೆಗೆ ರಾಜ್ಯದಾದ್ಯಂತ ಕಂಡಿರುವ 24 ಪ್ರದರ್ಶನಗಳೂ ಕಿಕ್ಕಿರಿದು ತುಂಬಿದ್ದವು. ಅಭಿವ್ಯಕ್ತಿ ಸ್ವಾತಂತ್ರ್ಯ ಎಂದು ಹೇಳಿಕೊಳ್ಳುವವರೇ ಈ ರೀತಿ ಅಡ್ಡಿಪಡಿಸುವುದು ಬೇಸರ ತಂದಿದೆ. ಕಾಂಗ್ರೆಸ್‌ನ ಕೆಲ ಮುಖಂಡರು, ಕೆಲ ದಲಿತ ಮುಖಂಡರು ಅಡ್ಡಿಪಡಿಸಿದ್ದುದೂ ಉಂಟು. ನಗರದಲ್ಲಿನ ಈ ಪ್ರದರ್ಶನಗಳ ನಂತರ ತಂಡ ಉತ್ತರ ಕರ್ನಾಟಕದಲ್ಲಿಯೂ ಪ್ರದರ್ಶಿಸಲಿದೆ. ದೆಹಲಿ, ಮುಂಬೈನಲ್ಲಿಯೂ ಪ್ರದರ್ಶನಕ್ಕೆ ಸಿದ್ಧತೆ ನಡೆದಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ರಂಗಭೂಮಿ ಟ್ರಸ್ಟ್ ಟ್ರಸ್ಟಿ ಅನಿತಾ ಕಾರ್ಯಪ್ಪ, ಟ್ರಸ್ಟ್ ಪೋಷಕರಾದ ಪ್ರೊ.ಶಶಿಕಲಾ ರಾಮಚಂದ್ರ ದೇವ, ಹೊಮ್ಮ ಮಂಜುನಾಥ್, ಕಲಾವಿದರಾದ ಲಿಖಿತ್ ಕುಮಾರ್, ಮನೋಜ್ ಉಪಸ್ಥಿತರಿದ್ದರು.

ರಾಷ್ಟ್ರಕವಿ ಕುವೆಂಪು ಅವರ ಆದರ್ಶವನ್ನ ಮಕ್ಕಳಿಗೆ ತಿಳಿಯಪಡಿಸಿ

● ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ● ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ, ಜಿಕೆ ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ 31ನೇ ವಾರ್ಷಿಕೋತ್ಸವ

ಮೈಸೂರು,ಜ.6(ಪಿಎಂ)– ರಾಷ್ಟ್ರಕವಿ ಕುವೆಂಪು ಅವರನ್ನು ಸ್ಮರಿಸುವ ಜೊತೆಗೆ ಅವರ ಆದರ್ಶಗಳನ್ನು ಮಕ್ಕಳಿಗೆ ತಿಳಿಸಬೇಕು ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಮೈಸೂರಿನ ಹೆಬ್ಬಾಳು 1ನೇ ಹಂತದ ಬಸವನಗುಡಿ ವೃತ್ತದಲ್ಲಿರುವ ಬಸವೇಶ್ವರ ಸಮುದಾಯ ಭವನದ ಆವರಣದಲ್ಲಿ ಜಿಕೆ ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆ ಹಾಗೂ ಸಂಘದ 31ನೇ ವಾರ್ಷಿಕೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಕುವೆಂಪು ಅವರ ವಿಚಾರಧಾರೆ ಹಾಗೂ ಆದರ್ಶಗಳನ್ನು ಮಕ್ಕಳಿಗೆ ತಿಳಿಸಬೇಕಿದ್ದು, ಇದರಿಂದ ಮಕ್ಕಳು ಅವರಂತೆ ಸುಸಂಸ್ಕೃತರಾಗಲಿದ್ದಾರೆ. ಜೊತೆಗೆ ಕುವೆಂಪು ಅವರಂತೆ ಸಮಾಜಕ್ಕೆ ಕೊಡುಗೆ ಸಹ ನೀಡಲು ಸಾಧ್ಯವಾಗಲಿದೆ. ಕುವೆಂಪು ಅವರು ಹುಟ್ಟಿದಂತಹ ಉತ್ತಮ ಕುಲದಲ್ಲಿ ಹುಟ್ಟಿದ ನಾವು ಅವರಂತೆ ಆದರ್ಶದಿಂದ ನಡೆದುಕೊಳ್ಳುವ ಜವಾಬ್ದಾರಿ ಹೊಂದಿದ್ದೇವೆ. ಕುವೆಂಪು ವಿಶ್ವ ಸಾಹಿತ್ಯ ರಚಿಸಿ ವಿಶ್ವಮಾನವ ಅನ್ನಿಸಿಕೊಂಡ ಮಹನೀಯರು. ಹಲವು ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳಿಗೆ ಅವರು ಭಾಜನರಾಗಿದ್ದಾರೆ. ಅವರು ನವ ಸಮಾಜಕ್ಕೆ ಉತ್ತಮ ಸಂಸ್ಕೃತಿ ಕೊಟ್ಟವರು ಎಂದು ಸ್ಮರಿಸಿದರು.



ಮೈಸೂರಿನ ಹೆಬ್ಬಾಳು ಬಸವೇಶ್ವರ ಸಮುದಾಯ ಭವನದಲ್ಲಿ ಜಿಕೆ ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕೋತ್ಸವ ಹಾಗೂ ಕುವೆಂಪು ಜನ್ಮದಿನಾಚರಣೆಯನ್ನು ಶ್ರೀಗಳು ಉದ್ಘಾಟಿಸಿದರು.

ಕುವೆಂಪು ಅವರ ಕರ್ಮಭೂಮಿ ಮೈಸೂರು. ಅಂದು ಮೈಸೂರು ವಿವಿಗೆ ಭದ್ರಬುನಾದಿ ಹಾಕಿ ತಮ್ಮದೇ ವಿಶಿಷ್ಟ ಕೊಡುಗೆ ನೀಡಿದರು. ಕುವೆಂಪು ಅವರ ಆದರ್ಶದ ಪಥದಲ್ಲಿ ನಾವು ಹೋಗಲು ಪ್ರಯತ್ನಿಸಬೇಕು. ಅವರು ಗುರು ಪರಂಪರೆಗೆ ಗೌರವ ಕೊಡುತ್ತಿದ್ದರು. ಗುರುವನ್ನು ಸ್ಮರಿಸದೇ ಯಾವ ಕೆಲಸ ಸಹ ಮಾಡುತ್ತಿರಲಿಲ್ಲ ಎಂದರು.

'ಸಂಘಟನೆ' ಕಲಿಯುಗಕ್ಕೆ ಬಹುದೊಡ್ಡ ಶಕ್ತಿ: ಸಂಘಟನೆ ಎಂಬುದು ಕಲಿಯುಗಕ್ಕೆ ಬಹುದೊಡ್ಡ ಶಕ್ತಿಯಾಗಿದೆ. ವಿವೇಕಾನಂದರು ಅಮೆರಿಕಾಗೆ ಹೋಗುವ ಮುನ್ನ ಮೈಸೂರಿಗೆ ಭೇಟಿ ನೀಡಿದ್ದರು. ವಾಪಸ್ಸು ಬಂದ ಮೇಲೆ ಅಮೆರಿಕ ದೇಶದ ಅಭಿವೃದ್ಧಿಗೆ ಅಲ್ಲಿನ ಸಂಘಟನಾ ಶಕ್ತಿಯೇ ಕಾರಣವೆಂದು ನಮ್ಮವರಿಗೆ ತಿಳಿಸುವ ಪ್ರಯತ್ನ ಮಾಡಿದರು. ಆ ದೇಶದಲ್ಲಿ ಪುರುಷರಂತೆ ಮಹಿಳೆಯರು ಕೂಡ ದೇಶ ಕಟ್ಟುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಸಾರಿ ಹೇಳಿದರು. ಆ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಲಿಂಗ ಸಮಾನತೆ ಇರಲಿಲ್ಲ. ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದರು ಎಂದು ಹೇಳಿದರು.

ಸ್ವಾಮಿ ವಿವೇಕಾನಂದರು ಅಮೆರಿಕದಿಂದ ಹಿಂತಿರುಗಿ ಬಂದಾಗ ನಮ್ಮ ಸಮುದಾಯದ ಕೆ.ಹೆಚ್.ರಾಮಯ್ಯನವರು ಅವರನ್ನು ಭೇಟಿ ಮಾಡಿದ್ದರು. ಅಲ್ಲದೆ, ದೇಶ ಕಟ್ಟುವ ಕಾಯಕದಲ್ಲಿ ತೊಡಗಿಸಿಕೊಳ್ಳುವುದೇಗೆ ಎಂದು ವಿವೇಕಾನಂದರ ಸಲಹೆ ಕೇಳಿದ್ದರು. ಅದಕ್ಕೆ ವಿವೇಕಾನಂದರು, ಯಾರೂ ನೇರವಾಗಿ ದೇಶ ಕಟ್ಟಲು ಸಾಧ್ಯವಿಲ್ಲ. ನಿಮ್ಮನ್ನು ನೀವು ಕಟ್ಟಿಕೊಳ್ಳಿ ಹಾಗೂ ಸಮುದಾಯ ಕಟ್ಟುವತ್ತ ಗಮನ ನೀಡಿ ಎಂದು ಸಲಹೆ ಕೊಟ್ಟಿದ್ದರು ಎಂದರು.

ಇದಕ್ಕೂ ಮುನ್ನ ಕುವೆಂಪು ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಇದೇ ವೇಳೆ ಮೈಸೂರು ವೈದ್ಯಕೀಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಲಕ್ಷ್ಮೀಗೌಡ ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ನಿವೃತ್ತಿ ಹೊಂದಿದ ನೌಕರರನ್ನು ಅಭಿನಂದಿಸಲಾಯಿತು. ಜೊತೆಗೆ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಹ ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಹೆಚ್.ಟಿ.ಮಂಜು, ಜಿಕೆ ಟೈರ್ಸ್ ಕಂಪನಿ ವಿಪ್ರು ಈಶ್ವರರಾವ್, ಪಾಲಿಕೆ ಮಾಜಿ ಸದಸ್ಯ ಹಾಗೂ ರಾಜ್ಯ ಒಕ್ಕಲಿಗ ಸಂಘದ ಖಜಾಂಚಿ ಕೆ.ವಿ.ಶ್ರೀಧರ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ವಿ.ಚೇತನ್, ಜಿಕೆ ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಕುಮಾರ (ಬಾಬು), ಗೌರವಾಧ್ಯಕ್ಷ ಕೆ.ಶಿವಪ್ಪ, ಸಲಹೆಗಾರ ಜಿ.ರಾಜ ಗೋಪಾಲಯ್ಯ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ಮತ್ತಿತರರು ಹಾಜರಿದ್ದರು.

ಅದ್ದೂರಿ ಮೆರವಣಿಗೆ

ಸಭಾ ಕಾರ್ಯಕ್ರಮಕ್ಕೂ ಮುನ್ನ ಕೆಆರ್‌ಎಸ್ ರಸ್ತೆಯ ಹೆಬ್ಬಾಳಿನ ಹೆಬ್ಬಾಗಿಲಿನಿಂದ ಹೆಬ್ಬಾಳಿನ ಮುಖ್ಯ ರಸ್ತೆಯಲ್ಲಿ ಅದ್ದೂರಿ ಮೆರವಣಿಗೆ ನಡೆಸಲಾಯಿತು. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರು ಆಸೀನರಾದ ಬೆಳ್ಳಿರಥ ಮೆರವಣಿಗೆಯಲ್ಲಿ ಸಾಗಿತು. ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದ್ದವು. ರಾಜ್ಯದ ಹಳ್ಳಿಕಾರ ಎತ್ತುಗಳೆಂದೇ ಹೆಸರುವಾಸಿಯಾದ ಕನಕಪುರದ ಇಂದ್ರೇಶ್ (ಬಂಡಿ)ರವರ ಮತ್ತು ಸಂದೀಪ್ ಹಿರಿಸಾವೆ ಅವರ ಜೋಡಿ ಎತ್ತುಗಳು ಮೆರವಣಿಗೆಗೆ ಮತ್ತಷ್ಟು ರಂಗು ನೀಡಿದವು. ಅಲ್ಲದೆ, ನಾಡಪ್ರಭು ಕೆಂಪೇಗೌಡರ ವೇಷಧಾರಿಗಳು ಕುದುರೆ ಮೇಲೆ ಸಾಗಿ ಗಮನ ಸೆಳೆದರು. ಬಸವೇಶ್ವರ ಸಮುದಾಯ ಭವನದ ಆವರಣದ ಬಳಿ ಮೆರವಣಿಗೆ ಮುಕ್ತಾಯಗೊಂಡಿತು.

ಮೈಸೂರು ಮಿತ್ರ

ದಳಪತಿಗಳು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ; ಅವರ ಸಹವಾಸ ನಮಗೆ ಬೇಡವೇ ಬೇಡ

● ರಾಜ್ಯ ಬಿಜೆಪಿ ನಾಯಕರ ಬಳಿ ಜಿಲ್ಲಾ ಮುಖಂಡರ ಒಕ್ಕೊರಲ ಆಗ್ರಹ ● ನಿಮ್ಮ ಅಭಿಪ್ರಾಯ ಹೈಕಮಾಂಡ್‌ಗೆ ತಿಳಿಸುವೆ; ಆದರೆ ವರಿಷ್ಠರ ನಿರ್ಧಾರ ಪಾಲಿಸಲೇಬೇಕು: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ಮಂಡ್ಯ, ಜ.6– ಮಂಡ್ಯ ಸಂಸದರೂ ಆಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಮಂಡ್ಯ ಜಿಲ್ಲೆಯ ಜೆಡಿಎಸ್ ನಾಯಕರ ವಿರುದ್ಧ ಒಕ್ಕೊರಲ ಅಸಮಾಧಾನ ಹೊರ ಹಾಕಿರುವ ಜಿಲ್ಲಾ ಬಿಜೆಪಿ ಮುಖಂಡರು, ದಳಪತಿಗಳು ನಮ್ಮನ್ನು ವಿಶ್ವಾಸ ಮತ್ತು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಹಾಗಾಗಿ ಅವರೊಂದಿಗೆ ಮೈತ್ರಿ ಬೇಡವೇ ಬೇಡ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ರಾಜ್ಯ ನಾಯಕರ ಮುಂದೆ ಆಗ್ರಹ ವ್ಯಕ್ತಪಡಿಸಿದ್ದಾರೆ.


ಸ್ಥಳೀಯ ಸಂಸ್ಥೆ ಚುನಾವಣೆ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಸಂಘಟನೆ ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ರಾಜ್ಯ ಬಿಜೆಪಿ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಮಂಡ್ಯ ಜಿಲ್ಲಾ ಬಿಜೆಪಿ ಮುಖಂಡರ ಸಭೆಯಲ್ಲಿ ಜೆಡಿಎಸ್ ನಾಯಕರ ಬಗ್ಗೆ ಹಲವರಿಂದ ಅಸಮಾಧಾನ ಬಹಿರಂಗಗೊಂಡಿರುವ ಬಗ್ಗೆ ಸಭೆಯಲ್ಲಿದ್ದ ಹೆಸರೇಳಲಿಚ್ಚಿಸದ ಮಂಡ್ಯ ಜಿಲ್ಲೆಯ ಬಿಜೆಪಿ ಮುಖಂಡರೊಬ್ಬರು 'ಮೈಸೂರು ಮಿತ್ರ'ನಿಗೆ ಸಭೆಯ ಸಂಪೂರ್ಣ ಮಾಹಿತಿ ನೀಡಿದ್ದಾರೆ.

ಸಭೆ ಆರಂಭವಾಗುತ್ತಿದ್ದಂತೆಯೇ ವೇದಿಕೆಯಲ್ಲಿದ್ದ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ

> ನಿಮ್ಮ ನೋವು ಮತ್ತು ಸಮಸ್ಯೆ ನನಗೆ ಅರ್ಥವಾಗುತ್ತದೆ. ನಿಮ್ಮ ನಿರ್ಧಾರವನ್ನು ಹೈಕಮಾಂಡ್‌ಗೆ ತಿಳಿಸುವ ಜವಾಬ್ದಾರಿ ನನ್ನದು. ಆದರೆ ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಎಲ್ಲರೂ ಬದ್ಧವಾಗಿರಬೇಕು.
>
> - ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮಾತನಾಡಿ, ನಾನು ಪ್ರತಿನಿಧಿಸುವ ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಹಾಲಿ ಜೆಡಿಎಸ್ ಶಾಸಕರಿದ್ದು, ನನ್ನನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಈವರೆಗೆ ಹಲವು ಸ್ಥಳೀಯ ಸಂಸ್ಥೆ ಚುನಾವಣೆ ನಡೆದಿದ್ದು, ಎಲ್ಲಾ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿಗೆ ಹಿನ್ನಡೆಯಾಗಿದೆ. ಅಷ್ಟೇ ಏಕೆ ಕ್ಷೇತ್ರದಲ್ಲಿ 3ನೇ ಸ್ಥಾನದಲ್ಲಿರುವ ಕಾಂಗ್ರೆಸ್ ಹಲವು ಸ್ಥಳೀಯ ಸಂಸ್ಥೆ ಚುನಾವಣೆ ಗೆಲ್ಲುತ್ತದೆ ಎಂದರೆ ಅದಕ್ಕೆ ಮೈತ್ರಿ ಪಕ್ಷದಲ್ಲಿನ ವಿಶ್ವಾಸದ ಕೊರತೆಯೇ ಕಾರಣ ಎಂದು ಬೇಸರ ಹೊರಹಾಕಿದ್ದಾರೆಂದು ಹೇಳಲಾಗಿದೆ.

ಮನ್‌ಮುಲ್, ಪುರಸಭೆ ಚುನಾವಣೆಯಲ್ಲಿ ಹಿನ್ನಡೆಯಾಗಿದೆ. ಕ್ಷೇತ್ರದ ಶಾಸಕರು ಅಭಿವೃದ್ಧಿ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ಒಮ್ಮೆಯೂ ನಮ್ಮೊಂದಿಗೆ ಚರ್ಚಿಸಿಲ್ಲ. ಜೊತೆಗೆ ನಮ್ಮಿಂದ ಮತ ಪಡೆದ ಹೆಚ್.ಡಿ.ಕುಮಾರಸ್ವಾಮಿ ಅವರು ಸಹ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಕೆ.ಆರ್.ಪೇಟೆ ಸೇರಿದಂತೆ ಜಿಲ್ಲೆಗೆ ಆಗಮಿಸಿದಾಗ ನಮಗೆ ಮಾಹಿತಿ ಕೊಡುವುದಿಲ್ಲ. ನಮ್ಮ ಸಮಸ್ಯೆಗಳನ್ನು ಯಾರ ಬಳಿ ಹೇಳಿಕೊಳ್ಳಬೇಕು. ಜೊತೆಗೆ ಹೀಗಾದರೆ ನಾವು ಸಂಘಟನೆ ಮಾಡಲು ಹೇಗೆ ಸಾಧ್ಯ ಹಾಗಾಗಿ ಅವರೊಂದಿಗೆ ಮೈತ್ರಿ ಬೇಡ ಎಂದು ಒತ್ತಾಯಿಸಿದ್ದಾರೆಂದು ತಿಳಿದು ಬಂದಿದೆ.



ಬೆಂಗಳೂರಿನ ರಾಜ್ಯ ಬಿಜೆಪಿ ಕಚೇರಿಯಲ್ಲಿ ಮಂಡ್ಯ ಜಿಲ್ಲಾ ಬಿಜೆಪಿ ಮುಖಂಡರ ಸಭೆ ನಡೆಯಿತು.

ಬಳಿಕ ಮಾತನಾಡಿದ ಮಾಜಿ ಸಂಸದೆ ಸುಮಲತಾ ಅಂಬರೀಷ್, ನಮ್ಮ ಅವರ ನಡುವೆ ಎಷ್ಟೇ ಗೊಂದಲವಿದ್ದರೂ ಕ್ಷೇತ್ರ ತ್ಯಾಗ ಮಾಡಿ ಅವರನ್ನು ಬೆಂಬಲಿಸಿ, ಜೊತೆಗೆ ಚುನಾವಣೆ ಗೆಲ್ಲಲು ಸಹ ನಾವುಗಳು ಸಹಕಾರ ನೀಡಿದ್ದೇವೆ. ಆದರೆ ಮಂಡ್ಯ ಜಿಲ್ಲೆಯಲ್ಲಿ ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ಮುಖಂಡರು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಅಲ್ಲದೇ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿ ಬೇಡ ಎಂಬ ನಿರ್ಧಾರಕ್ಕೆ ಜೆಡಿಎಸ್ ಬಂದು ಹಲವು ದಿನಗಳೇ ಕಳೆದರೂ ನಮ್ಮ ಪಕ್ಷದ ನಿಲುವು ಏನೆಂಬುದರ ಬಗ್ಗೆ ರಾಜ್ಯ ನಾಯಕರು ಇನ್ನು ಸಹ ತಿಳಿಸಿಲ್ಲ. ನಮ್ಮ ಕಾರ್ಯಕರ್ತರು ಜಿಲ್ಲೆಯಲ್ಲಿ ಗೊಂದಲದಲ್ಲಿದ್ದು, ಅವರಿಗೆ ಸೂಕ್ತ ಮಾಹಿತಿ ನೀಡಬೇಕಿದೆ. ಜೊತೆಗೆ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಿದ್ಧರಾಗಿ ಎಂಬ ಸಂದೇಶವನ್ನು ಸಾರಬೇಕಿದೆ. ಈ ಗೊಂದಲವನ್ನು ಮೊದಲು ಬಗೆಹರಿಸಬೇಕೆಂದು ಮನವಿ ಮಾಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಜೊತೆಗೆ ಮೈತ್ರಿಯಿಂದ ಮಂಡ್ಯದಲ್ಲಿ ಪಕ್ಷದ ಸಂಘಟನೆ ಕುಸಿಯುತ್ತದೆ. ಅವರೊಂದಿಗೆ ಮೈತ್ರಿ ಮಾಡಿಕೊಳ್ಳದೇ ಸ್ವತಂತ್ರವಾಗಿ ಬಿಜೆಪಿ ಸ್ಥಳೀಯ ಸಂಸ್ಥೆ ಚುನಾವಣೆ ಎದುರಿಸುವ ಶಕ್ತಿ ಹೊಂದಿದೆ. ಜೊತೆಗೆ ಚುನಾವಣೆಯಲ್ಲಿ ಗೆದ್ದ ಬಳಿಕ ಕುಮಾರಸ್ವಾಮಿ ಅವರು ನಮ್ಮ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದಾಗ ನಮ್ಮ ಕಾರ್ಯಕರ್ತರಿಗೂ ಅಸಮಾಧಾನ ಆಗುವುದು ಸಹಜ ಇದನ್ನೆಲ್ಲಾ ಬಗೆಹರಿಸುವ ನಿಟ್ಟಿನಲ್ಲಿ ಸ್ವತಂತ್ರ್ಯ ಸ್ಪರ್ಧೆಯೇ ಸರಿ ಎಂಬುದು ನಮ್ಮ ವಾದ ಎಂದು ಸುಮಲತಾ ತಿಳಿಸಿದ್ದಾರೆನ್ನಲಾಗಿದೆ.

ತದನಂತರ ಈ ಇಬ್ಬರು ನಾಯಕರ ಮಾತಿಗೆ ದನಿಗೂಡಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಎಸ್.ಪಿ.ಸ್ವಾಮಿ ಸೇರಿದಂತೆ ಮುಂತಾದವರು ಮೈತ್ರಿ ಬೇಡ ಎಂಬ ಒಕ್ಕೊರಲ ನಿರ್ಧಾರ ಹೊರ ಹಾಕಿದ್ದಾರೆ. ಆದರೆ ಸಭೆಯಲ್ಲಿದ್ದ, ಜೆಡಿಎಸ್ ಜೊತೆಗೆ ಉತ್ತಮ ಬಾಂಧವ್ಯ ಹೊಂದಿರುವ ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಸೇರಿದಂತೆ ಕೆಲವರು ಮಾತ್ರ ಮೈತ್ರಿಯನ್ನು ವಿರೋಧಿಸದೇ ತಟಸ್ಥರಾಗಿದ್ದರು ಎಂದು ತಿಳಿದು ಬಂದಿದೆ.

ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದರಾದ ಯದುವೀರ್ ಒಡೆಯರ್, ಗೋವಿಂದ ಕಾರಜೋಳ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ರವಿಕುಮಾರ್, ಮಾಜಿ ಶಾಸಕರಾದ ಪ್ರೀತಮ್‌ಗೌಡ, ರಾಜೀವ್ ಸೇರಿದಂತೆ ಮಂಡ್ಯ ಜಿಲ್ಲೆಯ ಅನೇಕ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಸುದೀರ್ಘ ಅವಧಿಗೆ ಸಿಎಂ ಆಗಿ ಸಿದ್ದರಾಮಯ್ಯ ದಾಖಲೆ

ಕೆ.ಆರ್.ಪೇಟೆಯಲ್ಲಿ ಅಭಿಮಾನಿ ಬಳಗದಿಂದ ವಿಜಯೋತ್ಸವ

ಕೆ.ಆರ್.ಪೇಟೆ, ಜ.6– ಸುದೀರ್ಘ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಡಿ.ದೇವರಾಜ ಅರಸು ಅವರ ದಾಖಲೆಯನ್ನು ಸಿದ್ದರಾಮಯ್ಯ ಅವರು ಮುರಿದ ಹಿನ್ನೆಲೆಯಲ್ಲಿ ತಾಲೂಕು ಅಹಿಂದ ವರ್ಗಗಳ ಒಕ್ಕೂಟ ಹಾಗೂ ತಾಲೂಕು ಸಿದ್ದರಾಮಯ್ಯ ಅಭಿಮಾನಿ ಬಳಗದಿಂದ ಪಟ್ಟಣದಲ್ಲಿ ವಿಜಯೋತ್ಸವ ಆಚರಿಸಲಾಯಿತು.



ಕೆ.ಆರ್.ಪೇಟೆಯಲ್ಲಿ ವಿಜಯೋತ್ಸವ ಆಚರಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಪಂ ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು ನೇತೃತ್ವದಲ್ಲಿ ಜಮಾಯಿಸಿದ ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 7 ವರ್ಷ 240 ದಿನಗಳ ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುವ ಮೂಲಕ 7 ವರ್ಷ 239 ದಿನ ಆಡಳಿತ ನಡೆಸಿದ ಡಿ.ದೇವರಾಜ ಅರಸು ಅವರ ದಾಖಲೆ ಹಿಂದಿಕ್ಕಿದ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಜಿಪಂ ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು ಕರ್ನಾಟಕ ವಿಧಾನಸಭೆ ಇತಿಹಾಸದಲ್ಲೇ ಅತೀ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ದಾಖಲೆ ನಿರ್ಮಿಸಿದ ಕೀರ್ತಿಗೆ ಭಾಜನರಾಗಿದ್ದು, ಇದು ರಾಜ್ಯದ 7 ಕೋಟಿ ಕನ್ನಡಿಗರಿಗೆ ಹೆಮ್ಮೆ ತರುವ ವಿಚಾರವಾಗಿದೆ. ಹಾಗಾಗಿ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಪಟ್ಟಣದ ಮುತ್ತುರಾಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ, ಅರ್ಚನೆ, ಅಭಿಷೇಕ ಮಾಡಿಸಿ ಸಿದ್ದರಾಮಯ್ಯ ಅವರು ಇನ್ನೂ ಹೆಚ್ಚು ದಿನಗಳ ಕಾಲ ರಾಜ್ಯದ ಸಿಎಂ ಆಗಿ ಅಧಿಕಾರ ನಡೆಸಲು ತಾಯಿ ಚಾಮುಂಡೇಶ್ವರಿ ಆಯಸ್ಸು, ಆರೋಗ್ಯ ನೀಡಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು.

ವಿಜಯೋತ್ಸವದಲ್ಲಿ ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಪುರಸಭಾ ಸದಸ್ಯ ಕೆ.ಆರ್.ರವೀಂದ್ರಬಾಬು, ಡಿ.ಪ್ರೇಮಕುಮಾರ್, ಕೆ.ಕೆ.ರಮೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆ.ಪುರುಷೋತ್ತಮ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಟಿ.ಎನ್. ದಿವಾಕರ್, ತಾಪಂ ಮಾಜಿ ಸದಸ್ಯರಾದ ಶ್ಯಾಮಣ್ಣ ಸಣ್ಣನಿಂಗೇಗೌಡ ಎಲ್.ಪಿ.ನಂಜಪ್ಪ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲೋಲಾಕ್ಷಿ, ಮೀನಾಕ್ಷಿ, ವಿನುತ, ಗ್ಯಾರಂಟಿ ಸಮಿತಿ ಸದಸ್ಯರಾದ ಕೆಎಸ್‌ಆರ್‌ಟಿಸಿ ಶಿವಣ್ಣ, ಶಿವಮ್ಮ ಮುಖಂಡರಾದ ರಾಯಪ್ಪ ಈರಪ್ಪ ಜವರಯ್ಯ ಸೇರಿದಂತೆ ಹಲವರಿದ್ದರು.

ನಾನು ಎಂದಿಗೂ ಸ್ವಾರ್ಥ ರಾಜಕಾರಣಕ್ಕೆ ಮುಂದಾಗಿಲ್ಲ

ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ

ಭಾರತೀನಗರ, ಜ.6– ನಾನು ಎಂದಿಗೂ ಸ್ವಾರ್ಥ ರಾಜಕಾರಣಕ್ಕೆ ಮುಂದಾಗಿಲ್ಲ. ಎಲ್ಲರನ್ನು ಪ್ರೀತಿ, ವಿಶ್ವಾಸದಿಂದ ಕಾಣುತ್ತಾ ಬಂದಿದ್ದೇನೆ ಎಂದು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ತಿಳಿಸಿದರು.

ಇಲ್ಲಿಗೆ ಸಮೀಪದ ಹೆಚ್.ಹೊಸೂರು ಗ್ರಾಮದಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಜೆಡಿಎಸ್ ರೈತಪರ ಪಕ್ಷವಾಗಿದೆ. ಇಲ್ಲಿ ಪಕ್ಷಕ್ಕಿಂತ ಯಾರು ದೊಡ್ಡವರಲ್ಲ. ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನು ನಾವು ಸದಾ ಅಭಿನಂದಿಸುತ್ತೇವೆ ಎಂದರು.

ಇತ್ತೀಚಿನ ದಿನಗಳಲ್ಲಿ ದ್ವೇಷ ರಾಜಕಾರಣ ಹೆಚ್ಚಾಗುತ್ತಿದೆ. ಇದನ್ನು ಹೋಗಲಾಡಿಸಲು ಗ್ರಾಮದ ಕಾರ್ಯಕರ್ತರು, ಮುಖಂಡರು ಮುಂದಾಗಬೇಕು. ನನ್ನ ಅಧಿಕಾರವಧಿಯಲ್ಲಿ ಎಲ್ಲರನ್ನು ಪ್ರೀತಿ ವಿಶ್ವಾಸದಿಂದ ಕಾಣುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದೇನೆ. ಎಲ್ಲಾದರೂ ಯಾವುದೇ ಲೋಷದೋಷ ಇದ್ದರೆ ತಿಳಿಸಿ ಎಂದರು. ನಾನು ಸೋತಾಗ ಕುಗ್ಗಲಿಲ್ಲ. ಗೆದ್ದಾಗ ಹಿಗ್ಗಲಿಲ್ಲ. ಕ್ಷೇತ್ರಕ್ಕೆ ಮಾಡಬೇಕಾದ ಕರ್ತವ್ಯ ಏನಿದೆ ಅದನ್ನು ಇಂದಿಗೂ ಮಾಡುತ್ತಾ ಬಂದಿದ್ದೇನೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರನ್ನು ಸನ್ಮಾನಿಸಲಾಯಿತು.

ಗ್ರಾಮೀಣ ಮಕ್ಕಳನ್ನು ವಿದ್ಯಾವಂತರನ್ನಾಗಿಸುವ ದೃಷ್ಟಿಯಿಂದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದೇನೆ. ರೈತರು ಬೆಳೆಗಳನ್ನು ಸಾಗಿಸಲು ಗದ್ದೆ ಬಯಲಿನ ರಸ್ತೆಗಳನ್ನು ಅಭಿವೃದ್ಧಿ ಪಡಿಸಿದ್ದೇನೆ. ಯಾರನ್ನು ಮೇಲುಕೀಳು ಮಾಡದೆ, ಜಾತಿ ಬೇಧ ನೋಡದೆ ಕ್ಷೇತ್ರದ ಅಭಿವೃದ್ಧಿಗೆ ದುಡಿದಿದ್ದೇನೆ. ಕೆಲವು ಆಮಿಷಗಳಿಗೆ ಒಳಗಾಗಿ ದೂರ ಹೋಗಿದ್ದ ಕಾರ್ಯಕರ್ತರು ನನ್ನ ಕಾರ್ಯ ವೈಖರಿ ಮೆಚ್ಚಿ ಮತ್ತೆ ಹಿಂತಿರುಗಿ ಬರುತ್ತಿದ್ದಾರೆ ಎಂದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ ಮಾತನಾಡಿದರು. ಇದೇ ವೇಳೆ ಕಾರ್ಯಕರ್ತರಾದ ಹೆಚ್.ಎನ್.ಸಿದ್ದರಾಜು, ಪ್ರದೀಪ್ ಕುಮಾರ್, ರಾಮಣ್ಣ, ಶಿವರಾಮು ಅಧ್ಯಕ್ಷತೆಯಲ್ಲಿ ಮುಖಂಡರಾದ ಹೆಚ್.ಎಂ.ಮಹದೇವು, ಹೆಚ್.ಕೆ.ಪುಟ್ಟೇಗೌಡ, ನಾಗರಾಜು, ಹೆಚ್.ಸಿ.ಶಂಕರ್, ಈರೇಗೌಡ, ಬಸವರಾಜು, ನಾಡಗೌಡ, ದೇವರಾಜು, ಎಸ್.ಐ.ಹೊನ್ನಲಗೆರೆ ಶಿವಣ್ಣ ಅವರು ಕಾಂಗ್ರೆಸ್ ತೊರೆದು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ತಾಪಂ ಮಾಜಿ ಅಧ್ಯಕ್ಷ ಶಿವಶಂಕರ್, ಮಾಜಿ ಸದಸ್ಯರಾದ ಎನ್.ಸಿ.ಪುಟ್ಟಸ್ವಾಮಿಗೌಡ, ಮಧುಸೂದನ್, ಮುಖಂಡರಾದ ಪ್ರಕಾಶ್, ಕೆ.ಟಿ.ಸುರೇಶ್, ವಿನು, ತೊರೆಬೊಮ್ಮನಹಳ್ಳಿ ಸೊಸೈಟಿ ಮಾಜಿ ಅಧ್ಯಕ್ಷ ಶ್ರೀನಿವಾಸ್, ಗ್ರಾಪಂ ಮಾಜಿ ಅಧ್ಯಕ್ಷ ರವಿರಾಜು, ರವಿ, ಸಿದ್ದೇಸ್ವಾಮಿ, ಮರಿಸ್ವಾಮಿ, ನಾಗೇಂದ್ರ, ಹೆಚ್.ಎನ್. ನಾಗಣ್ಣ, ಹೆಚ್.ಎನ್.ಮಹೇಂದ್ರ, ಕೃಷ್ಣೇಗೌಡ, ನಾಗರಾಜು, ಉಮೇಶ್, ರಘು, ಪುಟ್ಟೇಗೌಡ, ನಾಗೇಂದ್ರ, ಮಾದಪ್ಪ, ರಂಜಿತ್, ಅಜಿತ್, ಕಿರಣ್, ಪ್ರದೀಪ್, ಪ್ರಸನ್ನ, ರಾಜೇಶ್, ದ್ಯಾವೇಗೌಡ, ಹೆಚ್.ಡಿ.ನಾಗರಾಜು, ನಾಗೇಶ್ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

ದೀರ್ಘಾವಧಿ ಬಳಿಕ ಪೂರ್ಣಾವಧಿ ಬಯಕೆ

ರಾಜಕಾರಣವೇ ಬೇರೆ, ಇವತ್ತಿನ ಪರಿಸ್ಥಿತಿಯೇ ಬೇರೆ ಎಂದು ರಾಜ ಕಾರಣದ ವಿವಿಧ ಮಜಲುಗಳನ್ನು ಸೂಚ್ಯವಾಗಿ ತಿಳಿಸಿದ ಸಿದ್ದರಾಮಯ್ಯ, ಇವತ್ತಿನ ಸವಾಲಿನ ರಾಜಕಾರಣ ದಲ್ಲಿ ನಾನು ಸುದೀರ್ಘ ಕಾಲದವರೆಗೆ ಮುಖ್ಯಮಂತ್ರಿಯಾಗಿ ಮುಂದುವರೆದಿರುವುದು ವಿಶೇಷ ಎಂದು ಪರೋಕ್ಷವಾಗಿ ವಿಶ್ಲೇಷಿಸಿದರು. ಜನರ ಆಶೀರ್ವಾದದಿಂದ ಮಾತ್ರ ನಾನು ಇಲ್ಲಿ ತನಕ ಬಂದಿದ್ದೇನೆ. ನಾನು ಸಾಗಿ ಬಂದಿರುವ ರಾಜಕಾರಣ ತೃಪ್ತಿಕೊಟ್ಟಿದೆ. ಜನಪರವಾಗಿ ಮತ್ತಷ್ಟು ಕೆಲಸ ಮಾಡಬೇಕೆಂಬ ಹಂಬಲವಿದೆ ಎಂದರು. ನನಗೆ ಒಂದು ಬಾರಿ ಶಾಸಕನಾಗಬೇಕೆಂಬ ಕನಸು ಇತ್ತು. ಆದರೆ, ಸಚಿವನಾಗಿ, ಉಪ ಮುಖ್ಯಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಎಲ್ಲಾ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡಿದ್ದೇನೆ.

ನಾಟಿಕೋಳಿ ಇಷ್ಟ: ದೇವರಾಜ ಅರಸ್ ಅವರ ದಾಖಲೆ ಸರಿಗಟ್ಟಿದ ಹಿನ್ನೆಲೆಯಲ್ಲಿ ರಾಜ್ಯದ ಹಲವೆಡೆ ನಾಟಿ ಕೋಳಿ ಪಲಾವ್ ಹಂಚುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಅವರು, ಯಾರು ನಾಟಿ ಕೋಳಿ ಪಲಾವ್ ಹಂಚುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಹಳ್ಳಿಯಿಂದ ಬಂದವನು. ಸಹಜವಾಗಿ ನನಗೆ ನಾಟಿ ಕೋಳಿ ಅಂದರೆ ಇಷ್ಟ. ಈ ಹಿನ್ನೆಲೆಯಲ್ಲಿ ನನ್ನಂತೆಯೇ ಹಳ್ಳಿಯಿಂದ ಬಂದವರು ನಾಟಿ ಕೋಳಿ ಊಟ ಇಷ್ಟ ಪಡುತ್ತಾರೆ. ಇದರಿಂದ ಅವರು ಇಂದು ನಾಟಿ ಕೋಳಿ ಪಲಾವ್ ಹಂಚುತ್ತಿರಬಹುದು. ನಾನು ಮೊದಲು ನಾಟಿ ಕೋಳಿ ಹೆಚ್ಚು ತಿನ್ನುತ್ತಿದ್ದೆ. ಈಗ ಕಡಿಮೆ ಮಾಡಿದ್ದೇನೆ ಎಂದರು.

ಬಳ್ಳಾರಿ ಗಲಭೆ ಸಿಓಡಿಗೆ ವಹಿಸುವ ಬಗ್ಗೆ ಗೃಹ ಸಚಿವರೊಂದಿಗೆ ಚರ್ಚೆ

ಬಳ್ಳಾರಿ ಗಲಭೆ ಪ್ರಕರಣವನ್ನು ಸಿಓಡಿ ತನಿಖೆಗೆ ವಹಿಸುವ ಬಗ್ಗೆ ಗೃಹ ಸಚಿವರ ಜೊತೆ ಇಂದು ಚರ್ಚೆ ಮಾಡುತ್ತೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಬಳ್ಳಾರಿ ಗಲಾಟೆ ವಿಷಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ರಾಜಕಾರಣ ಮಾಡುತ್ತಿವೆ. ಅದೇನೆ ಇದ್ದರೂ ಈ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ಪೊಲೀಸರು ವರದಿ ನೀಡಿದ ನಂತರ ಈ ಬಗ್ಗೆ ವಿವರಣೆ ನೀಡುತ್ತೇನೆ ಎಂದು ಹೇಳಿದರು.

ನಿನ್ನೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಮೈಸೂರು ವಿಮಾನ ನಿಲ್ದಾಣದಲ್ಲಿ ಭೇಟಿ ಸಂಬಂಧ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಮೈಸೂರು ಮಾರ್ಗವಾಗಿ ದೆಹಲಿಗೆ ಹೋಗುವ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿದ್ದೇನೆ ಅಷ್ಟೆ, ಆದರೆ, ಅವರೊಂದಿಗೆ ಯಾವುದೇ ರಾಜಕಾರಣ ಚರ್ಚೆ ನಡೆಸಿಲ್ಲ ಎಂದು ಸ್ಪಷ್ಟನೆ ನೀಡಿದರು. ಸಂಪುಟ ಪುನಾರಚನೆ ಬಗ್ಗೆ ಕೂಡ ವೇಣು ಗೋಪಾಲ್ ಜೊತೆ ಚರ್ಚೆ ಮಾಡಿಲ್ಲ. ಸಂಪುಟ ಪುನಾರಚನೆ ವಿಚಾರದಲ್ಲಿ ಹೈಕಮಾಂಡ್ ಯಾವತ್ತು ದೆಹಲಿಗೆ ಕರೆಯುತ್ತದೆಯೋ ಅಂದು ಹೋಗುತ್ತೇನೆ ಎಂದರು. ಸುದೀರ್ಘ ಮುಖ್ಯಮಂತ್ರಿಯಾಗಿರುವ ಹಿನ್ನೆಲೆಯಲ್ಲಿ ನೀವು ಮಂಡಿಸುವ ಬಜೆಟ್‌ನಲ್ಲಿ ಯಾವ ವಿಶೇಷತೆ ಇರುತ್ತದೆ ಎಂಬ ಪ್ರಶ್ನೆಗೆ, ಬಜೆಟ್ ದಿನದಂದೇ ಆ ಬಗ್ಗೆ ತಿಳಿದುಕೊಳ್ಳಿ ಎಂದು ಸಿದ್ದರಾಮಯ್ಯ ನುಡಿದರು.

ದರ ಪರಿಷ್ಕರಣೆ

ಲಗೇಜು ದರಗಳು: ಮೊದಲ 20 ಕೆ.ಜಿ. ವರೆಗೆ ಉಚಿತ. ನಂತರದ ಪ್ರತಿ 20 ಕಿಲೋ ಗ್ರಾಂ ಅಥವಾ ಅದರ ಭಾಗಕ್ಕೆ ರೂ. 10, ಪ್ರಯಾಣಿಕರ ಗರಿಷ್ಠ ಲಗೇಜಿಗೆ 50 ಕೆ. ಜಿ ನಿಗಧಿಪಡಿಸಿದೆ.

ರಾತ್ರಿ ವೇಳೆ ದರ: ಸಾಮಾನ್ಯ ದರ+ ಅದರ ಅರ್ಧಪಟ್ಟು ಹೆಚ್ಚು (ರಾತ್ರಿ 10 ರಿಂದ ಬೆಳಗ್ಗೆ ಜಾವ 5 ಗಂಟೆಯವರೆಗೆ). ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಅನು ಮೋದಿಸಲ್ಪಟ್ಟಿರುವ ನಿಗಧಿತ ಪರಿಷ್ಕೃತ ದರದ ಮೂಲ ಪಟ್ಟಿಯನ್ನು ಪ್ರತಿಯೊಂದು ಆಟೋರಿಕ್ಷಾದಲ್ಲಿ ಪ್ರಮುಖ ಸ್ಥಾನದಲ್ಲಿ ಪ್ರದರ್ಶಿಸಬೇಕೆಂದು ತಿಳಿಸಲಾಗಿದೆ. ಪರಿಷ್ಕೃತ ದರಗಳಿಗೆ ಅನುಗುಣ ವಾಗಿ ಮೀಟರ್‌ಗಳನ್ನು ಜನವರಿ 1 ರಿಂದ ಎರಡು ತಿಂಗಳ ಒಳಗಾಗಿ ಸತ್ಯಾಪನೆ (ರೀಕ್ಯಾ ಲಿಬರೇಟ್) ಯನ್ನು ಕಾನೂನು ಮಾಪನಾ ಇಲಾಖೆಯಲ್ಲಿ ಮಾಡಿಕೊಳ್ಳಬೇಕು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆ ಬಳಿ ಸಂಭ್ರಮವೋ ಸಂಭ್ರಮ

ಹೊರಗೆ ಬಂದ ಸಿದ್ದರಾಮಯ್ಯ ಪೋಸ್ಟರ್‌ಗಳಿಗೆ ಹಸ್ತಾಕ್ಷರ ಹಾಕಿದರು. ನಂತರ ಸರದಿ ಸಾಲಿನಲ್ಲಿ ನಿಂತಿದ್ದ ಜನರಿಂದ ಅಹವಾಲು ಸ್ವೀಕರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕರಾದ ಕೆ.ಹರೀಶ್ ಗೌಡ, ಎ.ಆರ್.ಕೃಷ್ಣಮೂರ್ತಿ, ಡಿ.ರವಿಶಂಕರ್, ಡಾ. ತಿಮ್ಮಯ್ಯ, ಮಾಜಿ ಶಾಸಕರಾದ ಹೆಚ್.ಪಿ.ಮಂಜುನಾಥ್, ಎಂ.ಕೆ.ಸೋಮಶೇಖರ್ ಸೇರಿದಂತೆ ಇತರರು ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು. ಇದೇ ಸಮಯದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇತರೆ ಅಧಿಕಾರಿಗಳು ಕೂಡ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ದಾಖಲೆಯ ರಾಮಯ್ಯ... ನಮ್ಮ ಸಿದ್ದರಾಮಯ್ಯ

ಮೈಸೂರು, ಜ.6– ಅತೀ ಹೆಚ್ಚು ಕಾಲ ಮುಖ್ಯಮಂತ್ರಿ ಆಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ, ಅನೇಕ ಭಾಗ್ಯಗಳನ್ನು ಜನತೆಗೆ ಕೊಟ್ಟಿರುವ ಸಿದ್ದರಾಮಯ್ಯ ಅವರ ಜನಪರ ಕಾರ್ಯಗಳು ಯಶಸ್ವಿಯಾಗಿ ಮುಂದುವರೆಯಲಿ ಎಂದು ಮೈಸೂರಿನ ಅಗ್ರಹಾರದಲ್ಲಿರುವ 101 ಗಣಪತಿಗೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ, ಪಟಾಕಿ ಸಿಡಿಸಿ, ಸಂಭ್ರಮ ಆಚರಣೆ ಮಾಡಲಾಯಿತು.



ಈ ಸಂದರ್ಭದಲ್ಲಿ ಕೆಆರ್. ಕ್ಷೇತ್ರದ ಮಾಜಿ ಶಾಸಕ ಸೋಮಶೇಖರ್, ಎಂ.ಲಕ್ಷ್ಮಣ್, ಎಚ್.ಎ. ವೆಂಕಟೇಶ್, ಆರ್ ಮೂರ್ತಿ, ಡಾ. ಬಿ ಜೆ ವಿಜಯ್ ಕುಮಾರ್, ರಾಮಪ್ಪ, ಬಿ.ಎಂ. ರಾಮು, ಜಿ ಸೋಮಶೇಖರ್, ಬಾಲಕೃಷ್ಣ, ಡೈರಿ ವೆಂಕಟೇಶ್, ಸೈಯದ್ ಅಬ್ರಾರ್, ಹೊಯ್ಸಳ, ಮುಖಂಡರಾದ ಆರ್.ಎಚ್. ಕುಮಾರ, ಗುಣಶೇಖರ್ ರೋಹಿತ್ ಸಿಂಗ್, ವಿಶ್ವ, ಸದಾನಂದ, ಫಾರೂಕ್, ಅರುಣ್, ವಿವೇಕ್ ಕುಮಾರ್ ಇನ್ನೂ ಅನೇಕ ಕಾಂಗ್ರೆಸ್ ಪಕ್ಷದ ಯುವ ಮುಖಂಡರು ಉಪಸ್ಥಿತರಿದ್ದರು.

ಶಾಶ್ವತ ಪರಿಹಾರ

ಈಗ ವಿಶ್ವವಿದ್ಯಾನಿಲಯದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ರೂಪಿಸಬೇಕಿದ್ದು, ಈ ನಿಟ್ಟಿನಲ್ಲಿ ವಿಶೇಷವಾಗಿ ಗಮನ ಹರಿಸುತ್ತೇನೆ ಎಂದು ಸಿದ್ದರಾಮಯ್ಯ ಆಶ್ವಾಸನೆ ನೀಡಿದರು. ಉದ್ಯೋಗ ಖಾತ್ರಿ ಯೋಜನೆಗೆ ಈ ಮೊದಲು ಕೇಂದ್ರ ಸರ್ಕಾರ ಶೇಕಡ 90 ಹಣ ನೀಡಿದರೆ, ರಾಜ್ಯ ಸರ್ಕಾರ ಶೇಕಡ 10 ರಷ್ಟು ಹಣ ನೀಡುತ್ತಿತ್ತು. ಆದರೆ ಈಗ ಕೇಂದ್ರ ಸರ್ಕಾರ ಶೇಕಡ 60 ರಷ್ಟು ಹಣ ನೀಡುತ್ತಿದ್ದು, ರಾಜ್ಯ ಸರ್ಕಾರ ಶೇಕಡ 40 ಹಣ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ 2,500 ಕೋಟಿ ರೂಪಾಯಿ ಹೊರೆಯಾಗಿದೆ ಎಂದು ತಿಳಿಸಿದರು. ಇದಿಷ್ಟೆ ಅಲ್ಲದೆ ಜಿಎಸ್‌ಟಿಯಿಂದಲೂ ನಮಗೆ ಅನ್ಯಾಯವಾಗುತ್ತಿದ್ದು, 6 ಸಾವಿರ ರೂಪಾಯಿ ಸಂದಾಯವಾಗಬೇಕಿದೆ. ಈ ಸಂಬಂಧ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿದರು.

ಸಾಧನೆ ಸಂಖ್ಯೆಗಳಲ್ಲ!

ಅವರ ಆಡಳಿತಾವಧಿಯಲ್ಲಿನ ವೈಫಲ್ಯಗಳ ಪಟ್ಟಿ ಮಾಡಿರುವ ಬಿಜೆಪಿ, ಮೊದಲ ಸಾಧನೆ 7 ವರ್ಷ 240 ದಿನಗಳ ಆಡಳಿತದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. 2ನೇ ದಾಖಲೆ ಸಾಲದ ಹೊರೆ ಅಧಿಕವಾಗಿದೆ.

3ನೇ ದಾಖಲೆ ಅಭಿವೃದ್ಧಿ ಶೂನ್ಯವಾಗಿದೆ. 4ನೇ ದಾಖಲೆ ಕರುನಾಡು ಗೂಂಡಾ ರಾಜ್ಯವಾಗಿದೆ. 5ನೇ ದಾಖಲೆ ಶಾಲೆಗಳು ಪಾಳು ಬಿದ್ದಿದೆ. 6ನೇ ದಾಖಲೆ ಜಲಾಶಯಗಳು ಹೂಳು ತುಂಬಿವೆ.

7ನೇ ದಾಖಲೆ ನೇಮಕಾತಿ ನಡೆಯದಾಗಿದೆ. 8ನೇ ದಾಖಲೆ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗಿದೆ 9ನೇ ದಾಖಲೆ ರೈತರ ಆತ್ಮಹತ್ಯೆ ಲೆಕ್ಕಕ್ಕೆ ಸಿಗದಾಗಿದೆ.

10ನೇ ದಾಖಲೆ ರಾಜ್ಯದಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. 11ನೇ ದಾಖಲೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಮುಟ್ಟಿದೆ. 12ನೇ ದಾಖಲೆ ಓಲೈಕೆ ರಾಜಕಾರಣ ಮಿತಿಮೀರಿದೆ.


ಮೈಸೂರಲ್ಲಿ ಮಳೆ; ತಂಪಾದ ಇಳೆ

ಜ.11ರವರೆಗೆ ಹಳೇ ಮೈಸೂರು ಭಾಗದಲ್ಲಿ ಮಳೆ ಸಂಭವ

ಮೈಸೂರು,ಜ.6(ಪಿಎಂ)– ಮೈಸೂರು ನಗರದಲ್ಲಿ ಮಂಗಳವಾರ ಸಂಜೆ ಕೆಲಕಾಲ ತುಂತುರುವಿನಿಂದ ಕೂಡಿದ ತುಸು ಜೋರು ಮಳೆಯಾಯಿತು.

ಮೈಸೂರಿನ ಹೃದಯಭಾಗವೂ ಸೇರಿದಂತೆ ಬಹುತೇಕ ಭಾಗದಲ್ಲಿ ಸಂಜೆ ಸುಮಾರು 6 ಗಂಟೆ ವೇಳೆಗೆ ಮೋಡ ಕವಿದ ವಾತಾವರಣವಿದ್ದು, ಮಳೆ ಮುನ್ಸೂಚನೆ ನೀಡಿತು. ಕೆಲವೇ ಹೊತ್ತಿನಲ್ಲಿ ಮಳೆಯ ಆರಂಭವಾಯಿತು.

ಮೈಸೂರಿನ ಚಾಮರಾಜಪುರಂ, ಕುವೆಂಪುನಗರ, ಸರಸ್ವತಿಪುರಂ, ಬೋಗಾದಿ, ಜಯಲಕ್ಷ್ಮೀಪುರಂ, ವಿಜಯನಗರ, ಹೆಬ್ಬಾಳು ಸೇರಿದಂತೆ ನಗರದ ಬಹುತೇಕ ಪ್ರದೇಶದಲ್ಲಿ ಕೆಲಕಾಲ ಮಳೆ ಸುರಿಯಿತು. ಆ ಮೂಲಕ ಚಳಿಯೊಂದಿಗೆ ಇನ್ನಷ್ಟು ತಂಪಾದ ವಾತಾವರಣ ಸೃಷ್ಟಿಯಾಗಿತ್ತು.




ಮೈಸೂರು ಅರಮನೆ ಉತ್ತರ ದ್ವಾರದ ಎದುರಿನ ಚಾಮರಾಜ ಒಡೆಯರ್ ವೃತ್ತದಲ್ಲಿ ಮಳೆ ನೀರು ನಿಂತಿರುವುದು.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮೈಸೂರು, ಚಾಮರಾಜನಗರ, ಕೊಡಗು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಜಿಲ್ಲೆಯಲ್ಲಿ ಜ.7ರಿಂದ 11 ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ಹಗುರ ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಸಫಾರಿ ಪುನರಾರಂಭಕ್ಕೆ ರೈತರ ತೀವ್ರ ವಿರೋಧ

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ



ಸಫಾರಿ ಆರಂಭಿಸದಂತೆ ರೈತ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು, ಜ.6– ಬಂಡೀಪುರ–ನಾಗರಹೊಳೆಯಲ್ಲಿ ಮತ್ತೆ ಸಫಾರಿ ಆರಂಭಿಸದಂತೆ ರಾಜ್ಯ ಕಬ್ಬು ಬೆಳೆಗಾರರ ಸಂಘವು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ. ನಗರದ ಮಾನಸಗಂಗೋತ್ರಿ ಸೆನೆಟ್ ಭವನದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಯಾದ ಸಂಘದ ಪದಾಧಿಕಾರಿಗಳು, ಮತ್ತೆ ಸಫಾರಿಗೆ ಅವಕಾಶ ನೀಡಿದರೆ ಅದು ರೈತರಿಗೆ ಮರಣ ಶಾಸನವಾಗಲಿದೆ ಎಂದು ಎಚ್ಚರಿಸಿದರು.

ಕಳೆದ ತಿಂಗಳಷ್ಟೇ ಜಿಲ್ಲೆಯ ಹೆಚ್.ಡಿ.ಕೋಟೆ ಹಾಗೂ ಸರಗೂರಿನಲ್ಲಿ ಹುಲಿ ದಾಳಿಗೆ ನಾಲ್ವರು ರೈತರು ಬಲಿಯಾಗಿದ್ದಾರೆ. ವನ್ಯಜೀವಿ ಹಾಗೂ ಮಾನವ ಸಂಘರ್ಷ ಹೆಚ್ಚಲು ಸಫಾರಿ ಹಾಗೂ ರೆಸಾರ್ಟ್‌ಗಳೂ ಕಾರಣ ಎಂದು ರೈತ ಸಂಘಟನೆಗಳು ಹೋರಾಟ ನಡೆಸಿದ ನಂತರ ಅನಧಿಕೃತ ರೆಸಾರ್ಟ್ ಮತ್ತು ಸಫಾರಿ ಬಂದ್ ಮಾಡಿದ್ದರಿಂದ ರೈತರು ನಿಟ್ಟುಸಿರು ಬಿಟ್ಟಿದ್ದರು. ಆದರೆ ಬಂಡವಾಳ ಶಾಹಿಗಳು ಹಾಗೂ ರಾಜಕಾರಣಿಗಳ ಪ್ರಭಾವಕ್ಕೆ ಮಣಿದು ಮತ್ತೆ ರೆಸಾರ್ಟ್ ಹಾಗೂ ಸಫಾರಿ ಆರಂಭಕ್ಕೆ ಅನುಮತಿ ನೀಡಿದರೆ, ಅದಕ್ಕೆ ನಾವು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

ಈ ವೇಳೆ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಜಿಲ್ಲಾ ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ವರಕೂಡು ನಾಗೇಶ್, ಮುಖಂಡ ಮೇಗಳಕೊಪ್ಪಲು ಕುಮಾರ್ ಮತ್ತಿತರರಿದ್ದರು.

ಮೈಸೂರು ಮಿತ್ರ

ಬಳ್ಳಾರಿ ಘಟನೆ ಸಂಬಂಧ ತಿಳಿದು ಮಾತಾಡಬೇಕು; ತಪ್ಪಿದಲ್ಲಿ ಸಮಾಜದಲ್ಲಿ ವ್ಯತಿರಿಕ್ತ ಪರಿಣಾಮ

● ವಿಪಕ್ಷಗಳ ವರ್ತನೆಗೆ ಗೃಹ ಸಚಿವರ ಎಚ್ಚರಿಕೆ ● ಗುಂಡಿಗೆ ಬಲಿಯಾದ ವ್ಯಕ್ತಿಯ ದೇಹದ 2ನೇ ಬಾರಿ ಮರಣೋತ್ತರ ಪರೀಕ್ಷೆ ಪ್ರಸ್ತಾಪಕ್ಕೆ ಸಿಡಿಮಿಡಿ

ಬೆಂಗಳೂರು, ಜ.6(ಕೆಎಂಶಿ)–ಬಳ್ಳಾರಿ ಘಟನೆ ಕುರಿತು ತಿಳಿದುಕೊಂಡು ಮಾತನಾಡಬೇಕು, ಇಲ್ಲವಾದರೆ ಬೇರೆ ರೀತಿ ಪರಿಣಾಮ ಆಗುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಎಚ್ಚರಿಸಿದ್ದಾರೆ.

ನನ್ನನ್ನೂ ಸೇರಿದಂತೆ ರಾಜಕೀಯ ನಾಯಕರು ಮಾತನಾಡುವಾಗ ಹೇಳಿಕೆಗಳು ಸಮಾಜದಲ್ಲಿ ಏನಾಗಬಹುದು ಎಂಬುದನ್ನು ಅರಿತುಕೊಂಡು ಮಾತನಾಡಬೇಕು ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಳ್ಳಾರಿ ಘಟನೆಯಲ್ಲಿ ಗುಂಡಿಗೆ ಬಲಿಯಾದ ವ್ಯಕ್ತಿಯ ದೇಹದ ಮರಣೋತ್ತರ ಪರೀಕ್ಷೆಯನ್ನು ಎರಡು ಸಲ ನಡೆಸಿಲ್ಲ ಎಂಬುದಾಗಿ ವೈದ್ಯರು ಸ್ಪಷ್ಟಪಡಿಸಿದ್ದಾರೆ. ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದಿರುವ ವಿರೋಧ ಪಕ್ಷದ ನಾಯಕರು, ಇದನ್ನು ನೋಡಿದ್ದಾರೆಯೇ.

ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರೇ ಹೇಳಿಕೆ ನೀಡಿದ್ದಾರೆ. ಇನ್ನು ಯಾರ ಮಾತನ್ನು ನಂಬಬೇಕು. ಎರಡು ಸಲ ಮರಣೋತ್ತರ ಪರೀಕ್ಷೆ ನಡೆಸಿಲ್ಲ ಎಂದಿರುವ ವೈದ್ಯರ ಮಾತನ್ನು ನಾನು ಕೂಡ ಒಪ್ಪುತ್ತೇನೆ.


ಡಾ.ಜಿ.ಪರಮೇಶ್ವರ್

ನನಗೆ ಅರಿವಿದೆ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ನಾನು ಮೂರನೇ ಸಲ ಗೃಹ ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ಯಾವ ಸಂದರ್ಭದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದ ಕಾನೂನು ವ್ಯವಸ್ಥೆ ದೃಷ್ಟಿಯಿಂದ ಏನೆಲ್ಲ ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಅರಿವು ನನಗಿದೆ. 38 ವರ್ಷ ರಾಜಕಾರಣ ಮಾಡಿದ್ದೇನೆ. ಪಕ್ಷ ಮತ್ತು ಸರ್ಕಾರದಲ್ಲಿ ಅನೇಕ ಜವಾಬ್ದಾರಿ ನಿಭಾಯಿಸಿದ್ದೇನೆ ಎಂದರು.

ನನಗೂ ಅಪಾರ ಅನುಭವ ಇದೆ ರಾಜ್ಯದ ಕಾನೂನು ಸುವ್ಯವಸ್ಥೆ ಕಾಪಾಡಲು ಯಾವ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು. ಕಠಿಣವಾದ ನಿರ್ಧಾರಗಳನ್ನು ಯಾವಾಗ ತೆಗೆದುಕೊಳ್ಳಬೇಕೋ ಆವಾಗ ತೆಗೆದುಕೊಂಡಿದ್ದೇನೆ. ಹೆಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವರಾಗಿದ್ದಾರೆ. ಇಡೀ ರಾಷ್ಟ್ರದ ಮಾಹಿತಿ ಅವರ ಬಳಿ ಇದೆ. ಯಾವ ರಾಜ್ಯದಲ್ಲಿ ಏನೇನು ಆಗುತ್ತಿದೆ ಎಂಬುದು ಅವರಿಗೆ ಗೊತ್ತಿದೆ. ಒಂದು ಘಟನೆಯನ್ನು ಆಧರಿಸಿ ವ್ಯವಸ್ಥೆಯನ್ನು ಅಳತೆ ಮಾಡಲು, ಸರ್ಟಿಫಿಕೇಟ್ ಕೊಡಲು ಆಗುವುದಿಲ್ಲ.

ಕಾನೂನು ಸುವ್ಯವಸ್ಥೆ ಕಾಪಾಡುವ ಕುರಿತು ಪೊಲೀಸ್ ಇಲಾಖೆ ಹಂತದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಇಂತಹ ಘಟನೆಗಳಾದ ಸಂದರ್ಭದಲ್ಲಿ ಸರ್ಕಾರ ಕೆಲವು ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡುತ್ತದೆ ಎಂದರು.

ಅಭಿನಂದನೆ: ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 2,792 ದಿನಗಳ ಆಡಳಿತ ಸರಿಗಟ್ಟಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇದೇ ಸಂದರ್ಭದಲ್ಲಿ ಅಭಿನಂದಿಸಿದರು. ಈ ದಾಖಲೆ ಮುರಿಯಲು ಸಿದ್ದರಾಮಯ್ಯನವರಿಗೆ ಅವಕಾಶ ಮಾಡಿಕೊಟ್ಟ ಕಾಂಗ್ರೆಸ್ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ್ ಖರ್ಗೆ, ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೂ ಅಭಿನಂದನೆ.

ಕಾಂಗ್ರೆಸ್‌ನಲ್ಲಿ ಮಾತ್ರ ಸಾಧ್ಯ: ಕಾಂಗ್ರೆಸ್‌ನಲ್ಲಿ ಮಾತ್ರ ಇಂತಹ ಅವಕಾಶಗಳು ಸಾಧ್ಯ, ದೇವರಾಜ ಅರಸು ಅವರಿಗೂ ಅವಕಾಶ ನೀಡಲಾಗಿತ್ತು. ಈಗ ಸಿದ್ದರಾಮಯ್ಯ ಅವರಿಗೂ ಅವಕಾಶ ಕೊಟ್ಟಿದ್ದಾರೆ. ಬಡವರು ಮತ್ತು ಅಭಿವೃದ್ಧಿ ಬಗ್ಗೆ ಪಕ್ಷಕ್ಕೆ ಇರುವ ದೂರದೃಷ್ಟಿಯ ಬದ್ಧತೆ ಮತ್ತು ಸಿದ್ಧಾಂತದಿಂದ ಇದೆಲ್ಲ ಸಾಧ್ಯವಾಗಿದೆ ಎಂದು ತಿಳಿಸಿದರು.

ನಾಡಗೀತೆ ಮೈಸೂರು ಅನಂತಸ್ವಾಮಿ ರಾಗ ಸಂಯೋಜನೆಯೇ ಅಂತಿಮ

ಸರ್ಕಾರದ ಆದೇಶ ಊರ್ಜಿತ; ಆಕ್ಷೇಪ ತಳ್ಳಿ ಹಾಕಿದ ಹೈಕೋರ್ಟ್

ಮೈಸೂರು, ಜ. 6 (ಆರ್‌ಕೆ)– ಮೈಸೂರು ಅನಂತ ಸ್ವಾಮಿ ರಾಗ ಸಂಯೋಜನೆಯಲ್ಲಿ ರಚಿಸಿರುವ ನಾಡಗೀತೆಯೇ ಅಂತಿಮ ಎಂದು ರಾಜ್ಯ ಉಚ್ಚ ನ್ಯಾಯಾಲಯ ಆದೇಶಿಸಿದೆ. ನಾಡಗೀತೆ ಸಂಬಂಧ ರಾಜ್ಯ ಸರ್ಕಾರ ಪ್ರಕಟಿಸಿದ್ದ ಆದೇಶ ಎತ್ತಿ ಹಿಡಿದಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿದ್ದ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲ ಎಂದು ಹೈಕೋರ್ಟ್ ವಜಾಗೊಳಿಸಿದೆ.




ಮೈಸೂರು ಅನಂತಸ್ವಾಮಿ

ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಮತ್ತು ವಿಭು ಬಬ್ರು ನೇತೃತ್ವದ ವಿಭಾಗೀಯ ಪೀಠವು ಮೈಸೂರು ಅನಂತ ಸ್ವಾಮಿ ರಾಗ ಸಂಯೋಜನೆಯಂತೆ ನಾಡಗೀತೆ ಹಾಡುವಂತೆ ಆದೇಶಿಸಿದೆ.

ಇಂತಿಷ್ಟೇ ರಾಗದಲ್ಲಿ ನಾಡಗೀತೆ ಹಾಡಬೇಕೆಂದು ಸರ್ಕಾರ ನೀಡಿರುವ ಆದೇಶದಲ್ಲಿ ಅರ್ಜಿದಾರರ ಸಾಂವಿಧಾನಿಕ ಹಕ್ಕಿಗೆ ಧಕ್ಕೆಯಾಗಿಲ್ಲ. ಅರ್ಜಿದಾರರಿಗೆ ಬೇಕಾದಂತೆ ಹಾಡಲು ಯಾರೂ ತಡೆಯುತ್ತಿಲ್ಲ ಎಂದೂ ಪೀಠ ತಿಳಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದಿಸಿದ ವಕೀಲರು, ಮೈಸೂರು ಅನಂತ ಸ್ವಾಮಿಯವರು ಎರಡು ಚರಣಗಳಿಗೆ ಮಾತ್ರ ರಾಗ ಸಂಯೋಜನೆ ಮಾಡಿದ್ದಾರೆ. ಈ ಸಂಬಂಧ ರಚಿಸಿದ್ದ ಎರಡು ಸಮಿತಿಗಳ ಅಭಿಪ್ರಾಯವನ್ನು ಸರ್ಕಾರ ಪರಿಗಣಿಸಿಲ್ಲ. ಅಲ್ಲದೇ ಸಾರ್ವಜನಿಕರಿಂದ ಆಕ್ಷೇಪಣೆ ಪಡೆಯದೇ ಆದೇಶ ಹೊರಡಿಸಲಾಗಿದೆ ಎಂದು ಆರೋಪಿಸಿದರು.

ನಾಡಗೀತೆಗೆ ಒಂದೇ ರೀತಿಯಲ್ಲಿ ರಾಗ ಸಂಯೋಜಿಸಿಲ್ಲ. ಎರಡು ಚರಣಗಳಿಗೆ ಸಂಯೋಜಿಸಿರುವ ರಾಗವನ್ನು ಇಡೀ ಗೀತೆಗೇ ಅನ್ವಯಿಸುವುದು ಆಕ್ಷೇಪಾರ್ಹ ಎಂದು ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದರು.

ಅವರ ವಾದವನ್ನು ತಳ್ಳಿ ಹಾಕಿದ ನ್ಯಾಯಪೀಠವು, ಅರ್ಜಿದಾರರ ಹೇಳಿಕೆಯಲ್ಲಿ ಉರುಳಿಲ್ಲ ಇಲ್ಲ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠವು, ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿದೆ.

ಸಿಲ್ಕ್ ಫ್ಯಾಬ್ ಮೇಳಕ್ಕೆ ಚಾಲನೆ...


ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಆಯೋಜಿಸಿರುವ ಸಿಲ್ಕ್ ಫ್ಯಾಬ್ ಮೇಳಕ್ಕೆ ಕಂದಾಯ ಇಲಾಖೆ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಚಾಲನೆ ನೀಡಿದರು. ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಪ್ರಾದೇಶಿಕ ವ್ಯವಸ್ಥಾಪಕ ಅಭಯ್ ಟಂಡನ್, ನೇಕಾರರ ಸೇವಾ ಕೇಂದ್ರದ ಉಪ ನಿರ್ದೇಶಕ ಸಿ.ಪ್ರಭಾಕರಣ್, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಸಹಾಯಕ ವ್ಯವಸ್ಥಾಪಕ ವಿಜಯ್ ಉಪರಿ ಮತ್ತಿತರರಿದ್ದರು.

ನೇಮಕಾತಿ ಪತ್ರ ವಿತರಣೆ...


ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಶಿಫಾರಸಿನ ಮೇರೆಗೆ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಪ್ರಚಾರ ಸಮಿತಿಯ ವರುಣ ಕ್ಷೇತ್ರದ ಬ್ಲಾಕ್ ಅಧ್ಯಕ್ಷರಾಗಿ ನೇಮಕಗೊಂಡ ಮೇಗಳಾಪುರ ಬೈರೇಗೌಡರಿಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ವಿನಯ್‌ಕುಮಾರ್ ಸೊರಕೆ ನೇಮಕಾತಿ ಪತ್ರ ವಿತರಿಸಿದರು. ಈ ವೇಳೆ ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷ ಕೋಟೆ ಎಂ.ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ, ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮಾವಿನಹಳ್ಳಿ ಸಿ.ರವಿ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ದಾಖಲೆ; ಮೈಸೂರು ಪಾಕ್ ವಿತರಣೆ


ಕೃಷ್ಣರಾಜ ಯುವ ಬಳಗದಿಂದ ನಗರದ ಸಿಟಿ ಬಸ್ ನಿಲ್ದಾಣದಲ್ಲಿ ಸಿದ್ದರಾಮಯ್ಯ ದೀರ್ಘಾವಧಿ ಮುಖ್ಯಮಂತ್ರಿ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮೈಸೂರ್ ಪಾಕ್ ವಿತರಿಸಿ ಸಂಭ್ರಮಿಸಲಾಯಿತು. ಈ ವೇಳೆ ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್, ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್ ಕೆಂಪಿ, ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ರಾಕೇಶ್, ದುರ್ಗಾಪ್ರಸಾದ್, ರವಿನಂದನ್, ವಿನಯ್‌ಕುಮಾರ್, ಹೇಮಂತ್, ರಾಜು ಇನ್ನಿತರರಿದ್ದರು.

ಸಿದ್ದರಾಮಯ್ಯರನ್ನು ಅಭಿನಂದಿಸಿದ ಮಾಜಿ ಶಾಸಕ ಹೆಚ್.ಪಿ.ಮಂಜನಾಥ್

ಮೈಸೂರು, ಜ.6(ಬಿಎಲ್‌ಯು)– ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿ ದಾಖಲೆ ನಿರ್ಮಾಣ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹುಣಸೂರು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಅಭಿನಂದಿಸಿದರು.

ಮೈಸೂರಿನ ಟಿ.ಕೆ.ಬಡಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಮಂಜುನಾಥ್, ಸುದೀರ್ಘ ಮುಖ್ಯಮಂತ್ರಿಯಾಗಿರುವ ನೀವು ಬಡವರ್ಗಕ್ಕೆ ಮತ್ತಷ್ಟು ಕಾರ್ಯಕ್ರಮ ರೂಪಿಸಿ ಎಂದು ಕೋರಿದರು.

ಹುಣಸೂರಿನ ಮಾದಳ್ಳಿ ಉಕ್ಕಿನ ಕಂತೆ ಮಠದ ಮುಖ್ಯದ್ವಾರ, ಹುಣಸೂರಿನ ಕನಕ ಭವನದ ಗಣಪತಿ ದೇವಸ್ಥಾನ ಹಾಗೂ ಕೊಯಮತ್ತೂರು ಕಾಲೋನಿಯ ಕನಕ ಭವನದ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಇದೇ ವೇಳೆ ಆಹ್ವಾನ ನೀಡಿದರು.

ಈ ವೇಳೆ ಮಾದಳ್ಳಿ ಉಕ್ಕಿನ ಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮೀಜಿ, ಹುಣಸೂರು ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಹಂದನಹಳ್ಳಿ ಸೋಮಶೇಖರ್, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ಉಪಸ್ಥಿತರಿದ್ದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿರುವ ಹಿನ್ನೆಲೆಯಲ್ಲಿ ಸ್ನೇಹಜೀವಿ ಹೆಚ್.ಪಿ.ಮಂಜುನಾಥ್ ಅಭಿಮಾನಿಗಳು ಸಿಹಿ ಹಂಚಿ ಸಂಭ್ರಮಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2,793 ದಿನಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಸ್ನೇಹಜೀವಿ ಹೆಚ್.ಪಿ. ಮಂಜುನಾಥ್ ಅಭಿಮಾನಿಗಳು ಸಿಹಿ ಹಂಚಿ, ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಹುಣಸೂರು ನಗರ ಕಾಂಗ್ರೆಸ್ ಅಧ್ಯಕ್ಷ ರವಿ ಪ್ರಸನ್ನ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಲ್ಕುಣಿಕೆ ರಾಘು, ಅಕ್ರಮ ಸಕ್ರಮ ಸಮಿತಿ ಸದಸ್ಯ ಹೆಚ್.ಎಸ್.ಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಮತ್ತು ಜಾಗೃತಿ ಸಮಿತಿ ಸದಸ್ಯ ನೇರಳೆಕುಪ್ಪೆ ಮಹದೇವ್, ಯುವ ಕಾಂಗ್ರೆಸ್ ಅಧ್ಯಕ್ಷ ದರ್ಶನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಅಂತರರಾಷ್ಟ್ರೀಯ ಗ್ಲೋಬಲ್ ನೀ ಸಮಿಟ್‌ಗೆ ಮೈಸೂರಿನ ಡಾ.ಬೋಗಾದಿ ಪ್ರಶಾಂತ್ ಆಯ್ಕೆ

ಮೈಸೂರು, ಜ.6–ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಖ್ಯಾತ ಕೀಲು ಬದಲಿ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಬೋಗಾದಿ ಪ್ರಶಾಂತ್ ಅವರು ಯುಎಇಯ ದುಬೈನಲ್ಲಿ ನಡೆಯಲಿರುವ ಪ್ರತಿಷ್ಠಿತ ಅಂತರರಾಷ್ಟ್ರೀಯ ಅಸ್ಥಿರೋಗ ಸಮ್ಮೇಳನ ಗ್ಲೋಬಲ್ ನೀ ಸಮಿಟ್ 2026 (Global Knee Summit 2026)ಕ್ಕೆ ಫ್ಯಾಕಲ್ಟಿ ಸದಸ್ಯರಾಗಿ ಆಹ್ವಾನಿಸಲ್ಪಟ್ಟಿದ್ದಾರೆ. ಜನವರಿ 22ರಿಂದ 24ರವರೆಗೆ ನಡೆಯಲಿರುವ ಈ ಜಾಗತಿಕ ಶೃಂಗಸಭೆಯು ವಿಶ್ವದ ಅಗ್ರಗಣ್ಯ ಅಸ್ಥಿರೋಗ ತಜ್ಞರು ಮತ್ತು ಸಂಶೋಧಕರ ಸಮಾಗಮಕ್ಕೆ ಸಾಕ್ಷಿಯಾಗಲಿದೆ. ಅಮೆರಿಕದ ಡಾ.ಕೆವಿನ್ ಪ್ಲಾಂಚರ್ ಮತ್ತು ಪುಣೆಯ ಸಂಚೇತಿ ಆಸ್ಪತ್ರೆಯ ಅಧ್ಯಕ್ಷ ಡಾ.ಪರಾಗ್ ಸಂಚೇತಿ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.


ಡಾ.ಪ್ರಶಾಂತ್

ಮೈಸೂರು ಕೋರ್ಟ್‌ಗೆ ಮತ್ತಷ್ಟು ಭದ್ರತೆ ನೀಡಿ

ಮೈಸೂರು, ಜ.6(ಬಿಎಲ್‌ಯು)– ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಮೈಸೂರು ನ್ಯಾಯಾಲಯಕ್ಕೆ ಹೆಚ್ಚಿನ ಭದ್ರತೆ ನೀಡಬೇಕೆಂದು ಕರ್ನಾಟಕ ಪ್ರಜಾ ಪಾರ್ಟಿ (ರೈತಪರ್ವ) ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಆಗ್ರಹಿಸಿದ್ದಾರೆ. ನ್ಯಾಯಾಲಯವನ್ನು ಸ್ಫೋಟಿಸುವುದಾಗಿ ಸುಳ್ಳು ಸಂದೇಶ ನೀಡಿರುವ ವ್ಯಕ್ತಿಯನ್ನು ಪತ್ತೆ ಮಾಡಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ. ಇಂತಹ ಸುಳ್ಳು ಇ–ಮೇಲ್ ರವಾನೆ ಮಾಡುವವರಿಗೆ ಜೀವಾವಧಿ ಶಿಕ್ಷೆ ವಿಧಿಸಲು ಕಾಯ್ದೆ ರೂಪಿಸುವಂತೆ ಡಾ.ಶಿವಣ್ಣ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.


ಡಾ.ಶಿವಣ್ಣ

ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆ; ಪೌರಕಾರ್ಮಿಕರಿಗೆ ನಾಟಿಕೋಳಿ ಬಿರಿಯಾನಿ


ಪೌರಕಾರ್ಮಿಕರಿಗೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ನಾಟಿಕೋಳಿ ಬಿರಿಯಾನಿ ಬಡಿಸಿದರು.

ಮೈಸೂರು, ಜ.6– ಕರ್ನಾಟಕ ಇತಿಹಾಸದಲ್ಲಿ ಇಂದಿನ ದಿನಗಳಲ್ಲಿ ಸುದೀರ್ಘ ಕಾಲ ರಾಜ್ಯವಾಳಿ ದಾಖಲೆ ನಿರ್ಮಾಣ ಮಾಡಿ, ಜನರ ಮನಸ್ಸಿನಲ್ಲಿ ಉಳಿಯುವುದು ಅಷ್ಟು ಸುಲಭವಲ್ಲ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರವರು ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿ ದಾಖಲೆ ನಿರ್ಮಿಸಿದ ಅಂಗವಾಗಿ ಸಿದ್ದರಾಮಯ್ಯ ಬ್ರಿಗೇಡ್ ಅಧ್ಯಕ್ಷ ಹಿನಕಲ್ ಉದಯ್ ನೇತೃತ್ವದಲ್ಲಿ ಹೂಟಗಳ್ಳಿ ನಗರಸಭೆಯ ಪೌರಕಾರ್ಮಿಕರಿಗೆ ಏರ್ಪಡಿಸಿದ್ದ ನಾಟಿಕೋಳಿ ಬಿರಿಯಾನಿ, ಲಾಡು ವಿತರಿಸಿ ಮಾತನಾಡಿದ ಅವರು ಸಿದ್ದರಾಮಯ್ಯನವರು ಏಳು ವರ್ಷ 240 ದಿನ ಮುಖ್ಯಮಂತ್ರಿಯಾಗಲು ಅವರು ಸವೆಸಿದ ಹಾದಿ ದುರ್ಗಮವಾದುದು. ಸುದೀರ್ಘ 45 ವರ್ಷದ ರಾಜಕಾರಣದಲ್ಲಿ ಸುತ್ತಿ ಪಕ್ಷಕಟ್ಟಿ, ಸಂಘಟನೆ ಮಾಡಿ ಅಹಿಂದ ವರ್ಗ, ತಳಸಮುದಾಯಗಳ ವಿಶ್ವಾಸಗಳಿಸಿ ಅವರ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತು ಜನಪರ ಯೋಜನೆಗಳನ್ನು ಜಾರಿಗೆ ತಂದು ಮಾಸ್ ಲೀಡರ್ ಆಗಿ ಸಿದ್ದರಾಮಯ್ಯ ಬೆಳೆದರು.

ಮುಖ್ಯಮಂತ್ರಿಯಾಗಿ ಅನ್ನಭಾಗ್ಯ, ಕ್ಷೀರ ಭಾಗ್ಯ, ವಿದ್ಯಾಸಿರಿ, ಕೃಷಿ ಭಾಗ್ಯ, ಮೈತ್ರಿ, ಮನಸ್ವಿನಿ, 7ನೇ ವೇತನ ಆಯೋಗ, ರೈತರಿಗೆ ಬಡ್ಡಿರಹಿತ ಸಾಲ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಎಸ್.ಇ.ಪಿ., ಟಿಎಸ್‌ಪಿ ಯೋಜನೆ, ನಿಗಮ ಮಂಡಳಿಗಳ ಸಾಲ ಮನ್ನಾ, ಮಹಿಳೆಯರ ಸಬಲೀಕರಣಕ್ಕೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು 16 ಬಜೆಟ್‌ಗಳನ್ನು ಮಂಡಿಸಿ ದಾಖಲೆ ನಿರ್ಮಿಸಿ ಸಮೃದ್ಧ ಕರ್ನಾಟಕವನ್ನು ನಿರ್ಮಾಣ ಮಾಡಿದ್ದಾರೆ. ಅವರಿಗೆ ಚಾಮುಂಡೇಶ್ವರಿ ತಾಯಿ ಆಯುಷ್ಯ, ಆರೋಗ್ಯ ಅಧಿಕಾರ ನೀಡಲಿ. 5 ವರ್ಷ ಮುಖ್ಯಮಂತ್ರಿಯಾಗಿ ಅವಧಿ ಪೂರೈಸಲಿ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ನಗರಸಭೆ ಆಯುಕ್ತ ಚಂದ್ರಶೇಖರ್, ಹಿನಕಲ್ ಉದಯ್, ಶ್ರೀನಿವಾಸ್, ಕೆ.ಜಿ.ನಾಗರಾಜ್, ಹಿನಕಲ್ ಪ್ರಕಾಶ್, ಆರೀಫ್‌ಪಾಷ, ಕೇರ್ಗಳ್ಳಿ ಸೊಸೈಟಿ ಅಧ್ಯಕ್ಷ ಮಹಾದೇವ್, ಸ್ವಾಮಿಗೌಡ, ಮಹೇಶ್, ಹರೀಶ್, ತ್ಯಾಗರಾಜ್ ಹಾಜರಿದ್ದರು.

ಬಳ್ಳಾರಿ ಗಲಭೆ: ಗನ್‌ಮ್ಯಾನ್ ಸೇರಿ 26 ಮಂದಿ ಬಂಧನ; ಪರಪ್ಪನ ಅಗ್ರಹಾರ ಜೈಲಿಗೆ ಸ್ಥಳಾಂತರ

ಬೆಂಗಳೂರು: ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಅವರ ನಿವಾಸದ ಹೊರಗೆ ನಡೆದ ಬ್ಯಾನರ್ ಘರ್ಷಣೆ ಪ್ರಕರಣದಲ್ಲಿ ಗನ್‌ಮ್ಯಾನ್ ಗುರುಚರಣ್ ಸಿಂಗ್ ಸೇರಿ 26 ಆರೋಪಿಗಳನ್ನು ಬಳ್ಳಾರಿ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ. ಬಂಧಿತರಲ್ಲಿ 13 ಮಂದಿ ಬಿಜೆಪಿ ಮತ್ತು 10 ಮಂದಿ ಕಾಂಗ್ರೆಸ್ ಕಾರ್ಯಕರ್ತರಾಗಿದ್ದಾರೆ. ಬಂಧಿತ ಆರೋಪಿಗಳಿಗೆ ಬಳ್ಳಾರಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ.

ಹೊಸ ವರ್ಷದ ಮೊದಲ ದಿನವೇ ಗಣಿನಾಡು ಬಳ್ಳಾರಿ ಹೊತ್ತಿ ಉರಿದಿತ್ತು. ಘರ್ಷಣೆ ವೇಳೆ ನಡೆದಿದ್ದ ಗುಂಡಿನ ದಾಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಸಾವನ್ನಪ್ಪಿದ್ದರು. ಶಾಸಕ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿ ಗನ್‌ಮ್ಯಾನ್‌ನಿಂದಲೇ ಈ ಫೈರಿಂಗ್ ಆಗಿದೆ ಎನ್ನಲಾಗುತ್ತಿದ್ದು. ಗನ್‌ಮ್ಯಾನ್ ಗುರುಚರಣ್ ಸಿಂಗ್ ವಿರುದ್ಧವೇ ಪೊಲೀಸರು ಬೊಟ್ಟು ಮಾಡಿದ್ದರು. ಗುರುಚರಣ್ ಹಾರಿಸಿದ್ದ ಬುಲೆಟ್‌ಗೆ ರಾಜಶೇಖರ್ ಮೃತಪಟ್ಟಿದ್ದಾನೆಂದು ಪೊಲೀಸ್ ಮೂಲಗಳು ತಿಳಿಸಿದ್ದವು. ಇದರಂತೆ ಗುರುಚರಣ್ ಸೇರಿದ 26 ಮಂದಿ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಈ ನಡುವೆ ಮೃತ ಕಾಂಗ್ರೆಸ್ ಕಾರ್ಯಕರ್ತನ ಮನೆಗೆ ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ. ಭಾನುವಾರ ಸಂಜೆ, ಎಂಆರ್‌ವಿ ಲೇಔಟ್‌ನಲ್ಲಿರುವ ಗುರುಚರಣ್ ಸಿಂಗ್ ಅವರ ನಿವಾಸದಲ್ಲಿ ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದು, ತನಿಖೆಗೆ ಸಂಬಂಧಿಸಿದ ಹಲವಾರು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯರಿಗೆ ಸೇಬಿನ ಹಾರ...


ದೀರ್ಘಕಾಲದ ಮುಖ್ಯಮಂತ್ರಿಯಾಗಿ ದಾಖಲೆ ಬರೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೋಗಾದಿ ಗ್ರಾಮದಲ್ಲಿ 100 ಕೆ.ಜಿ. ಸೇಬಿನ ಹಾರ ಹಾಕುವ ಮೂಲಕ ಅದ್ಧೂರಿಯಾಗಿ ಸನ್ಮಾನಿಸಲಾಯಿತು. ಈ ವೇಳೆ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಬೋಗಾದಿ ತ್ಯಾಗರಾಜು, ಸ್ವಾಮಿ, ಪೈ.ಕೃಷ್ಣಪ್ಪ, ಮರಿಸಿದ್ದೇಗೌಡ, ರೇವಣ್ಣ, ಪುಟ್ಟೇಗೌಡ, ವಿಜಯಲಕ್ಷ್ಮಿ, ಸವಿತಾ ನಾಯಕ, ಮಂಜುನಾಥ ಇನ್ನಿತರರಿದ್ದರು.

ದೇಶ - ವಿದೇಶ

ಕರೂರ್ ಕಾಲ್ತುಳಿತ ಪ್ರಕರಣ: ದಳಪತಿ ವಿಜಯ್‌ಗೆ ಸಿಬಿಐ ಶಾಕ್, ಸಮನ್ಸ್!

ನವದೆಹಲಿ: ಕರೂರ್ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ದಳಪತಿ ವಿಜಯ್‌ಗೆ ಕೇಂದ್ರ ತನಿಖಾ ತಂಡ (ಸಿಬಿಐ) ಶಾಕ್ ನೀಡಿದೆ. ಜನವರಿ 12ರಂದು ಕೇಂದ್ರ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕರೂರ್ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳಗ ವೆಟ್ರಿ ಕಳಗಂ ಅಧ್ಯಕ್ಷ ದಳಪತಿ ವಿಜಯ್ ಹಾಗೂ ಪಕ್ಷದ ಹಲವು ಪದಾಧಿಕಾರಿಗಳನ್ನು ಸಿಬಿಐ ವಿಚಾರಣೆ ನಡೆಸಲಿದೆ ಎಂದು ಮಾಹಿತಿ ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗ ವಿಜಯ್ ಅವರನ್ನು ಕರೆಸಿ ವಿಚಾರಣೆ ನಡೆಸಲು ಸಿಬಿಐ ನಿರ್ಧರಿಸಿದೆ. ನಂತರ ಈ ವಿಷಯದಲ್ಲಿ ಚಾರ್ಜ್ ಶೀಟ್ ಸಲ್ಲಿಸುವ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ. ಸುಪ್ರೀಂಕೋರ್ಟ್ ಆದೇಶದ ನಂತರ ಸಿಬಿಐ, SITಯಿಂದ ಪ್ರಕರಣವನ್ನು ಕೈಗೆತ್ತಿಕೊಂಡಿದೆ. ಸೆ.27ರಂದು ತಮಿಳುನಾಡಿನ ಕರೂರ್‌ನಲ್ಲಿ ವಿಜಯ್ ಪಾಲ್ಗೊಂಡಿದ್ದ ರಾಜಕೀಯ ಸಭೆಯಲ್ಲಿ ಉಂಟಾದ ಕಾಲ್ತುಳಿತಕ್ಕೆ ಸಂಬಂಧಿಸಿದ ಸಾಕ್ಷಿಗಳನ್ನು ತನಿಖಾ ಸಂಸ್ಥೆ ಸಂಗ್ರಹಿಸುತ್ತಿದೆ. ಘಟನೆಯಲ್ಲಿ 41 ಮಂದಿ ಸಾವನ್ನಪ್ಪಿದ್ದು, 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.



ರಷ್ಯಾದ ತೈಲ ಖರೀದಿ ನಿಲ್ಲಿಸದಿದ್ದರೆ ಭಾರತಕ್ಕೆ ಇನ್ನಷ್ಟು ಸುಂಕ



ವಾಷಿಂಗ್ಟನ್: ರಷ್ಯಾದಿಂದ ಕಚ್ಚಾ ತೈಲ ಖರೀದಿ ವಿರೋಧಿಸಿ ಭಾರತದ ಮೇಲೆ ಹೆಚ್ಚುವರಿ ಶೇ.25 ಸುಂಕ ಹೇರಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಗ ಮತ್ತಷ್ಟು ಸುಂಕ ಹೇರುವ ಬೆದರಿಕೆ ಹಾಕಿದ್ದಾರೆ. ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಅಮೆರಿಕ ಮತ್ತು ಭಾರತದ ನಡುವಿನ ಮಾತುಕತೆ ಅಂತಿಮ ಹಂತಕ್ಕೆ ತಲುಪಿರುವ ಹೊತ್ತಿನಲ್ಲಿಯೇ ಈ ಬೆದರಿಕೆ ಹೊರಬಿದ್ದಿದೆ. ಹೆಚ್ಚುವರಿಯೂ ಸೇರಿ ಭಾರತದ ಮೇಲೆ ಅಮೆರಿಕವು ಈಗಾಗಲೇ ಒಟ್ಟಾರೆ ಶೇ.50ರಷ್ಟು ಸುಂಕ ವಿಧಿಸುತ್ತಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಭಾರತ ರಷ್ಯಾದಿಂದ ತೈಲ ಖರೀದಿಸುವುದನ್ನು ಮುಂದುವರಿಸಿದರೆ ನಾವು ಅದರ ಮೇಲೆ ಸುಂಕವನ್ನು ಹೆಚ್ಚಿಸಬಹುದು ಎಂದು ಸುಂಕ ಏರಿಸುವ ಸುಳಿವು ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಒಬ್ಬ ಉತ್ತಮ ವ್ಯಕ್ತಿ. ಅವರಿಗೆ ಗೊತ್ತು ನಾನು ಸಂತೋಷವಾಗಿಲ್ಲವೆಂದು. ಅವರು ನನ್ನನ್ನು ಸಂತೋಷವಾಗಿ ಇರಿಸುತ್ತಾರೆ ಎಂಬ ನಂಬಿಕೆ ಇದೆ. ಆದರೆ ರಷ್ಯಾದಿಂದ ತೈಲ ಖರೀದಿ ಮಾಡಿದರೆ ನಾವು ಅವರ ಮೇಲೆ ಸುಂಕ ಹೆಚ್ಚಿಸುವ ಸಾಧ್ಯತೆಯಿದೆ ಎಂದು ಬೆದರಿಕೆ ಹಾಕಿದ್ದಾರೆ. ಇದೇ ವೇಳೆ ಮೆಕ್ಸಿಕೋ, ಕ್ಯೂಬಾ, ಗ್ರೀನ್‌ಲ್ಯಾಂಡ್, ಇರಾನ್ ಮತ್ತು ಕೊಲಂಬಿಯಾ ದೇಶಗಳಿಗೂ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ದೆಹಲಿ ಪೊಲೀಸರಿಂದ ಎನ್‌ಕೌಂಟರ್: ಇಬ್ಬರು ಶೂಟರ್‌ಗಳ ಬಂಧನ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬೆಳ್ಳಂಬೆಳಗ್ಗೆ ಗುಂಡಿನ ಸದ್ದು ಮೊಳಗಿದೆ. ದೆಹಲಿಯ ಕ್ರೈಂ ಬ್ರಾಂಚ್ ಪೊಲೀಸರು ಇಬ್ಬರು ಶೂಟರ್‌ಗಳಿಗೆ ಗುಂಡೇಟು ನೀಡಿ ಬಂಧಿಸಿದ್ದಾರೆ.



ದ್ವಾರಕಾದ ಆಯಾನಗರದಲ್ಲಿ ಈ ಎನ್‌ಕೌಂಟರ್ ನಡೆದಿದೆ. ಬಂಧಿತರಲ್ಲಿ ಒಬ್ಬ ಆರೋಪಿ ಯಾದ್ ರಾವ್ (50) ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶದಾದ್ಯಂತ ಕೊಲೆ ಯತ್ನ ಮತ್ತು ದರೋಡೆ ಸೇರಿದಂತೆ ಸುಮಾರು 24 ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. ಬಂಧಿತರು ಶೂಟೌಟ್ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದರು. ಅವರನ್ನು ಪೊಲೀಸರು ಬಂಧಿಸಲು ತೆರಳಿದ್ದರು. ಈ ವೇಳೆ ಇಬ್ಬರೂ ಪೊಲೀಸರ ಮೇಲೆ ದಾಳಿಗೆ ಯತ್ನಿಸಿದ್ದು, ಪೊಲೀಸರು ಪ್ರತಿದಾಳಿ ನಡೆಸಿದ್ದಾರೆ. ಘಟನೆಯಲ್ಲಿ ಇಬ್ಬರು ಆರೋಪಿಗಳ ಕಾಲುಗಳಿಗೆ ಗುಂಡೇಟಿನ ಗಾಯಗಳಾಗಿವೆ. ಈ ಎನ್‌ಕೌಂಟರ್‌ನಲ್ಲಿ 69 ಗುಂಡು ಹಾರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತ ಆರೋಪಿಗಳು ಬೇರೆ ಬೇರೆ ರಾಜ್ಯಗಳಲ್ಲಿ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ಇವರ ತಲೆಗೆ 1 ಲಕ್ಷ ರೂ. ಬಹುಮಾನ ಘೋಷಿಸಲಾಗಿತ್ತು. ಆರೋಪಿಗಳನ್ನು ಬಂಧಿಸಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಟ್ರಂಪ್‌ಗೆ ನೊಬೆಲ್ ಶಾಂತಿ ಪ್ರಶಸ್ತಿ ಅರ್ಪಿಸುತ್ತೇನೆ

ವಾಷಿಂಗ್ಟನ್: ಅಮೆರಿಕದ ಸೇನಾಪಡೆಗಳು ವೆನೆಜುವೆಲಾದ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಸೆರೆ ಹಿಡಿದ ಬೆನ್ನಲ್ಲೇ ವಿರೋಧ ಪಕ್ಷದ ನಾಯಕಿ ಮಾರಿಯಾ ಕೊರಿನಾ ಮಚಾದೊ ಅವರು ತಮಗೆ ಲಭಿಸಿರುವ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಹಂಚಿಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಗಿದೆ ಎಂದು ತಿಳಿದ ತಕ್ಷಣವೇ ನಾನು ಅದನ್ನು ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ಅರ್ಪಿಸುವುದಾಗಿ ಹೇಳಿದ್ದೆ. ಏಕೆಂದರೆ ಆ ಸಮಯದಲ್ಲಿ ಟ್ರಂಪ್ ಅವರು ನೊಬೆಲ್ ಪ್ರಶಸ್ತಿಗೆ ಅರ್ಹರು ಎಂದು ನಾನು ನಂಬಿದ್ದೆ. ಆದರೆ, ಜನವರಿ 3ರಂದು ಟ್ರಂಪ್ ಅವರು ಸಾಧಿಸಿದ್ದನ್ನು ಅಸಾಧ್ಯವೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ ಎಂದು ಮಾರಿಯಾ ಹೇಳಿದ್ದಾರೆ. ನನ್ನ ಪ್ರಕಾರ, ಜ.3 (ಶನಿವಾರ) ಇತಿಹಾಸದಲ್ಲಿ ನ್ಯಾಯವು ದಬ್ಬಾಳಿಕೆಯನ್ನು ಸೋಲಿಸಿದ ದಿನವಾಗಿ ದಾಖಲಾಗುತ್ತದೆ. ಇದು ಒಂದು ಮೈಲಿಗಲ್ಲು ಎಂದರೇ ತಪ್ಪಲ್ಲ. ಇದು ವೆನೆಜುವೆಲಾದ ಜನರಿಗೆ ಮತ್ತು ನಮ್ಮ ಭವಿಷ್ಯಕ್ಕೆ ಮಾತ್ರ ದೊಡ್ಡದಲ್ಲ. ಇದು ಮಾನವೀಯತೆ, ಸ್ವಾತಂತ್ರ್ಯ ಮತ್ತು ಮಾನವ ಘನತೆಗೆ ಒಂದು ದೊಡ್ಡ ಹೆಜ್ಜೆಯಾಗಿದೆ ಎಂದೂ ಮಾರಿಯಾ ವಿವರಿಸಿದ್ದಾರೆ.



ಏಳು ವರ್ಷಗಳಿಂದ ಒಂದೇ ಕಾಲಲ್ಲಿ ನಿಂತಿರುವ 26ರ ಸಾಧು!

ಪ್ರಯಾಗರಾಜ್: ಇಲ್ಲಿ ನಡೆಯುತ್ತಿರುವ ಮಾಘ ಮೇಳದಲ್ಲಿ ಭಸ್ಮಲೇಪಿತ ತಪಸ್ವಿಗಳು, ಮಂತ್ರ ಜಪಿಸುತ್ತ ಕುಳಿತ ಸಾಧುಗಳ ನಡುವೆ, ಏಳು ವರ್ಷಗಳಿಂದ ಒಂಟಿ ಕಾಲಿನಲ್ಲಿ ನಿಂತು ಧ್ಯಾನ ಮಾಡುತ್ತಿರುವ 26 ವರ್ಷದ ಸಾಧುವೊಬ್ಬರು ಗಮನ ಸೆಳೆದಿದ್ದಾರೆ. ಶಂಕರಪುರಿ ಎನ್ನುವ ಈ ಯುವ ಸಾಧು ಬಿಹಾರ ಮೂಲದರು. ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಾಘಮೇಳದಲ್ಲಿ ಈ ಸಾಧು ಕಾಣಿಸಿಕೊಂಡಿದ್ದಾರೆ. ನಾನು ನೈಮಿಷಾರಣ್ಯಕ್ಕೆ ಸೇರಿದವನು. ಅಲ್ಲಿ 88 ಸಾವಿರ ಋಷಿ–ಮುನಿಗಳು ವಾಸಿಸುತ್ತಾರೆ. ನಾನು ಅಲ್ಲಿಯೇ ಹುಟ್ಟಿದ್ದು, ನನ್ನ ಆಶ್ರಮವೂ ಅಲ್ಲಿದೆ. ನೈಮಿಷಾರಣ್ಯದ ಭೂಮಿಯಿಂದಲೇ ನನಗೆ ನಿಂತುಕೊಳ್ಳಲೇಬೇಕು ಎಂಬ ಆಲೋಚನೆ ಮನಸ್ಸಿಗೆ ಬಂದಿತು. ನಾನು 6 ವರ್ಷ ವಯಸ್ಸಿನಿಂದಲೂ ಸಾಧುವಾಗಿದ್ದೇನೆ. ವಿಶ್ರಾಂತಿ, ದೈನಂದಿನ ಕೆಲಸ ಆಹಾರ ಸೇವನೆ ಬಗ್ಗೆ ವಿವರಿಸಿರುವ ಯುವ ಸಾಧು, ತಲೆಯನ್ನು ಮರದ ತೊಟ್ಟಿಲಿನ ರೀತಿಯಲ್ಲಿರುವ ತುಂಡಿನ ಮೇಲೆ ಇಟ್ಟು ನಿದ್ದೆ ಮಾಡುತ್ತೇನೆ. ಇದೇ ಭಂಗಿಯಲ್ಲಿ ಆಹಾರ, ನೀರಿನ ಸೇವನೆ ಮತ್ತು ದೈನಂದಿನ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸುತ್ತೇನೆ ಎಂದು ವಿವರಿಸಿದ್ದಾರೆ.



ನಟಿ ರಶ್ಮಿ ಮಂದಣ್ಣ ನಂಬರ್ ಒನ್ ಟ್ಯಾಕ್ಸ್ ಪೇಯರ್



ವಿರಾಜಪೇಟೆ, ಜ.6– ನಿಗದಿತವಾಗಿ ಆದಾಯ ತೆರಿಗೆ ಪಾವತಿ ಮಾಡದೆ ವಂಚನೆಗೈಯ್ಯುತ್ತಿರುವ ಇಂದಿನ ಕಾಲದಲ್ಲಿ ಸರ್ಕಾರಕ್ಕೆ ಅತ್ಯಧಿಕ ತೆರಿಗೆ ಪಾವತಿ ಮಾಡಿ ನಿಷ್ಠೆ ತೋರಿದ ಹೆಗ್ಗಳಿಕೆಗೆ ಕೊಡಗಿನ ಪ್ಯಾನ್ ಇಂಡಿಯಾ ತಾರೆ ರಶ್ಮಿ ಮಂದಣ್ಣ ಪಾತ್ರರಾಗಿದ್ದಾರೆ.

ಮೂಲತಃ ವಿರಾಜಪೇಟೆಯ ಬೈಲೂರು ಗ್ರಾಮದವರಾದ ನಟಿ ರಶ್ಮಿ ಮಂದಣ್ಣ ತ್ರೈಮಾಸಿಕವಾಗಿ ಈವರೆಗೆ 4.69 ಕೋಟಿ ತೆರಿಗೆ ಪಾವತಿಸಿ ನಂಬರ್ ಒನ್ ಟ್ಯಾಕ್ಸ್ ಪೇಯರ್ ಆಗಿದ್ದಾರೆ. ಇವರು ಎಲ್‌ಎಲ್‌ಪಿ ಹೆಸರಿನಲ್ಲಿ ಆದಾಯ ತೆರಿಗೆ ಪಾವತಿಸಿದ್ದಾರೆ. ಅವರ ಆದಾಯವು ಮುಖ್ಯವಾಗಿ ಚಲನಚಿತ್ರ, ರಾಯಭಾರಿ, ರಿಯಲ್ ಎಸ್ಟೇಟ್ ಹೂಡಿಕೆಗಳು, ಮತ್ತು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಿಂದಲೂ ಬರುತ್ತಿದೆ.

ಜಮ್ಮಾ ಬಾಣೆ ಸಮಸ್ಯೆಗೆ ಸರ್ಕಾರ ಪರಿಹಾರ ಕಲ್ಪಿಸಿಲ್ಲ

ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಆರೋಪ



ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

ಮಡಿಕೇರಿ, ಜ.6–ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿರುವ 'ಜಮ್ಮಾ ಬಾಣೆ' ಸಮಸ್ಯೆ ಪರಿಹಾರಕ್ಕಾಗಿ ರಾಜ್ಯ ಉಚ್ಚ ನ್ಯಾಯಾಲಯದಿಂದ ಆದೇಶ ಬಂದಿದ್ದರೂ ರಾಜ್ಯ ಸರ್ಕಾರ ಇದನ್ನು ಜಾರಿಗೆ ತರಲು ಇನ್ನೂ ಮುಂದಾಗಿಲ್ಲ ಎಂದು ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ. ಬೋಪಯ್ಯ ಕಟಕಿಯಾಡಿದ್ದಾರೆ.

ಕೊಡಗಿನ ಜ್ವಲಂತ ಜಮ್ಮಾ ಬಾಣೆ ಸಮಸ್ಯೆಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ 2013ರಲ್ಲಿ ರಾಷ್ಟ್ರಪತಿಗಳ ಅಂಕಿತವಾಗಿ ಬಂದ ವಿಧೇಯಕ ಕಾನೂನಾಗಿ ಜಾರಿಗೆ ಬರುವ ಹಂತದಲ್ಲಿ ರಿಟ್ ಪೆಟೀಷನ್ ಸಲ್ಲಿಕೆಯಾಗಿತ್ತು. ಇದಕ್ಕೆ ಸಂಬಂಧಿಸಿದಂತೆ 2014ರಲ್ಲಿ ರಾಜ್ಯ ಉಚ್ಚ ನ್ಯಾಯಾಲಯ ನೀಡಿರುವ ಆದೇಶದಲ್ಲಿ ಜಮ್ಮಾಬಾಣೆ ಸಮಸ್ಯೆಗೆ ಪರಿಹಾರ ದೊರಕಿದೆ. ಹೀಗಿದ್ದೂ ಸರ್ಕಾರ ಜಾರಿಗೊಳಿಸಿಲ್ಲ, ಆದರೆ ನಾವೇ ಎಲ್ಲವನ್ನೂ ಮಾಡುತ್ತಿರುವುದಾಗಿ ಕಾಂಗ್ರೆಸ್ಸಿಗರು ಹೇಳಿಕೊಳ್ಳುತ್ತಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಆಂದೋಲನ ನಿಲ್ಲಿಸಿದ್ದೇಕೆ? : ಬಿಜೆಪಿ ಸರ್ಕಾರದ ಅವಧಿಯಲ್ಲಿ 2020ರಲ್ಲಿ ಜಿಲ್ಲೆಯ ತಾಲೂಕುವಾರು ಕೆಲವು ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ 'ಪೌತಿ ಖಾತೆ' ಆಂದೋಲನವನ್ನು ಆರಂಭಿಸಲಾಗಿತ್ತು. ಇದರಲ್ಲಿ ಕೆಲವೇ ಪ್ರಮುಖ ದಾಖಲೆಗಳೊಂದಿಗೆ ಜಾಗದ ದಾಖಲೆಗಳಲ್ಲಿ ಇದ್ದ ಮೃತಪಟ್ಟವರ ಹೆಸರನ್ನು ತೆಗೆಯುವ ಕಾರ್ಯ ನಡೆಯುತಿತ್ತು. ಇಂತಹ ಮಹತ್ವದ ಆಂದೋಲನವನ್ನು ಮುಂದುವರಿಸುವುದರ ಬದಲಾಗಿ ಕಾಂಗ್ರೆಸ್ ಸರ್ಕಾರ ನಿಲ್ಲಿಸಿದ್ದೇಕೆ ಎಂದು ಪ್ರಶ್ನಿಸಿದ ಅವರು, ಇದರಿಂದ ಜಿಲ್ಲೆಯಲ್ಲಿ ಜಾಗದ ಹಕ್ಕುದಾರಿಕೆಯ ಸಮಸ್ಯೆ ಮುಂದುವರಿಸಿರುವುದಾಗಿ ಆರೋಪಿಸಿದರು.

ಹಿಂದೂ ಉತ್ತರಾಧಿಕಾರ ಕಾನೂನಿನಂತೆ ಯಾವುದೇ ಜಾಗದ ಪಾಲುದಾರಿಕೆ ಹಕ್ಕನ್ನು ಆ ಕುಟುಂಬದ ಮಿತಿಯಡಿ ಮಾಡಿಕೊಳ್ಳಲು ಅವಕಾಶವಿದೆ ಎಂದು ಸ್ಪಷ್ಟಪಡಿಸಿದರು. ಈ ಹಿನ್ನೆಲೆಯಲ್ಲಿ ಹಿಂದಿನಂತೆಯೆ ಕುಟುಂಬ ಸ್ಥರ ನಡುವೆ ಜಾಗದ ಪಾಲುದಾರಿಕೆಗೆ 1999ರಲ್ಲಿ ತರಲಾದ ಮುದ್ರಾಂಕ ಕಾಯ್ದೆ ತಿದ್ದುಪಡಿಯಂತೆ ಪ್ರತಿ ಭಾಗಕ್ಕೆ 250 ರೂ. ಮುದ್ರಾಂಕ ಶುಲ್ಕ ಪಡೆದು ಜಾಗದ ನೋಂದಣಿಗೆ ಅವಕಾಶ ಕಲ್ಪಿಸಬೇಕೆಂದು ಹೇಳಿದರು.

ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಕಂದಾಯ ಕಾಯ್ದೆ ತಿದ್ದುಪಡಿ ವಿಧೇಯಕದ ಸಂದರ್ಭ ಜಾಗದ 'ಪಟ್ಟೆದಾರ'ರನ್ನು ಏಜೆಂಟರು ಎಂದು ಕರೆಯುವ ಮೂಲಕ ಕುಟುಂಬದ ಪ್ರಮುಖರಿಗೆ ಅಗೌರವವನ್ನು ತೋರಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಭ್ರಷ್ಟಾಚಾರದ ಆತಂಕ: ಮಾಜಿ ಜಿಲ್ಲಾ ಸರ್ಕಾರಿ ಅಭಿಯೋಜಕ ಕವೀಂದ್ರ ಮಾತನಾಡಿ, ಈಗಿನ ಸರ್ಕಾರ ಜಮ್ಮಾ ಬಾಣೆ ಸಮಸ್ಯೆ ಬಗೆಹರಿಕೆಗೆ ತಂದಿರುವ ವಿಧೇಯಕದಲ್ಲಿ ತಹಸೀಲ್ದಾರರ ಮೂಲಕ ಅರ್ಜಿಗಳನ್ನು ಸ್ವೀಕರಿಸಿ ಸಮಸ್ಯೆ ಬಗೆಹರಿಸುವ ವಿಚಾರಗಳನ್ನು ತಿಳಿಸಿದೆ. ಆದರೂ ಇದರಲ್ಲಿ ಸ್ಪಷ್ಟತೆಗಳಿಲ್ಲ. ಪ್ರಮುಖವಾಗಿ ಸಮಸ್ಯೆ ಬಗೆಹರಿಸಲು ತಹಸೀಲ್ದಾರ್, ಗ್ರಾಮ ಅಭಿವೃದ್ಧಿ ಅಧಿಕಾರಿ, ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪೂರ್ಣ ಹೊಣೆಗಾರಿಕೆಯನ್ನು ವಹಿಸುವುದು ಅತ್ಯವಶ್ಯಕ. ಇಲ್ಲ ವಾದಲ್ಲಿ ಭ್ರಷ್ಟಾಚಾರ ಹೆಚ್ಚುವ ಆತಂಕವನ್ನು ವ್ಯಕ್ತಪಡಿಸಿದರು.

ರಾಜಹಂಸ, ನಾನ್ ಎಸಿ ಸ್ಲೀಪರ್ ಬಸ್ ದರ ಇಳಿಕೆ



ಮಡಿಕೇರಿ, ಜ.6–ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಜ.5ರಿಂದ ಜಾರಿಗೆ ಬರುವಂತೆ ರಾಜ್ಯ ರಸ್ತೆ ಸಾರಿಗೆ ನಿಗಮ ಪುತ್ತೂರು ವಿಭಾಗದ ವತಿಯಿಂದ ಮಡಿಕೇರಿ, ಕುಶಾಲನಗರ, ವಿರಾಜಪೇಟೆ, ಗೋಣಿ ಕೊಪ್ಪ, ಸೋಮವಾರಪೇಟೆಯಿಂದ ಬೆಂಗಳೂರು ಹಾಗೂ ಮೈಸೂರಿಗೆ ಸಂಚರಿಸುವ ರಾಜಹಂಸ ಹಾಗೂ ನಾನ್ ಎಸಿ ಸ್ಲೀಪರ್ ವಾಹನದರಿಯು ಪರಿಷ್ಕೃತ ಪ್ರಯಾಣ ದರವನ್ನು ಕಡಿಮೆ ಮಾಡಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಪಿ. ಶ್ರೀಹರಿ ಬಾಬು ತಿಳಿಸಿದ್ದಾರೆ.

ವಿವರ: ಕುಶಾಲನಗರ–ಬೆಂಗಳೂರು ನಾನ್ ಎಸಿ ಸ್ಲೀಪರ್ ಈ ಹಿಂದೆ ಇದ್ದ ಪ್ರಯಾಣದರ ರೂ.780, ಪರಿಷ್ಕೃತ ಪ್ರಯಾಣ ದರ ರೂ.700, ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಪ್ರಯಾಣ ದರ ರೂ.680, ಪರಿಷ್ಕೃತ ರೂ.550, ಕುಶಾಲನಗರ–ಬೆಂಗಳೂರು ರಾಜಹಂಸ ಹಾಲಿ ಪ್ರಯಾಣ ದರ ರೂ.620, ಪರಿಷ್ಕೃತ ಪ್ರಯಾಣದರ ರೂ.500, ವಿರಾಜಪೇಟೆ–ಬೆಂಗಳೂರು ರಾಜಹಂಸ ಈ ಹಿಂದೆ ವಿಧಿಸುತ್ತಿದ್ದ ಹಾಲಿ ಪ್ರಯಾಣ ದರ ರೂ.620, ಪರಿಷ್ಕೃತ ಪ್ರಯಾಣದರ ರೂ.550, ಗೋಣಿಕೊಪ್ಪ –ಬೆಂಗಳೂರು ರಾಜಹಂಸ ಹಾಲಿ ಪ್ರಯಾಣದರ ರೂ. 620, ಪರಿಷ್ಕೃತ ಪ್ರಯಾಣದರ ರೂ. 550, ಸೋಮವಾರಪೇಟೆ–ಬೆಂಗಳೂರು ರಾಜಹಂಸ ಹಾಲಿ ಪ್ರಯಾಣ ದರ ರೂ.630, ಪರಿಷ್ಕೃತ ಪ್ರಯಾಣ ದರ ರೂ.550, ಮಡಿಕೇರಿ–ಮೈಸೂರು ಮಾರ್ಗ ನಾನ್ ಎಸಿ ಸ್ಲೀಪರ್ ಹಾಲಿ ಪ್ರಯಾಣ ದರ ರೂ. 570, ಪರಿಷ್ಕೃತ ಪ್ರಯಾಣ ದರ ರೂ. 450, ರಾಜ ಹಂಸ ಹಾಲಿ ಪ್ರಯಾಣ ದರ ರೂ.430, ಪರಿಷ್ಕೃತ ಪ್ರಯಾಣದರ ರೂ.280 ಆಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿಗಳು ಹೇಳಿದ್ದಾರೆ.

ಜಾ.ದಳದ ಹಂಗಾಮಿ ಜಿಲ್ಲಾ ಅಧ್ಯಕ್ಷರ ಅವಿರೋಧ ಆಯ್ಕೆ



ಕುಶಾಲನಗರ, ಜ.6–ಜಾತ್ಯಾತೀತ ಜನತಾ ದಳದ ಹಂಗಾಮಿ ಜಿಲ್ಲಾ ಅಧ್ಯಕ್ಷರಾಗಿ ಕಾರ್ಮಾಡು ಸುಬ್ಬಣ್ಣ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ತಾಲೂಕು ಜೆಡಿಎಸ್ ಅಧ್ಯಕ್ಷ ಕೋಟಿ ರಾಮಣ್ಣ ಅಧ್ಯಕ್ಷತೆಯಲ್ಲಿ ಟಾಪ್ ಇನ್ ಟೌನ್ ಹೋಟೆಲ್ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ ಪಕ್ಷದ ಕಾರ್ಯಕರ್ತರು, ಭವಿಷ್ಯದಲ್ಲಿ ಜಿಲ್ಲೆಯಲ್ಲಿ ನಡೆಯುವ ಪುರಸಭೆಗಳು, ಗ್ರಾಪಂ, ತಾಪಂ ಹಾಗೂ ಜಿಪಂ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಪಕ್ಷದ ಸಂಘಟನೆ ಹಿತದೃಷ್ಟಿಯಿಂದ ಪೊನ್ನಂಪೇಟೆ ತಾಲೂಕು ಕಾರ್ಮಾಡು ಸುಬ್ಬಣ್ಣ ಅವರನ್ನು ನೇಮಕ ಮಾಡಲಾಯಿತು.

ಪಕ್ಷದ ಮುಖಂಡ ಕೋತೂರು ಸುರೇಶ್ ಮಾತನಾಡಿ, ಜಿಲ್ಲೆಯಲ್ಲಿ ಜೆಡಿಎಸ್ ಇನ್ನೂ ಕೂಡ ಸುಭದ್ರವಾಗಿದ್ದು ನಾಯಕ ರಿಲ್ಲದೆ ಪಕ್ಷದ ಕಾರ್ಯಕರ್ತರು ಉತ್ಸಾಹ ಕಳೆದುಕೊಂಡಿದ್ದರು. ಈಗ ಸುಬ್ಬಣ್ಣ ಅವರ ಆಯ್ಕೆಯಿಂದಾಗಿ ಪಕ್ಷಕ್ಕೆ ಬಲ ಬಂದಿದೆ ಎಂದರು.

ವಕೀಲ ಮನೋಜ್ ಬೋಪಯ್ಯ ಮಾತನಾಡಿ, ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವನ್ನು ಮೂಲದಿಂದ ಬಲಪಡಿಸಲು ಎಲ್ಲಾ ಕಾರ್ಯಕರ್ತರು ಶ್ರಮಿಸ ಬೇಕಿದೆ. ಕಳೆದ ಚುನಾವಣೆಯಲ್ಲಿ ಮಡಿಕೇರಿಯಲ್ಲಿ ಕಾಂಗ್ರೆಸ್ ಅದೃಷ್ಟದಿಂದ ಬಂದಿದೆಯಾದರೂ ಬಿಜೆಪಿ ಈಗಲೂ ಬಲಿಷ್ಠವಾಗಿದೆ. ಸೋಮವಾರಪೇಟೆ ತಾಲೂಕಿನಲ್ಲಿ ಈ ಹಿಂದೆ ಇದ್ದ ಜೆಡಿಎಸ್ ಅನ್ನು ಮತ್ತೆ ಪ್ರಾಬಲ್ಯಕ್ಕೆ ತರಬೇಕಿದೆ ಎಂದರು.

ಮುಂದಿನ ದಿನಗಳಲ್ಲಿ ಪಕ್ಷದ ಉಸ್ತುವಾರಿ ಮಾಜಿ ಸಚಿವ ಸಾರಾ ಮಹೇಶ್ ಅವರನ್ನು ಭೇಟಿ ಮಾಡಿ ಪಕ್ಷದ ಹೈಕಮಾಂಡ್ ನೀಡುವ ಸಲಹೆ ಹಾಗೂ ನಿರ್ದೇಶನಗಳನ್ನು ಪಾಲಿಸುವಂತೆ ಸಭೆ ತೀರ್ಮಾನಿಸಿತು. ಸಭೆಯಲ್ಲಿ ಪಕ್ಷದ ಪ್ರಮುಖರಾದ ಸುರೇಶ್, ಹೆಚ್.ಡಿ.ಪ್ರವೀಣ್, ನಾಗರಾಜು, ವಕೀಲ ಮನೋಜ್ ಬೋಪಯ್ಯ, ವಿಠಲಗೌಡ, ಸುಂಟಿಕೊಪ್ಪದ ಎಂ.ಎಂ.ಷರೀಫ್, ಹೆಚ್.ಟಿ.ವಸಂತ, ಡಿ.ಪಿ.ಗಿರೀಶ್, ಸಂತೋಷ್, ವೆಂಕಟೇಶ್, ಕೆ.ಸಿ.ರಘು, ಶ್ರೀನಿವಾಸ್, ಕೂಡಿಗೆಯ ರಾಜು, ರಾಮಚಂದ್ರ ಮೊದಲಾದವರಿದ್ದರು.

ಜ.9,10 ನೀನಾಸಂ ನಾಟಕ ಪ್ರದರ್ಶನ

ಮಡಿಕೇರಿ, ಜ.6–ನೀನಾಸಂ ತಿರುಗಾಟ ನಾಟಕ ಪ್ರದರ್ಶನವನ್ನು ಜ.9, 10ರಂದು ನಗರದ ಓಂಕಾರೇಶ್ವರ ದೇವಾಲಯ ರಸ್ತೆಯಲ್ಲಿನ ಭಾರತೀಯ ವಿದ್ಯಾಭವನ ಕೇಂದ್ರದಲ್ಲಿ ಆಯೋಜಿಸಲಾಗಿದೆ ಎಂದು ಭಾರತೀಯ ವಿದ್ಯಾಭವನ ಕೇಂದ್ರದ ಕಾರ್ಯದರ್ಶಿ ಬಾಲಾಜಿ ಕಶ್ಯಪ್ ತಿಳಿಸಿದ್ದಾರೆ.

ಜ.9ರ ಸಂಜೆ 6.30ಕ್ಕೆ ಭಾನು ಮುಷ್ತಾಕ್ ಕಥೆಯನ್ನು ಆಧರಿಸಿದ ಹೃದಯದ ತೀರ್ಪು ಪ್ರದರ್ಶನವನ್ನು ಡಾ. ಎಂ. ಗಣೇಶ್ ನಿರ್ದೇಶನದಲ್ಲಿ ರಂಗರೂಪಕ್ಕೆ ತರಲಾಗಿದೆ. ಜ.10ರಂದು ಸಂಜೆ 6.30ಕ್ಕೆ ಜಿ.ಶಂಕರ ಪಿಳ್ಳೆ ರಚನೆಯ ದಾಮೋದರ ಶೆಟ್ಟಿ ಅನುವಾದಿಸಿರುವ ಶಂಕರ ವೆಂಕಟೇಶ್ವರನ್ ನಿರ್ದೇಶನದ ಅವತರಣಮ್ ಭ್ರಾಂತಾಲಯಮ್ ನಾಟಕ ಪ್ರದರ್ಶನವಿದೆ.

ಓಂಕಾರೇಶ್ವರ ದೇವಾಲಯದ ಐತಿಹಾಸಿಕ ಚಿತ್ರಕಥಾ ಪುಸ್ತಕ ಬಿಡುಗಡೆ



ಮಡಿಕೇರಿ: ಕೊಡಗಿನ ಚಿತ್ರಶಿಲ್ಪ ಕಲಾವಿದ ಬಿ.ಕೆ.ಗಣೇಶ್ ರೈ ಅವರು ವಿನ್ಯಾಸಗೊಳಿಸಿರುವ ಶ್ರೀ ಓಂಕಾರೇಶ್ವರ ದೇವಾಲಯದ ಐತಿಹಾಸಿಕ ಚಿತ್ರಕಥಾ ಪುಸ್ತಕ ಲೋಕಾರ್ಪಣೆಗೊಂಡಿತು. ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಅರ್ಪಿಸಿದ ನಂತರ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಅಪ್ಪನೆರವಂಡ ಚುಮ್ಮಿ ದೇವಯ್ಯ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮೂಡಿ ಬಂದಿರುವ ಚಿತ್ರಕಥಾ ಪುಸ್ತಕವನ್ನು ಲೋಕಾರ್ಪಣೆಗೊಳಿಸಿ ಶುಭ ಹಾರೈಸಿದರು. ಪುರಸಭಾ ಮಾಜಿ ಅಧ್ಯಕ್ಷ ಹಾಗೂ ಶ್ರೀ ಓಂಕಾರೇಶ್ವರ ದೇವಸ್ಥಾನ ಸಮಿತಿಯ ಮಾಜಿ ಅಧ್ಯಕ್ಷರಾಗಿರುವ ಕೊಂಗಂಡ ಎಸ್.ದೇವಯ್ಯ ಅವರು ಪ್ರಥಮ ಕೃತಿಯನ್ನು ಸ್ವೀಕರಿಸಿದರು.

ಜೀವನದಲ್ಲಿ ನಗು ತರಿಸುವ ಜವಾಬ್ದಾರಿ ನಿರ್ವಹಿಸಲಿ



"ಬೆಸುಗೆ" ಸಮ್ಮೇಳನದಲ್ಲಿ ಜಿಲ್ಲಾ ಗವರ್ನರ್ ಅಭಿನಂದನ್ ಬಿ.ಶೆಟ್ಟಿ ಮಾತನಾಡಿದರು.

ನಾಪೋಕ್ಲು, ಜ.6(ದುಗ್ಗಳ)–ಇನ್ನೊಬ್ಬರ ಕಷ್ಟದಲ್ಲಿ ಭಾಗಿಯಾಗುವ ಅವರ ದುಃಖವನ್ನು ಶಮನಗೊಳಿಸುವ, ಜೀವನದಲ್ಲಿ ನಗುವನ್ನು ತರಿಸುವ ಜವಾಬ್ದಾರಿ ನಿರ್ವಹಿಸಬೇಕಿದೆ ಎಂದು ಜಿಲ್ಲಾ ಗವರ್ನರ್ ರೊ. ಅಭಿನಂದನ್ ಬಿ. ಶೆಟ್ಟಿ ಹೇಳಿದ್ದಾರೆ.

ಲಯನ್ಸ್ ಕ್ಲಬ್ ನಾಪೋಕ್ಲು ಸ್ಥಳೀಯ ಕೊಡವ ಸಮಾಜದ ಅಪ್ಪಚ ಕವಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಲಯನ್ಸ್ ರೀಜನ್ ಮೀಟ್ ಬೆಸುಗೆ ಎಂಬ ಅದ್ಧೂರಿ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೆಲವರು ಒಡನಾಟಕ್ಕಾಗಿ, ಕೆಲವರು ಸಮಯ ನಿರ್ವಹಣೆಗಾಗಿ, ಇನ್ನು ಕೆಲವರು ಸೇವೆಗಾಗಿ, ಸಂಘ ಸಂಸ್ಥೆಗಳನ್ನು ಸೇರುತ್ತಾರೆ. ಸೇವೆ ಎಂಬುದು ಲಯನ್ಸ್ ಸಂಸ್ಥೆಯ ಧ್ಯೇಯೋದ್ದೇಶ ಎಂದರು.

ಲಯನ್ಸ್ ಕ್ಲಬ್‌ಗಳ ಪ್ರಾಂತೀಯ ಅಧ್ಯಕ್ಷ ಡಾ.ಕೋಟೆರ ಪಂಚಮ ತಿಮ್ಮಯ್ಯ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತಿಯ ರಾಯಭಾರಿ ಲಯನ್ ನವೀನ್ ಅಂಬೆಕಲ್, ವಲಯ ಅಧ್ಯಕ್ಷರಾದ ಲಯನ್ ಬಿಂದ್ಯಾ ಗಣಪತಿ, ಲಯನ್ ಸಿ.ಟಿ.ಅಪ್ಪಣ್ಣ, ಲಯನ್ ನಟರಾಜ ಕೆಸ್ತೂರು, ಪ್ರಾಂತ್ಯ ಅಧ್ಯಕ್ಷರುಗಳು, ಸಮ್ಮೇಳನ ಅಧ್ಯಕ್ಷೆ ಲಯನ್ ಕೇಟೋಳಿರ ರತ್ನ ಚರ್ಮಣ್ಣ, ಕಾರ್ಯದರ್ಶಿ ಲಯನ್ ಮುಕ್ಕಾಟಿರ ವಿನಯ್, ಖಜಾಂಚಿ ಲ. ಎಳ್ತ ತಂಡ ಬಿ. ಬೋಪಣ್ಣ, ನಾಪೋಕು ಲಯನ್ಸ್ ಕ್ಲಬ್ ಅಧ್ಯಕ್ಷ ಲಯನ್ ಮಾದೆಯಂಡ .ಬಿ. ಕುಟ್ಟಪ್ಪ, ಕಾರ್ಯದರ್ಶಿ ಲ. ಅಪ್ಪುಮನಿಯಂಡ ಬನ್ಸಿ ಭೀಮಯ್ಯ, ಖಜಾಂಜಿ ಲಯನ್ ಅಪ್ಪಚೆಟ್ಟೋಳಂಡ ವಸಂತ್ ಮುತ್ತಪ್ಪ, ಲಿಯೋ ಕ್ಲಬ್ಬಿನ ಅಧ್ಯಕ್ಷ ಬಿ.ಕೆ.ಕನ್ನಿಕ, ಕಾರ್ಯದರ್ಶಿ ಎಂ.ಪಿ.ಧ್ರುವ ದೇವಯ್ಯ, ಖಜಾಂಜಿ ಸಿ.ಅನನ್ಯ ಅಯ್ಯಪ್ಪ ಸದಸ್ಯರು ಉಪಸ್ಥಿತರಿದ್ದರು.

ಸುಬ್ರಮಣಿ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಬಳಿಯ ಚೋನಾಕೆರೆ ನಿವಾಸಿ ದಿ. ಕಲ್ಲೆಂಗಡ ಸೋಮಯ್ಯ ಅವರ ಪುತ್ರ ಪ್ರಸ್ತುತ ಮೈಸೂರಿನ ಹೂಟಗಳ್ಳಿಯಲ್ಲಿ ವಾಸವಾಗಿದ್ದ ಸುಬ್ರಮಣಿ(ಮಣಿ75) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಂಗಳವಾರ ಮೈಸೂರಿನ ಹೂಟಗಳ್ಳಿಯಲ್ಲಿ ನಡೆಯಿತೆಂದು ಕುಟುಂಬದ ಮೂಲಗಳು ತಿಳಿಸಿವೆ.

ಸೂದನ ನಾಣಯ್ಯ



ನಾಪೋಕ್ಲು, ಜ.6–ಮೂಲತಃ ಬಿಳಿಗೇರಿ ಗ್ರಾಮದವರಾಗಿದ್ದು, ಮಡಿಕೇರಿಯಲ್ಲಿ ವಾಸವಿದ್ದ ಸೂದನ ನಾಣಯ್ಯ (90) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರ ಮತ್ತು ಪುತ್ರಿ ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಸೂದನ ಕುಟುಂಬದ ಪಟ್ಟೆದಾರರು, ನಿವೃತ್ತ ತಹಸೀಲ್ದಾರರಾಗಿದ್ದ ನಾಣಯ್ಯರ ಅಂತ್ಯಕ್ರಿಯೆ ಬುಧವಾರ ಮಡಿಕೇರಿಯ ಗೌಡ ರುದ್ರ ಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಆಧುನಿಕ ತಂತ್ರಜ್ಞಾನ ಬಳಕೆ

- ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಪ್ರಭಾಕರನ್ ಮಾಹಿತಿ
- ಬೆಂಕಿ ರೇಖೆ ನಿರ್ಮಾಣಕ್ಕೆ 500 ಮಂದಿ ವಾಚರ್‌ಗಳ ನೇಮಕ

ಚಾಮರಾಜನಗರ, ಜ.6– ಜಿಲ್ಲೆಯಲ್ಲಿ ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಆಧುನಿಕ ತಂತ್ರಜ್ಞಾನ ಬಳಸಲಾಗುತ್ತಿದೆ ಎಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಪ್ರಭಾಕರನ್ ತಿಳಿಸಿದರು.

ನಗರದಲ್ಲಿ ಡಿ.ವಿ.ಗುಂಡಪ್ಪ ಉಪನ್ಯಾಸ ಮಾಲೆ ಅಡಿ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಬಂಡೀಪುರದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾದಂತೆಲ್ಲಾ ಅವುಗಳ ಆವಾಸ ಸ್ಥಾನ ಕಡಿಮೆಯಾಗುತ್ತಿದೆ. ಇದರಿಂದಾಗಿ ಅವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸುತ್ತವೆ. ಮರಿ ಹುಲಿಗಳು ಒಂದು ಹಂತಕ್ಕೆ ಬರುವವರೆಗೆ ತಾಯಿ ಹುಲಿ ಇದ್ದ ಜಾಗದಲ್ಲೇ ವಾಸ ಮಾಡುತ್ತವೆ. ಬಳಿಕ ಗಡಿಗಾಗಿ ಕಾದಾಟ ನಡೆಸಿ, ಸೋತ ಹುಲಿ ಗಡಿಬಿಟ್ಟು ಹೊರ ಬರುವಾಗ ನಾಡಿನತ್ತ ಬಂದು ಆಹಾರಕ್ಕಾಗಿ ಜಾನುವಾರುಗಳ ಮೇಲೆ ದಾಳಿ ಮಾಡುವ ಸಂಭವವಿದ್ದು, ಇದು ಮಾನವ–ವನ್ಯಜೀವಿ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದೆ ಎಂದರು.

> ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಕಾಡಂಚಿನ ಗ್ರಾಮಗಳ ಆದಿವಾಸಿಗಳಿಗೆ ನೆರವಾಗಲು 'ಇಕೋ ಟೂರಿಸಂ' ಆರಂಭಿಸಲಾಗಿದ್ದು, ಇದರಿಂದ ಬರುವ ಆದಾಯದ ಶೇ.30ರಷ್ಟು ಹಾನ್ನು ಸೋಲಾರ್ ಲೈಟ್, ಸೋಲಾರ್ ಲ್ಯಾಂಪ್, ಅಡುಗೆ ಅನಿಲ ವಿತರಣೆ, ಶಾಲಾ ಮಕ್ಕಳ ವಿದ್ಯಾರ್ಥಿ ವೇತನಕ್ಕೆ ಬಳಸಲಾಗುತ್ತಿದೆ. ಪ್ರಸಕ್ತ ವರ್ಷ 11 ಆದಿವಾಸಿ ಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿ ಕೊಡುವ ಟೈಲರಿಂಗ್ ಗ್ರೂಪ್ ಆರಂಭಿಸಲಾಗಿದೆ. – ಪ್ರಭಾಕರನ್, ಡಿಸಿಎಫ್.

ರೈಲ್ವೆ ಬ್ಯಾರಿಕೇಡ್ ತಡೆಗೋಡೆ ನಿರ್ಮಾಣಕ್ಕೆ ಪ್ರಸ್ತಾವನೆ: ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಅರಣ್ಯದಂಚಿನ ಗ್ರಾಮಗಳ ರೈತರ ಜಮೀನುಗಳಿಗೆ ಕಾಡು ಪ್ರಾಣಿಗಳು ಲಗ್ಗೆ ಇಡುತ್ತಿದ್ದು, ಇದರಿಂದ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದೆ. ಕಾಡು ಪ್ರಾಣಿಗಳು ರೈತರ ಜಮೀನುಗಳಿಗೆ ನುಗ್ಗದಂತೆ ಕ್ರಮವಹಿಸುವ ಸಂಬಂಧ 27 ಕಿಮೀ ರೈಲ್ವೆ ಬ್ಯಾರಿಕೇಡ್ ತಡೆಗೋಡೆ ನಿರ್ಮಾಣಕ್ಕೆ ಸೂಕ್ತ ಅನುದಾನ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈಗಾಗಲೇ 8 ಕಿಮೀ ರೈಲ್ವೆ ಬ್ಯಾರಿಕೇಡ್ ತಡೆಗೋಡೆ ನಿರ್ಮಾಣಕ್ಕೆ ಟೆಂಡರ್ ಆಗಿದೆ ಎಂದರು.

ಬೆಂಕಿರೇಖೆ ನಿರ್ಮಾಣ: ಮುಂಬರುವ ಬೇಸಿಗೆಗೆ ಕಾಣಿಸಿಕೊಳ್ಳುವ ಕಾಡ್ಗಿಚ್ಚನ್ನು ನಿಯಂತ್ರಿಸಲು ಶೇ.90ರಷ್ಟು ಬೆಂಕಿ ರೇಖೆ ನಿರ್ಮಿಸಲಾಗಿದ್ದು, ಕಳೆದ ವರ್ಷ 400 ಮಂದಿ ಫೈರ್ ವಾಚರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಈ ವರ್ಷ 500 ಮಂದಿ ಫೈರ್ ವಾಚರ್‌ಗಳನ್ನು ನೇಮಕ ಮಾಡಿಕೊಂಡು, ಅಗ್ನಿಶಾಮಕ ದಳ ಇಲಾಖೆ ಸಹಕಾರದಲ್ಲಿ ಬೆಂಕಿ ಆರಿಸುವ ಕುರಿತು ತರಬೇತಿ ಕೊಡಿಸಲಾಗುವುದು ಎಂದರು.

ಇತ್ತೀಚಿನ ದಿನಗಳಲ್ಲಿ ರೈತರು ವಾಣಿಜ್ಯ ಬೆಳೆಗಳತ್ತ ಮುಖ ಮಾಡಿರುವುದರಿಂದ ಕಾಡು ಪ್ರಾಣಿಗಳ ಹಾವಳಿ ಕಡಿಮೆಯಾಗಿದೆ. ಮಾನವ–ವನ್ಯಜೀವಿ ಸಂಘರ್ಷ ತಡೆಯುವಲ್ಲಿ ಅರಣ್ಯ ಇಲಾಖೆ ಜೊತೆಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ಸಂವಾದದಲ್ಲಿ ಎಸಿಎಫ್‌ಗಳಾದ ಸುರೇಶ್, ನವೀನ್‌ಕುಮಾರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ, ಪ್ರಸಾದ್ ಹಾಜರಿದ್ದರು.



ಸಂವಾದದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಪ್ರಭಾಕರನ್ ಮಾತನಾಡಿದರು.

ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಅಕ್ರಮ ಗೇಟ್ ಅಳವಡಿಕೆ

ಅರಣ್ಯ ಇಲಾಖೆ ವಿರುದ್ಧ ರೈತ ಸಂಘ ಪ್ರತಿಭಟನೆ



ಅರಣ್ಯ ಇಲಾಖೆ ವಿರುದ್ಧ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಗುಂಡ್ಲುಪೇಟೆ, ಜ.6(ಸೋಮ್.ಜಿ)– ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಅಕ್ರಮವಾಗಿ ಗೇಟ್ ಅಳವಡಿಸಿರುವ ಅರಣ್ಯ ಇಲಾಖೆ ವಿರುದ್ಧ ರೈತ ಸಂಘದ ಕಾರ್ಯಕರ್ತರು ಮಂಗಳವಾರ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಪ್ರತಿಭಟನೆ ನಡೆಸಿದರು.

ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷ ಡಾ.ಗುರುಪ್ರಸಾದ್ ಮಾತನಾಡಿ, ಬೆಟ್ಟಕ್ಕೆ ಹೋಗುವ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ವಹಿಸುತ್ತಿದೆ. ಈ ಬಗ್ಗೆ ಸಂಘವು ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆದುಕೊಂಡಿದ್ದು, ಬೆಟ್ಟದ ಮೇಲಿರುವ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದರೂ ಅರಣ್ಯ ಇಲಾಖೆ ಜಿಲ್ಲಾಧಿಕಾರಿ ಸರ್ಕಾರದಿಂದಾಗಲೀ ಅನುಮತಿ ಪಡೆಯದೆ ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದುಕೊಳ್ಳದೆ ಲೋಕೋಪ ಯೋಗಿ ಇಲಾಖೆಗೆ ಸೇರಿದ ರಸ್ತೆಗೆ ಗೇಟ್ ಅಳವಡಿಸಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿದೆ. ದೇವಾಲಯ ಇರುವ ಪ್ರದೇಶ ತನಗೆ ಸೇರಿದೆ ಎಂದು ಅರಣ್ಯ ಇಲಾಖೆ ಅಕ್ರಮವಾಗಿ ಗೇಟ್ ಅಳವಡಿಸಿಕೊಂಡಿದೆ.

ಬಿಳಿಗಿರಿರಂಗನ ಬೆಟ್ಟ ಹಾಗೂ ಚಾಮುಂಡಿ ಬೆಟ್ಟಗಳು ಅರಣ್ಯ ಇಲಾಖೆಗೆ ಸೇರಿದ್ದರೂ, ಅಲ್ಲಿಗೆ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿಸಲಾಗಿದೆ. ಆದರೆ ಅರಣ್ಯ ಇಲಾಖೆ ತಮ್ಮ ಅರಣ್ಯಕ್ಕೆ ಬೇಲಿ ಹಾಕಿಕೊಳ್ಳುವ ಬದಲು ಸಾರ್ವಜನಿಕರ ಪ್ರವೇಶವನ್ನೇ ನಿರ್ಬಂಧಿಸುವ ಮೂಲಕ ಸುತ್ತಮುತ್ತಲಿನ ಗ್ರಾಮಗಳ ಜನರು ಹಾಗೂ ಭಕ್ತರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ಬೆಟ್ಟಕ್ಕೆ ಹೋಗುವ ಪ್ರಯಾಣಿಕರ ಹಿತದೃಷ್ಟಿಯಿಂದ ಅವರನ್ನು ಸಾರಿಗೆ ಬಸ್ಸಿನಲ್ಲಿ ಕಳುಹಿಸುವ ಅರಣ್ಯ ಇಲಾಖೆ ಸರ್ಕಾರಿ ಅಧಿಕಾರಿಗಳ ವಾಹನಗಳನ್ನು ಬಿಟ್ಟುಕೊಳ್ಳುವ ಮೂಲಕ ಪಕ್ಷಪಾತ ಮಾಡುತ್ತಿದೆ. ಆದ್ದರಿಂದ ಕೂಡಲೇ ಗೇಟ್ ತೆರವುಗೊಳಿಸಿ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿ ಮನವಿ ಪತ್ರವನ್ನು ತಹಸೀಲ್ದಾರ್ ಎಂ.ಎಸ್.ತನ್ಮಯ್‌ಗೆ ಸಲ್ಲಿಸಿದರು.

ಸಂಘದ ಜಿಲ್ಲಾಧ್ಯಕ್ಷ ಮಹದೇವಪ್ಪ, ಮುಖಂಡರಾದ ಮಹೇಶ್, ನಾಗೇಶ್, ಮೂರ್ತಿ, ಲೋಕೇಶ್, ಶಿವಪಾದ, ಡಿವೈಎಸ್‌ಪಿ ಸ್ನೇಹಾರಾಜ್, ಸಿಪಿಐ ಜಯಕುಮಾರ್, ಗೋಪಾಲ ಸ್ವಾಮಿಬೆಟ್ಟ ವಲಯದ ಆರ್‌ಎಫ್‌ಓ ಮಲ್ಲೇಶ್ ಇದ್ದರು

ಕಿರಿಯರಿಗೆ ಹಿರಿಯ ವಕೀಲರ ಮಾರ್ಗದರ್ಶನ ಅಗತ್ಯ



ಚಾಮರಾಜನಗರದಲ್ಲಿ ವಕೀಲರ ದಿನಾಚರಣೆ ನಡೆಯಿತು.

ಚಾಮರಾಜನಗರ, ಜ.6– ನಿರಂತರವಾಗಿ ಕಾನೂನು ಅಧ್ಯಯನದೊಂದಿಗೆ ಹಿರಿಯ ವಕೀಲರ ಮಾರ್ಗದರ್ಶನ ಪಡೆದರೆ ವೃತ್ತಿಯಲ್ಲಿ ಹಿಡಿತ ಸಾಧಿಸಬಹುದು ಎಂದು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಪ್ರಭಾವತಿ ಕಿರಿಯ ವಕೀಲರಿಗೆ ಸಲಹೆ ನೀಡಿದರು.

ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಜಿಲ್ಲಾ ವಕೀಲರ ಸಂಘದ ಕಚೇರಿ ಎದುರು ನಡೆದ ವಕೀಲರ ದಿನಾಚರಣೆ ಹಾಗೂ ವಕೀಲರ ಸಂಘದ ಡೇರಿ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಕೀಲಿ ವೃತ್ತಿ ಪವಿತ್ರ ಮತ್ತು ಸೇವಾಪರವಾಗಿದ್ದು, ವೃತ್ತಿಗೆ ಬಂದ ಕಿರಿಯರು ಹಿರಿಯ ವಕೀಲರ ಮಾರ್ಗದರ್ಶನದಲ್ಲಿ ಆದರ್ಶ ವೃತ್ತಿ ಬದುಕು ರೂಢಿಸಿಕೊಳ್ಳಬೇಕು. ಬಿಡುವಿನ ಸಂದರ್ಭ ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಓದಬೇಕು. ಕಚೇರಿಯಲ್ಲಿರುವ ಪ್ರಕರಣಗಳನ್ನು ಅಧ್ಯಯನ ಮಾಡಬೇಕು ಎಂದರು.

ವಕೀಲರ ಸಂಘದ ಡೇರಿ ಬಿಡುಗಡೆಗೊಳಿಸಿ ಮಾತನಾಡಿದ ರಾಜ್ಯ ವಕೀಲರ ಪರಿಷತ್ ಮಾಜಿ ಅಧ್ಯಕ್ಷ ಹೆಚ್.ಎಲ್.ವಿಶಾಲ ರಘು, ವಕೀಲರ ನಡುವೆ ಸಣ್ಣಪುಟ್ಟ ವೈಮನಸ್ಸು ಉಂಟಾಗಬಹುದು. ಅದನ್ನು ಹಿರಿಯ ವಕೀಲರು ಸರಿಪಡಿಸಿಕೊಂಡು ಎಲ್ಲರೂ ಒಗ್ಗಟ್ಟಿನಿಂದ ವೃತ್ತಿ ನಡೆಸಿಕೊಂಡು ಹೋಗಬೇಕು. ಜೊತೆಗೆ ನ್ಯಾಯಾಧೀಶರು ಹಾಗೂ ವಕೀಲರ ನಡುವೆ ಅನ್ಯೋನತೆ ಇರಬೇಕು ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ಮಾತನಾಡಿದರು. ಹೈಕೋರ್ಟ್ ಹಿರಿಯ ವಕೀಲ ರವೀಂದ್ರ ಕಾಮತ್, ನ್ಯಾಯಾಧೀಶರಾದ ಈಶ್ವರ್, ಸಿ.ಡಿ. ಪ್ರಕಾಶ್, ಸುನೀಲ್, ಸ್ಮಿತಾ, ಪ್ರತಿಭಾ, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಶಿವರಾಮ್, ಉಪಾಧ್ಯಕ್ಷ ರಂಗಸ್ವಾಮಿ ಸೇರಿದಂತೆ ಸಂಘದ ಪದಾಧಿಕಾರಿಗಳು, ಹಿರಿಯ ಹಾಗೂ ಕಿರಿಯ ವಕೀಲರು, ನ್ಯಾಯಾಲಯದ ಸಿಬ್ಬಂದಿ ಇದ್ದರು.

ನಿರ್ಗಮಿತ ಡಿಸಿಗೆ ಜಿಲ್ಲಾಡಳಿತದಿಂದ ಬೀಳ್ಕೊಡುಗೆ



ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ನೂತನ ಜಿಲ್ಲಾಧಿಕಾರಿ ಶ್ರೀರೂಪರವರನ್ನು ಸ್ವಾಗತಿಸಿದರು

ಚಾಮರಾಜನಗರ, ಜ.6– ಕಳೆದ ಎರಡೂವರೆ ವರ್ಷ ಚೆಲುವ ಚಾಮರಾಜನಗರ ಜಿಲ್ಲಾಧಿಕಾರಿಯಾಗಿ ಜಿಲ್ಲೆಯ ಅಭಿವೃದ್ಧಿಗೆ ಜನಸ್ನೇಹಿ ಆಡಳಿತ ನೀಡಿದ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ನಗರದಲ್ಲಿಂದು ಜಿಲ್ಲಾಡಳಿತದಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು.

ನೂತನ ಜಿಲ್ಲಾಧಿಕಾರಿ ಶ್ರೀರೂಪ ಹಾಗೂ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸೇರಿದಂತೆ ಇತರೆ ಗಣ್ಯರನ್ನು ನಾದಸ್ವರ, ಬ್ಯಾಂಡ್‌ಸೆಟ್, ಗೊರವರ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ನಗರದ ಜಿಲ್ಲಾಡಳಿತ ಭವನದ ಪ್ರವೇಶ ದ್ವಾರದಲ್ಲಿ ಸ್ವಾಗತಿಸಲಾಯಿತು. ಅಲ್ಲಿಂದ ಜಿಪಂ ಕೆಡಿಪಿ ಸಭಾಂಗಣದವರೆಗೂ ಗಣ್ಯರಿಗೆ ಹೂಮಳೆ ಸುರಿಸುವ ಮೂಲಕ ವೇದಿಕೆಗೆ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ವೇದಿಕೆ ಸಭಾಂಗಣದಲ್ಲಿ ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿ, ಸಿಬ್ಬಂದಿ, ವಿವಿಧ ಸಂಘ ಸಂಸ್ಥೆಗಳು, ರೈತ ಹಾಗೂ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಹಾರ, ತುರಾಯಿ, ಫಲತಾಂಬೂಲ, ಸ್ಮರಣಿಕೆ, ಉಡುಗೊರೆ ನೀಡುವ ಮೂಲಕ ವಿಶೇಷ ಅಭಿಮಾನ ಮೆರೆದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿರ್ಗಮಿತ ಡಿಸಿ ಶಿಲ್ಪಾನಾಗ್, ಇದೊಂದು ಅವಿಸ್ಮರಣೀಯ ಕಾರ್ಯಕ್ರಮ. ಚಾಮರಾಜನಗರ ಶಾಪಗ್ರಸ್ಥ ಜಿಲ್ಲೆಯಲ್ಲ. ಶೇ.50ಕ್ಕೂ ಹೆಚ್ಚು ಅರಣ್ಯ ಹೊಂದಿರುವ ಗಡಿ ಜಿಲ್ಲೆ, ಕಾವೇರಿ ನದಿ ಹರಿಯುವ ಹಾಗೂ ಶುದ್ಧಗಾಳಿ ಇರುವ ಸುಂದರ ಜಿಲ್ಲೆ. ಈ ಮೊದಲು 11 ವರ್ಷ ಬೇರೆ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದರೂ ಚಾಮರಾಜನಗರ ನನ್ನ ವೃತ್ತಿ ಜೀವನದಲ್ಲಿ ವಿಶೇಷ ಅನುಭವ ನೀಡಿದೆ. ಜಿಲ್ಲೆಯ ಜನರ ಪ್ರೀತಿ ಮರೆಯಲು ಸಾಧ್ಯವಿಲ್ಲ. ಜಿಲ್ಲಾಧಿಕಾರಿ ಎನ್ನುವುದು ಅಧಿಕಾರವಲ್ಲ. ಅದೊಂದು ಅವಕಾಶ ಎಂದರು.

ಜಿಲ್ಲೆಯಲ್ಲಿ ಉತ್ತಮ ರಸ್ತೆಗಳು, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ. ಮಹದೇಶ್ವರ ಬೆಟ್ಟದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳು, ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ, ಉಚಿತ ಆಂಬುಲೆನ್ಸ್, 40 ಸರ್ಕಾರಿ ಶಾಲೆಗಳಿಗೆ 7 ಕೋಟಿ ವೆಚ್ಚದಲ್ಲಿ ಕಂಪ್ಯೂಟರ್, ಟ್ಯಾಬ್ ಸೇರಿದಂತೆ ಕಲಿಕಾ ಸಾಮಗ್ರಿಗಳ ವಿತರಣೆ, ಜೈಲಿನ ಖೈದಿಗಳಿಗೆ ಕಂಪ್ಯೂಟರ್ ತರಬೇತಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶದಲ್ಲಿ ಸುಧಾರಣೆ, ಜೀತ ವಿಮುಕ್ತರಿಗೆ ಹಾಗೂ ಆಕ್ಸಿಜನ್ ಸಂತ್ರಸ್ಥರಿಗೆ ಪರಿಹಾರ, ಜಮೀನು ಒತ್ತುವರಿ ತೆರವು, ಕೆರೆ ಕಟ್ಟೆ ಅಭಿವೃದ್ಧಿ, ಮಾನವ–ಕಾಡು ಪ್ರಾಣಿಗಳ ಸಂಘರ್ಷ ತಡೆ ಸೇರಿದಂತೆ ಹತ್ತು–ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಬಡವರು, ರೈತರು, ಆದಿವಾಸಿಗಳು, ವಿಕಲಚೇತನರು ಸೇರಿದಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಸಮಸ್ಯೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಪರಿಣಾಮಕಾರಿ ಸಭೆಗಳ ಮೂಲಕ ಜನರ ಕುಂದುಕೊರತೆ ಆಲಿಸಿದ್ದೇನೆ. ಎಲ್ಲಾ ಇಲಾಖೆಗಳು ಒಂದು ಕುಟುಂಬವಿದ್ದಂತೆ. ಎಲ್ಲರೂ ಸೇರಿ ಒಂದು ತಂಡವಾಗಿ, ಸ್ಫೂರ್ತಿಯಿಂದ ಕೆಲಸ ಮಾಡಬೇಕು. ಆಗ ಮಾತ್ರ ಜಿಲ್ಲೆ ಅಭಿವೃದ್ಧಿಯತ್ತ ಸಾಗಲು ನೆರವಾಗಲಿದೆ. ಜಿಲ್ಲೆಯ ಬಗ್ಗೆ ವಿಶೇಷ ಕಾಳಜಿ ಇದೆ. ಮುಂದಿನ ದಿನಗಳಲ್ಲಿ ಪಶುಸಂಗೋಪನೆ ಹಾಗೂ ರೇಷ್ಮೆ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ನಿಟ್ಟಿನಲ್ಲಿ ಎಲ್ಲರ ಸಹಕಾರಕ್ಕೆ ಧನ್ಯವಾದ ಅರ್ಪಿಸಿದರು.

ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರು ಸ್ವಾಗತ ಸ್ವೀಕರಿಸಿ ಮಾತನಾಡಿ, ಚಾಮರಾಜನಗರ ಉತ್ತಮ ಪರಿಸರ ಹೊಂದಿದ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ಪಾರದರ್ಶಕ ಹಾಗೂ ಜನಸ್ನೇಹಿ ಆಡಳಿತಕ್ಕೆ ಹೆಚ್ಚು ಒತ್ತು ನೀಡಲಾಗುವುದು. ರೈತರ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಲಾಗುವುದು. ಪ್ರವಾಸೋದ್ಯಮಕ್ಕೆ ಜಿಲ್ಲೆಯಲ್ಲಿ ವಿಫುಲ ಅವಕಾಶಗಳಿವೆ. ಆದಿವಾಸಿಗಳ ಅಭಿವೃದ್ಧಿಗೆ ಕೌಶಲ್ಯ ತರಬೇತಿ ನೀಡಲಾಗುವುದು. ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರ ಕಾರ್ಯ ಯೋಜನೆಗಳನ್ನು ಮುಂದುವರೆಸಲಾಗುವುದು ಎಂದರು.

ಎಡಿಸಿ ಟಿ.ಜವರೇಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ಜಿಪಂ ಸಿಇಓ ಮೋನಾರೋತ್, ಉಪ ಕಾರ್ಯದರ್ಶಿ ಶ್ರುತಿ, ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು, ರೈತ ಮುಖಂಡರಾದ ಮಹೇಶ್ ಪ್ರಭು, ಬಸವಣ್ಣ, ಭಾಗ್ಯರಾಜು, ಬಿಆರ್‌ಟಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಚಾಮುಲ್ ಎಂ.ಡಿ. ರಾಜ್‌ಕುಮಾರ್, ಕನ್ನಡಪರ ಸಂಘಟನೆಗಳ ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ, ಚಾ.ಗು.ನಾಗರಾಜು, ಸಮತಾ ಸೊಸೈಟಿ ಅಧ್ಯಕ್ಷೆ ದೀಪಾ ಬುದ್ಧೆ, ಜಿಲ್ಲಾ ಬುಡಕಟ್ಟುಗಳ ಅಭಿವೃದ್ಧಿ ಸಂಸ್ಥೆ ಹಾಗೂ ರೋಟರಿ ಸಂಸ್ಥೆ ಪ್ರದಾಧಿಕಾರಿಗಳು ಮಾತನಾಡಿದರು.

ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನೇಮಕಗೊಂಡು ಜಿಲ್ಲೆಯ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಕೊಡುಗೆ ನೀಡಲಿ ಎಂದು ಸಂಘಟನೆಗಳ ಮುಖಂಡರು ಕೋರಿಕೆ ಮಂಡಿಸಿದರು.

ಮೈಸೂರು ಎಎಸ್‌ಐ ಸಂಸ್ಥೆಯ ಶಾಸನ ಶಾಖೆಯಲ್ಲಿ
ಎಸ್ಟಾಂಪೇಜ್ ಭಂಡಾರಕ್ಕೆ ಡಿಜಿಟಲ್ ಸ್ಪರ್ಶ

ಜನವರಿ ಕೊನೆ ವಾರದಲ್ಲಿ ಡಿಜಿಟಲೀಕರಣಗೊಂಡ ಎಸ್ಟಾಂಪೇಜ್‌ಗಳ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಉದ್ದೇಶ





ಮೈಸೂರಿನ ಹೆಬ್ಬಾಳಿನ 2ನೇ ಹಂತದಲ್ಲಿರುವ ಎಎಸ್‌ಐ ಸಂಸ್ಥೆಯ ಗ್ಯಾಲರಿಯಲ್ಲಿ ಶಾಸನಗಳ ಎಸ್ಟಾಂಪೇಜ್ (ಪಡಿಯಚ್ಚು) ಡಿಜಿಟಲೀಕರಣ ಪ್ರಕ್ರಿಯೆಯಲ್ಲಿ ನಿರತರಾಗಿರುವ ಪರಿಣಿತರು. ಮತ್ತೊಂದು ಚಿತ್ರದಲ್ಲಿ ಇಲ್ಲಿನ ಶಾಸನಗಳ ಎಸ್ಟಾಂಪೇಜ್‌ಗಳ ಸಂರಕ್ಷಣೆ ಮತ್ತು ಸಂಗ್ರಹಣಾ ಕೊಠಡಿಯನ್ನು ಕಾಣಬಹುದು.

ಮೈಸೂರು,ಜ.6(ಪಿಎಂ)– ಇತಿಹಾಸ ರಚನೆ ಮತ್ತು ಅಧ್ಯಯನದಲ್ಲಿ ವಿವಿಧ ರೀತಿಯ ಶಾಸನಗಳು ಪ್ರಮುಖ ಆಧಾರಗಳು. ಅಂತಹ ಶಾಸನಗಳ ಪಡಿಯಚ್ಚುಗಳ (ಎಸ್ಟಾಂಪೇಜ್) ಭಂಡಾರವನ್ನೇ ಮೈಸೂರಿನ ಹೆಬ್ಬಾಳಿನ 2ನೇ ಹಂತದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣೆ (ಎಎಸ್‌ಐ) ಸಂಸ್ಥೆಯ ಶಾಸನ (ಎಪಿಗ್ರಫಿ) ಶಾಖೆ ಹೊಂದಿದೆ. ಇದೀಗ ಇಲ್ಲಿ ಆ ಭಂಡಾರಕ್ಕೆ ಡಿಜಿಟಲ್ ಸ್ಪರ್ಶ ನೀಡಲಾಗುತ್ತಿದೆ.

ಭಾರತ್‌ಶ್ರೀ (ಭಾರತ್ ಶೇರ್ಡ್ ರೆಪೋಸಿಟರಿ ಆಫ್ ಇನ್‌ಸ್ಕ್ರಿಪ್ಷನ್) ಯೋಜನೆಯಡಿ ವಿವಿಧ ರೀತಿಯ ಶಾಸನಗಳ ಪಡಿಯಚ್ಚುಗಳನ್ನು (ಎಸ್ಟಾಂಪೇಜ್) ಡಿಜಿಟಲೀಕರಣಗೊಳಿಸುವ ಪ್ರಕ್ರಿಯೆ ಇಲ್ಲಿ ಆರಂಭವಾಗಿದ್ದು, ಜನವರಿ ಕೊನೆ ವಾರದಲ್ಲಿ ಡಿಜಿಟಲೀಕರಣಗೊಂಡ ಎಸ್ಟಾಂಪೇಜ್‌ಗಳನ್ನು ಎಎಸ್‌ಐ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲು ಉದ್ದೇಶಿಸಲಾಗಿದೆ. ಭಾರತ್‌ಶ್ರೀ ಯೋಜನೆಗೆ 2023–24ರ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಅನುಮೋದನೆ ನೀಡಲಾಗಿದೆ.

ಮೈಸೂರಿನಲ್ಲಿರುವ ಎಎಸ್‌ಐನ ಎಪಿಗ್ರಫಿ ಪ್ರಧಾನ ಶಾಖೆಯಲ್ಲಿ ನಡೆಯುತ್ತಿರುವ ಎಸ್ಟಾಂಪೇಜ್ ಡಿಜಿಟಲೀಕರಣ ಕಾರ್ಯವನ್ನು ಚೆನ್ನೈ ಹಾಗೂ ಲಖ್ನೋದಲ್ಲಿರುವ ಎಪಿಗ್ರಫಿ ಪ್ರಾದೇಶಿಕ ಶಾಖೆಗಳಿಗೂ ವಿಸ್ತರಿಸುವ ಚಿಂತನೆ ಸಹ ನಡೆಯುತ್ತಿದೆ.

ಶಾಸನಗಳ ಪಡಿಯಚ್ಚು (ಎಸ್ಟಾಂಪೇಜ್) ಎಂದರೆ ಶಾಯಿ ಹಾಕಿದ ಕಾಗದ ಬಳಸಿ ರಚಿಸಲಾದ ಮೂಲ ಶಾಸನಗಳ ಪ್ರತಿಕೃತಿಗಳಾಗಿವೆ. ಮೈಸೂರಿನ ಎಎಸ್‌ಐನ ಎಪಿಗ್ರಫಿ ವಿಭಾಗವು ಪ್ರಧಾನ ಶಾಖೆಯಾಗಿದ್ದು, ಇಲ್ಲಿ ಸುಮಾರು 75 ಸಾವಿರ ಶಾಸನಗಳ ಪಡಿಯಚ್ಚುಗಳಿವೆ. ಶಿಲಾ ಶಾಸನ, ತಾಮ್ರಶಾಸನ ಸೇರಿದಂತೆ ಮೊದಲಾದ ಶಾಸನಗಳು ಇದರಲ್ಲಿ ಸೇರಿವೆ. ಭಾರತದ ವಿವಿಧ ಪ್ರದೇಶಗಳಲ್ಲಿರುವ ಹಾಗೂ ಲಭ್ಯವಾಗಿರುವ ನಾನಾ ರೀತಿಯ ಶಾಸನಗಳ ಪಡಿಯಚ್ಚುಗಳು ಇವಾಗಿದ್ದು, ಇವು ಬೇರೆ ಬೇರೆ ಭಾಷೆ, ಲಿಪಿಗಳಲ್ಲಿರುವ ಶಾಸನಗಳ ಪಡಿಯಚ್ಚುಗಳಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಪತ್ತೆಯಾಗಿರುವ ಅಶೋಕನ ಬ್ರಹ್ಮಗಿರಿ ಶಾಸನ, ಜಟಿಂಗ ರಾಮೇಶ್ವರ ಶಾಸನ ಮತ್ತು ಸಿದ್ದಾಪುರ ಶಾಸನಗಳ ಪಡಿಯಚ್ಚು ಸಹ ಇಲ್ಲಿವೆ. 2025ರ ಡಿಸೆಂಬರ್ 17ರಂದು ಮೈಸೂರಿನ ಎಎಸ್‌ಐನ ಶಾಸನ ಶಾಖೆಯಲ್ಲಿ ಪಡಿಯಚ್ಚುಗಳ ಡಿಜಿಟಲೀಕರಣ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಭಾರತದ ಶಾಸನಗಳ ಸಮಗ್ರ ಡಿಜಿಟಲ್ ಭಂಡಾರ ಸೃಷ್ಟಿಸಲು ಭಾರತ್‌ಶ್ರೀ ಯೋಜನೆ ಸಹಕಾರಿ ಎನ್ನುತ್ತಾರೆ ಎಎಸ್‌ಐ ಎಪಿಗ್ರಫಿ ಪ್ರಧಾನ ಶಾಖೆ ನಿರ್ದೇಶಕ ಡಾ.ಕೆ. ಮುನಿರತ್ನಂ ರೆಡ್ಡಿ. ಡಿಜಿಟಲೀಕರಣ ಪ್ರಕ್ರಿಯೆ ಬಳಿಕ ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡುವ ಹಿನ್ನೆಲೆಯಲ್ಲಿ ವಿದ್ವಾಂಸರು, ಸಂಶೋಧಕರು ಸೇರಿದಂತೆ ಸಾರ್ವಜನಿಕರು ತಾವು ಇದ್ದಲ್ಲೇ ಶಾಸನಗಳ ಮಾಹಿತಿ ಕಲೆ ಹಾಕಿಕೊಳ್ಳಬಹುದು. ಇದರಿಂದ ಮೈಸೂರಿನಲ್ಲಿರುವ ಎಎಸ್‌ಐನ ಎಪಿಗ್ರಫಿ ಶಾಖೆಗೆ ಬರಬೇಕಾದ ಅಗತ್ಯತೆ ತಪ್ಪಲಿದೆ ಎನ್ನುತ್ತಾರೆ.

ಭಾರತ್‌ಶ್ರೀ ಯೋಜನೆಯ ಪ್ರಯೋಜನಗಳನ್ನು ವಿವರಿಸಿದ ಅವರು, ಶಾಸನಗಳ ಕುರಿತಂತೆ ಸಂಶೋಧನಾ ಚಟುವಟಿಕೆಯನ್ನು ಈ ಡಿಜಿಟಲೀಕರಣವು ಗಮನಾರ್ಹವಾಗಿ ಹೆಚ್ಚಿಸಲಿದೆ. ಜೊತೆಗೆ ಶಾಸನಗಳ ಅಧ್ಯಯನಕ್ಕಾಗಿ ವಸ್ತು ಸಂಗ್ರಹಾಲಯಗಳು ಹಾಗೂ ವಿವಿಧ ಸ್ಥಳಗಳಿಗೆ ಭೇಟಿ ನೀಡುವ ಅಗತ್ಯತೆ ತಪ್ಪಲಿದೆ. ಇದರಿಂದ ಅವರಿಗೆ ಸಮಯ ಉಳಿತಾಯವಾಗಲಿದೆ. ಡಿಜಿಟಲೀಕರಣ ಮಾಡುವುದರಿಂದ ಮೂಲ ಎಸ್ಟಾಂಪೇಜ್ (ಪಡಿಯಚ್ಚು)ಗಳನ್ನು ಸಂರಕ್ಷಿಸಲೂ ಸಾಧ್ಯವಾಗಲಿದೆ. ಮೈಸೂರು ಪ್ರಧಾನ ಶಾಖೆಯಲ್ಲಿದ್ದ ತಮಿಳು ಎಸ್ಟಾಂಪೇಜ್‌ಗಳನ್ನು ಚೆನ್ನೈ ಶಾಖೆಗೆ ಸ್ಥಳಾಂತರ ಮಾಡಲಾಗಿದೆ ಎಂದು ಅವರು ಹೇಳುತ್ತಾರೆ.

ಡಿಜಿಟಲೀಕರಣ ಕಾರ್ಯವನ್ನು ಬೆಂಗಳೂರು ಮೂಲದ ಕ್ರಿಸ್ಟಲ್ ಇನ್ಫೋಸಿಸ್ಟಮ್ಸ್ ಅಂಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಲಾಗಿದೆ. ಈ ಕಂಪನಿಯ ಪರಿಣಿತರು ವಿಶೇಷ ರೀತಿ ಹೈ–ರೆಸಲ್ಯೂಷನ್ ಸ್ಕ್ಯಾನರ್ ಬಳಸಿ ಕಾರ್ಯ ನಿರ್ವಹಿಸುತ್ತಿದ್ದಾರೆ. 1:1ರ ಸ್ಕ್ಯಾನಿಂಗ್ ಅನುಪಾತದೊಂದಿಗೆ ಹೆಚ್ಚಿನ ರೆಸಲ್ಯೂಷನ್ ಚಿತ್ರಗಳನ್ನು ತಯಾರಿಸಲಾಗುತ್ತಿದ್ದು, ಇದರಿಂದ ಮೂಲಚಿತ್ರದ ನೈಜ ಗಾತ್ರದ ಮುದ್ರಣ ದೊರೆಯಲಿದೆ. ಕೆಲ ಎಸ್ಟಾಂಪೇಜ್‌ಗಳು 20 ಅಡಿ ಉದ್ದವಿರುತ್ತವೆ. ಡಿಜಿಟಲೀಕರಣ ಕಾರ್ಯ 6 ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಜೊತೆಗೆ ಡಿಜಿಟಲೀಕರಣಗೊಂಡ ಎಸ್ಟಾಂಪೇಜ್‌ಗಳನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಪ್ರಕ್ರಿಯೆಯನ್ನು ಜನವರಿ ಕೊನೆ ವಾರದಲ್ಲೇ ಆರಂಭಿಸುವ ಉದ್ದೇಶ ಹೊಂದಲಾಗಿದೆ ಎನ್ನುತ್ತಾರೆ ಅವರು.

ಶಾಸನ, ತಾಮ್ರ ಪತ್ರ, ನಾಣ್ಯಗಳು ಕಂಡುಬಂದಲ್ಲಿ ಮಾಹಿತಿ ನೀಡಿ...

ಸಾರ್ವಜನಿಕರಲ್ಲಿ ಶಾಖೆ ನಿರ್ದೇಶಕ ಡಾ.ಕೆ.ಮುನಿರತ್ನಂ ರೆಡ್ಡಿ ಮನವಿ

ಮೈಸೂರು,ಜ.6(ಪಿಎಂ)– ಶಾಸನಗಳ ಮಾಹಿತಿಯು ಭಾರತದ ಚರಿತ್ರೆ ರಚನೆ ಹಾಗೂ ಪುನರ್ ರಚನೆಗೆ ಪ್ರಾಥಮಿಕ ಆಕಾರಗಳಾಗಿವೆ. ಹಾಗಾಗಿ ಶಾಸನ, ತಾಮ್ರ ಪತ್ರ ಹಾಗೂ ನಾಣ್ಯಗಳು ಕಂಡುಬಂದಲ್ಲಿ ಸಾರ್ವಜನಿಕರು ಮೈಸೂರಿನಲ್ಲಿರುವ ಎಎಸ್‌ಐ ಎಪಿಗ್ರಫಿ ಶಾಖೆಗೆ ಮಾಹಿತಿ (ದೂ.ಸಂ. 0821–2304211/2304367) ನೀಡಬೇಕೆಂದು ಮೈಸೂರಿನಲ್ಲಿರುವ ಎಎಸ್‌ಐ ಎಪಿಗ್ರಫಿ ಪ್ರಧಾನ ಶಾಖೆ ನಿರ್ದೇಶಕ ಡಾ.ಕೆ.ಮುನಿರತ್ನಂ ರೆಡ್ಡಿ ಮನವಿ ಮಾಡಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರಿನ ನಮ್ಮ ಶಾಖೆಯಲ್ಲಿರುವ 75 ಸಾವಿರ ಎಸ್ಟ್ಯಾಂಪೇಜ್‌ಗಳನ್ನು (ಶಾಸನಗಳ ಪಡಿಯಚ್ಚು) ಡಿಜಿಟಲೀಕರಣಗೊಳಿಸುವ ಪ್ರಕ್ರಿಯೆ ಆರಂಭಗೊಂಡಿದೆ. 'ಭಾರತ್‌ಶ್ರೀ ಯೋಜನೆ'ಯಡಿ ಈ ಪ್ರಕ್ರಿಯೆ ಕೈಗೆತ್ತಿಕೊಂಡಿದ್ದು, ಶಾಸನಗಳ ಅಧ್ಯಯನವು ವಿದ್ವಾಂಸರು, ಸಂಶೋಧಕರಿಗೆ ಈ ಡಿಜಿಟಲೀಕರಣದಿಂದ ಸುಲಭ ಸಾಧ್ಯವಾಗಲಿದೆ. ಇದೇ ಇದರ ಮುಖ್ಯ ಉದ್ದೇಶ ಎಂದು ತಿಳಿಸಿದರು.

ತಿರುಪಾರಂಕುಂದ್ರಂ ಬೆಟ್ಟ ವಿವಾದ: ದೀಪ ಬೆಳಗಲು ಹಿಂದೂಗಳಿಗೆ ಅನುಮತಿ

ತೀರ್ಪು ಎತ್ತಿಹಿಡಿದ ಮದ್ರಾಸ್ ಹೈಕೋರ್ಟ್



ಚೆನ್ನೈ, ಜ.6– ತಿರುಪಾರಂಕುಂದ್ರಂ ಬೆಟ್ಟದ ಮೇಲೆ ಹಿಂದೂಗಳು ದೀಪ ಬೆಳಗಲು ಅನುಮತಿ ನೀಡಿದ ಹಿಂದಿನ ಆದೇಶವನ್ನು ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ಮಂಗಳವಾರ ಎತ್ತಿಹಿಡಿದಿದ್ದು, ತೀರ್ಪಿನಿಂದ ತಮಿಳುನಾಡು ಸರ್ಕಾರಕ್ಕೆ ಮುಖಭಂಗವಾಗಿದೆ.

ಡಿಸೆಂಬರ್ 1, 2025ರಂದು ನ್ಯಾಯಮೂರ್ತಿ ಜಿ.ಆರ್.ಸ್ವಾಮಿನಾಥನ್ ಅವರ ಆದೇಶವನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ದೇವಾಲಯ ದೇವಸ್ಥಾನದ ದೀಪ ಪ್ರಕರಣವನ್ನು ಆಲಿಸಿದ ನಂತರ, ಮದ್ರಾಸ್ ಹೈಕೋರ್ಟ್‌ನ ವಿಭಾಗೀಯ ಪೀಠವು ತನ್ನ ತೀರ್ಪನ್ನು ಕಾಯ್ದಿರಿಸಿತ್ತು.

ತಮಿಳುನಾಡು ಸರ್ಕಾರವು ದೇವಾಲಯವು ಜೈನ ದೇವಾಲಯ ಎಂದು ವಾದಿಸಿತ್ತು. ಇದಲ್ಲದೆ, ದೀಪಸ್ತಂಭವು ದರ್ಗಾದ ಆಸ್ತಿ ಎಂದು ವಕ್ಫ್ ಮಂಡಳಿ ಹೇಳಿಕೊಂಡಿತ್ತು.

ಇದೀಗ ವಿವಾದ ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠವು ತೀರ್ಪು ನೀಡಿದ್ದು, ದೇವಾಲಯದ ದೇವಾಲಯಗಳು ದೀಪಸ್ತಂಭಗಳ ಮೇಲೆ ದೀಪಗಳನ್ನು ಬೆಳಗಿಸಲು ಅವಕಾಶ ನೀಡಬೇಕು ಎಂದು ಆದೇಶಿಸಿದೆ.

ದೀಪಗಳನ್ನು ಬೆಳಗಿಸುವ ಅಭ್ಯಾಸವು ಪ್ರಾಚೀನ ಹಿಂದೂ ಸಂಪ್ರದಾಯವಾಗಿದೆ. ದೂರದಿಂದಲೇ ಭಕ್ತರಿಗೆ ದೀಪಗಳು ಗೋಚರಿಸುವಂತೆ ನೋಡಿಕೊಳ್ಳುವುದು ಇದರ ಉದ್ದೇಶವಾಗಿದೆ. ಭಕ್ತರ ಕೋರಿಕೆಯನ್ನು ನಿರಾಕರಿಸಲು ದೇವಾಲಯದ ಅಧಿಕಾರಿಗಳಿಗೆ ಯಾವುದೇ ಮಾನ್ಯ ಅಥವಾ ಕಾನೂನು ಕಾರಣವಿಲ್ಲ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಇದೇ ವೇಳೆ ಆದೇಶವನ್ನು ಪಾಲಿಸಲು ದೇವಸ್ಥಾನಕ್ಕೆ ನ್ಯಾಯಾಲಯ ಸೂಚನೆ ನೀಡಿದ್ದು, ಅಧಿಕಾರಿಗಳು ಮಂಡಿಸಿದ ವಾದಗಳನ್ನು ತೀವ್ರವಾಗಿ ಆಕ್ಷೇಪಿಸಿತು.

ತಮಿಳುನಾಡು ಸರ್ಕಾರ ಮತ್ತು ಜಿಲ್ಲಾಡಳಿತದ ವಾದಗಳನ್ನು ಹಾಸ್ಯಾಸ್ಪದ ಮತ್ತು ನಂಬಲು ಕಷ್ಟ ಎಂದು ಹೇಳಿರುವ ನ್ಯಾಯಾಲಯ, ದೇವಾಲಯದ ಆವರಣದಲ್ಲಿ ದೀಪವನ್ನು ಬೆಳಗಿಸುವಂತಹ ಸರಳವಾದ ವಿಚಾರ ಹೇಗೆ ಸಮಾಜದಲ್ಲಿ ಶಾಂತಿಗೆ ಅಪಾಯವನ್ನುಂಟು ಮಾಡುತ್ತದೆ ಎಂದು ಪ್ರಶ್ನಿಸಿದೆ,

ತಮಿಳುನಾಡಿನ ಮಧುರೈ ಬಳಿಯಿರುವ ತಿರುಪಾರಂಕುಂದ್ರಂ ಎಂಬ ಪುಣ್ಯಕ್ಷೇತ್ರದಲ್ಲಿ ಬೆಟ್ಟವೊಂದಿದ್ದು ಅದರಲ್ಲಿ ಮುರುಗನ್ ಸ್ವಾಮಿ, ಕಾಶಿ ವಿಶ್ವನಾಥ ಸ್ವಾಮಿ ದೇವಸ್ಥಾನಗಳಿವೆ. ಅದೇ ಬೆಟ್ಟದ ತುದಿಯಲ್ಲಿ ಸಿಕಂದರ್ ದರ್ಗಾ ಎಂಬ ಮುಸ್ಲಿಮರ ಪುಣ್ಯಕ್ಷೇತ್ರವೂ ಇದೆ. ಕಾಶಿ ವಿಶ್ವನಾಥ ದೇವಸ್ಥಾನ ಹಾಗೂ ಮುರುಗನ್ ದೇವಾಲಯಗಳ ನಡುವೆ ಇರುವ ದೀಪ ಮಂಟಪಂ ಎಂಬಲ್ಲಿ ಪ್ರತಿ ವರ್ಷ ತಮಿಳರ ಕಾರ್ತಿಕ ಮಾಸದಲ್ಲಿ ದೀಪಾರಾಧನೆ ಮಾಡಲಾಗುತ್ತದೆ.

ಅಲ್ಲಿರುವ ಎತ್ತರದ ದೀಪಗೋಪುರದಲ್ಲಿ ದೊಡ್ಡದಾಗಿ ದೀಪ ಬೆಳಗಲಾಗುತ್ತದೆ. ಆದರೆ, ಹಿಂದೂ ಕಾರ್ಯಕರ್ತರೊಬ್ಬರು ಆ ದೇವಸ್ಥಾನದಲ್ಲಿ ಶತಮಾನಗಳಿಂದ ನಡೆಸಿಕೊಂಡು ಬಂದಿರುವ ದೀಪೋತ್ಸವವನ್ನು ಆ ಬೆಟ್ಟದ ತುಟ್ಟತುದಿಯಲ್ಲಿ ಮಾಡಬೇಕು ಎಂದು ಮಧುರೈ ಪೀಠದ ಮೊರೆ ಹೋಗಿದ್ದರು. ಅದಕ್ಕೆ ನ್ಯಾ. ಜಿ.ಆರ್.ಸ್ವಾಮಿನಾಥನ್ ಅವರು ಒಪ್ಪಿಗೆ ನೀಡಿ, ಬೆಟ್ಟದ ಮೇಲೆಯೇ ದೀಪಾರಾಧನೆ ಮಾಡುವಂತೆ ಆದೇಶಿಸಿದ್ದರು.

ನ್ಯಾಯಾಧೀಶರ ಆದೇಶದ ಪ್ರಕಾರ ಡಿಸೆಂಬರ್ 4 ರೊಳಗೆ 'ದೀಪಥೂನ್' ಕಂಬದ ಮೇಲೆ ದೀಪವನ್ನು ಬೆಳಗಿಸಬೇಕಿತ್ತು. ಆದರೆ, ತಮಿಳುನಾಡು ಸರ್ಕಾರ ಇದಕ್ಕೆ ಅನುಮತಿ ನೀಡದೆ, ಅದೇ ಜಾಗದಲ್ಲಿರುವ ದರ್ಗಾದಲ್ಲಿ ಉರುಸ್? ಆಚರಣೆಗೆ ಅನುಮತಿ ನೀಡಿರುವುದು ಕೋಲಾಹಲಕ್ಕೆ ಕಾರಣವಾಗಿತ್ತು.

ದೀಪ ಬೆಳಗಲು ಅನುಮತಿ ನೀಡಿದ್ದ ನ್ಯಾಯಾಧೀಶ ಜಿ.ಆರ್.ಸ್ವಾಮಿನಾಥನ್ ವಿರುದ್ಧ ವಿಪಕ್ಷಗಳ ಸಂಸದರು ಕಿಡಿಕಾರಿದ್ದರು. ಬೆಟ್ಟದ ಮೇಲಿನ ದರ್ಗಾ ಬಳಿ ಇರುವ ಕಲ್ಲಿನ ಕಂಬದ ಮೇಲೆ ಸಾಂಪ್ರದಾಯಿಕ ದೀಪ ಬೆಳಗಲು ಆದೇಶ ನೀಡಿರುವ ನ್ಯಾಯಮೂರ್ತಿಗಳನ್ನು ಪದಚ್ಯುತಗೊಳಿಸಬೇಕೆಂದು ಆಗ್ರಹಿಸಿ ಸ್ಪೀಕರ್‌ಗೆ ದೂರು ನೀಡಿದ್ದರು. ಇದೀಗ ಹೈಕೋರ್ಟ್‌ನ ಮಧುರೈ ಪೀಠ ನೀಡಿರುವ ತೀರ್ಪು ವಿರೋಧಿಸುವವರಿಗೆ ಮುಖಭಂಗವಾಗುವಂತೆ ಮಾಡಿದೆ.

ದಿನನಿತ್ಯ ವಾಹನಗಳ ಚಾಲಕರು, ಸವಾರರಿಗೆ ಅಪಾಯಕಾರಿಯಾಗಿರುವ ರಸ್ತೆ ಒಕ್ಕಣೆ ವ್ಯವಸ್ಥೆ!

- ಹಲವು ವಾಹನ ಅಗ್ನಿಗಾಹುತಿ; ಮತ್ತೆ ಕೆಲವು ಉರುಳಿ ಜೀವಹಾನಿ
- ಈ ಹಾವಳಿಗೆ ಅಂತ್ಯವಾಡದ ಅಧಿಕಾರಿ ವರ್ಗದ ವಿರುದ್ಧ ಆಕ್ರೋಶ

ಮೈಸೂರು, ಜ.6– ಜಿಲ್ಲೆಯ ವಿವಿಧೆಡೆ ರಸ್ತೆಗಳಲ್ಲೇ ರಾಗಿ, ಹುರಳಿ, ಭತ್ತದ ಒಕ್ಕಣೆ ಮಾಡುತ್ತಿದ್ದು, ನಾನಾ ದುರಂತಕ್ಕೆ ಆಹ್ವಾನವನ್ನು ನೀಡಿದಂತಾಗಿದೆ.

ಜಿಲ್ಲೆಯಲ್ಲಿ ಸಾಮಾನ್ಯವಾಗಿ ಡಿಸೆಂಬರ್, ಜನವರಿ ಹಾಗೂ ಫೆಬ್ರವರಿಯಲ್ಲಿ ಒಕ್ಕಣೆ ಮಾಡಲಾಗುತ್ತದೆ. ರಾಗಿ, ಹುರುಳಿ, ಭತ್ತದ ಒಕ್ಕಣೆಗೆ ಈ ಹಿಂದೆ ಭೂಮಿ ಹದ ಮಾಡಿ, ಸಗಣಿ ಸಾರಿಸಿ ಕಣ ನಿರ್ಮಿಸಿಕೊಳ್ಳುತ್ತಿದ್ದರು. ಹತ್ತಾರು ಜನ ಒಟ್ಟಿಗೆ ಸೇರಿ ಜಾನಪದ ಪದ ಹಾಡುತ್ತಾ ಒಕ್ಕಣೆ ಮಾಡುತ್ತಿದ್ದರು. ಆದರೆ ಅಂತಹ ಸೊಬಗು ಕಾಣಿಸುವುದು ಅಪರೂಪವಾಗಿದೆ. ಕಣದ ಸಂಪ್ರದಾಯ ಬಿಟ್ಟು, ವಾಹನಗಳ ಓಡಾಟದ ಮಧ್ಯೆ ಡಾಂಬರು ರಸ್ತೆಯಲ್ಲೇ ಒಕ್ಕಣೆ ಮಾಡುವುದೇ ಹೆಚ್ಚಾಗಿದೆ.



ರಸ್ತೆಯೊಂದರಲ್ಲಿ ಕಾರಿನ ಚಕ್ರಕ್ಕೆ ಹುರುಳಿ ಸೆತ್ತೆ ಸಿಕ್ಕಿಹಾಕಿಕೊಂಡಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಬೆಳಗ್ಗೆಯೇ ರಾಗಿ, ಹುರುಳಿಯನ್ನು ರಸ್ತೆಗೆ ತಂದು ಹರಡುವ ರೈತರು ಸಂಜೆಯವರೆಗೂ ಒಕ್ಕಣೆ ಮಾಡುತ್ತಾರೆ. ಬಿಸಿಲು ಹಾಗೂ ಡಾಂಬರು ರಸ್ತೆ ಶಾಖದಿಂದ ಬೇಗ ಒಣಗುವುದರ ಜೊತೆಗೆ ಅದರ ಮೇಲೆ ವಾಹನಗಳೂ ಓಡಾಡುವುದರಿಂದ ಸುಲಭವಾಗಿ ಒಕ್ಕಣೆಯಾಗುತ್ತದೆ ಎಂಬುದು ರೈತರ ಯೋಚನೆ. ಆದರೆ ಇದರಿಂದ ನಾನಾ ರೀತಿಯ ಅವಘಡ ಸಂಭವಿಸುವ ಅಪಾಯ ಇರುವುದರಿಂದ ವಾಹನ ಸವಾರರು ಆತಂಕಪಡುವಂತಾಗಿದೆ.

ರಾಗಿ, ಹುರುಳಿ, ಭತ್ತದ ಹುಲ್ಲಿನ ಮೇಲೆ ಸಂಚರಿಸುವಾಗ ಅದೆಷ್ಟೋ ದ್ವಿಚಕ್ರವಾಹನಗಳು ಜಾರಿ ಉರುಳಿ ಬಿದ್ದು, ಸವಾರರು ಪೆಟ್ಟು ತಿಂದಿದ್ದಾರೆ. ಹಲವೆಡೆ ಸಾವು ಸಂಭವಿಸಿದೆ. ಪೆಟ್ರೋಲ್, ಡೀಸೆಲ್ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡು ಬೈಕ್, ಕಾರುಗಳು ಸುಟ್ಟು ಭಸ್ಮವಾಗಿರುವ ಸಾಕಷ್ಟು ಘಟನೆಗಳೂ ನಡೆದಿವೆ. ಹುಲ್ಲು ಚಕ್ರಗಳಿಗೆ ಸುತ್ತಿಕೊಂಡು ಅಪಘಾತ ಸಂಭವಿಸುವ ಸಾಧ್ಯತೆಯೂ ಹೆಚ್ಚಾಗಿದೆ.

ಕೆಲವೆಡೆ ರಸ್ತೆ ಪಕ್ಕದಲ್ಲಿ ಯಂತ್ರದ ಮೂಲಕ ಒಕ್ಕಣೆ ಮಾಡಿ, ನಂತರ ಹುಲ್ಲನ್ನು ರಸ್ತೆಗೆ ಹರಡುತ್ತಾರೆ. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುವುದರ ಜೊತೆಗೆ ಅತಿಯಾದ ಧೂಳಿನಿಂದ ಸಾಕಷ್ಟು ಸಮಸ್ಯೆಯಾಗುತ್ತಿದೆ. ಎತ್ತರವಾಗಿ ಹಾಕುವ ಒಣಗಿದ ಸೆತ್ತೆ ವಾಹನಗಳ ಚಕ್ರಕ್ಕೆ ಸುತ್ತಿಕೊಂಡು, ಪರಿಪಾಟಲು ಪಡುವಂತಾಗಿದೆ.

ರಸ್ತೆ ಮೇಲಿನ ಒಕ್ಕಣೆ ತಪ್ಪಿಸುವ ನಿಟ್ಟಿನಲ್ಲಿ ಹಲವು ಗ್ರಾಮಗಳಲ್ಲಿ ಸರ್ಕಾರದ ಅನುದಾನದಲ್ಲಿ ಕಣ ನಿರ್ಮಿಸಿಕೊಡಲಾಗಿದೆ. ಆದರೆ ಅಲ್ಲಿ ಎಲ್ಲರಿಗೂ ಒಕ್ಕಣೆ ಮಾಡಲು ಅವಕಾಶವಾಗುವುದಿಲ್ಲ. ಕೆಲವರು ಸುಲಭ ವಿಧಾನವೆಂದು ರಸ್ತೆ ಮೇಲಿನ ಒಕ್ಕಣೆಗೆ ಮುಂದಾಗುತ್ತಾರೆ. ಈ ಬಗ್ಗೆ ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಜಾಗೃತಿ ಮೂಡಿಸಿ, ಕಾನೂನು ಕ್ರಮದ ಎಚ್ಚರಿಕೆ ನೀಡಿದ್ದರೂ ಪ್ರಯೋಜನವಾಗಿಲ್ಲ.

ರಸ್ತೆ ಒಕ್ಕಣೆಯಿಂದ ಅವಘಡಗಳು ಸಂಭವಿಸಿ, ಸಾವು–ನೋವು ಉಂಟಾಗುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು ಮಾತ್ರ ಕಣ್ಮುಚ್ಚಿ ಕುಳಿತಿದ್ದಾರೆ. ದೂರು ಬಂದಾಗ ಮಾತ್ರ ಆ ನಿರ್ದಿಷ್ಟ ಸ್ಥಳಕ್ಕೆ ತೆರಳಿ, ರೈತರನ್ನು ಬೆದರಿಸಿ ವೀರಾವೇಶ ತೋರುವ ಅಧಿಕಾರಿಗಳು, ವಾಹನ ಚಾಲಕರು ಹಾಗೂ ಸವಾರರ ಪ್ರಾಣಕ್ಕೆ ಕಂಟಕವಾಗಿ ಪರಿಣಮಿಸಿರುವ ಈ ಅಪಾಯಕಾರಿ ಒಕ್ಕಣೆ ವಿಧಾನವನ್ನು ತಡೆಯುವ ಗಂಭೀರ ಪ್ರಯತ್ನ ನಡೆಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿರುವ ವಾಹನ ಸವಾರರು, ರಸ್ತೆ ಒಕ್ಕಣೆ ಮಾಡಿದರೆ ಆಯಾ ವ್ಯಾಪ್ತಿಯ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

> ಬಹುತೇಕ ರಸ್ತೆಗಳಲ್ಲಿ ಈಗಾಗಲೇ ರಾಗಿ ಬಣವೆಗಳನ್ನು ಹಾಕಿ, ಒಕ್ಕಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ರಸ್ತೆ ಮೇಲೆ ಹಾಕುವ ಬಣವೆಯಿಂದ ಭಾರೀ ಅವಘಡಗಳು ಸಂಭವಿಸುತ್ತವೆ. ವಾಹನಗಳ ಕೆಳಗೆ ಫಸಲು ಸುತ್ತಿಕೊಂಡು ಚಾಲಕರು ಹೈರಾಣಾಗುತ್ತಿದ್ದಾರೆ. ದ್ವಿಚಕ್ರ ವಾಹನ ಸವಾರರು ಬಿದ್ದು ಕೈ ಕಾಲು ಮುರಿದುಕೊಳ್ಳುವ ಸಾಧ್ಯತೆ ಇದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಒಕ್ಕಣೆ ಕಾರ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಟ್ಟು, ರಸ್ತೆಗಳನ್ನು ಸುಗಮ ಸಂಚಾರಕ್ಕೆ ಮುಕ್ತಗೊಳಿಸಬೇಕಿದೆ.
>
> - ಪ್ರದೀಪ್, ಬೈಕ್ ಸವಾರ

ಕಸದಿಂದ ಮುಚ್ಚಿದ ಕೆರೆಗೆ ಮರುಜೀವ; ಪರಸನಾಯಕನ ಕೆರೆ ಈಗ ಪ್ರವಾಸಿ ತಾಣ



ಕಸ, ತ್ಯಾಜ್ಯಗಳಿಂದ ತುಂಬಿ ತುಳುಕುತ್ತಿದ್ದ ಪರಸನಾಯಕನ ಕೆರೆ



ಕ್ರೆಡಿಟ್–ಐ ಸಂಸ್ಥೆಯಿಂದ ಕಾಯಕಲ್ಪಗೊಂಡ ಕೆರೆಯ ವಿಹಂಗಮ ನೋಟ

ಮೈಸೂರು, ಜ.6(ವಿವಿಹೆಚ್)– ಕಸದಿಂದ ತುಂಬಿ ತುಳುಕುತ್ತಿದ್ದ ಕೆರೆ ಅಂತೂ ಕಾಯಕಲ್ಪ ಭಾಗ್ಯದಿಂದ ಈಗ ಕಂಗೊಳಿಸುತ್ತಿದ್ದು, ಇದೀಗ ಸ್ಥಳೀಯರು ಹಾಗೂ ಪ್ರವಾಸಿಗರನ್ನು ಆಕರ್ಷಿಸುವ ಪ್ರಮುಖ ಪ್ರವಾಸಿ ತಾಣವಾಗುತ್ತಿದೆ.

ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನ ಉತ್ತನಹಳ್ಳಿ ಮಾರ್ಗದಲ್ಲಿನ 'ಪರಸನಾಯಕನ ಕೆರೆ'ಗೆ ಈಗ ಹೊಸ ರೂಪ ದಕ್ಕಿ ಈ ಕೆರೆ ಇಂದು ಮಾನವ, ಪಕ್ಷಿ ಮತ್ತು ಪ್ರಾಣಿಗಳಿಗೆ ಪ್ರಮುಖ ಜಲ ಮೂಲವಾಗಿ ಪರಿಣಮಿಸಿದೆ.

ಸಾಮಾನ್ಯವಾಗಿ ಕೆರೆಗಳು ಸಹಜವಾಗಿ ಹೂಳು ತುಂಬಿ ವಿನಾಶದಂಚಿಗೆ ತಲುಪುತ್ತವೆ. ಆದರೆ ಬಂಡಿಪಾಳ್ಯದ ಎಪಿಎಂಸಿಗೆ ಹೊಂದಿಕೊಂಡಂತೆ ಬೆಟ್ಟದ ತಪ್ಪಲಿನಲ್ಲಿರುವ ಪರಸನಾಯಕನ ಕೆರೆ ಸಂಪೂರ್ಣ ತ್ಯಾಜ್ಯದಿಂದಲೇ ಮುಚ್ಚಿ ಹೋಗಿತ್ತು. ಮಾರುಕಟ್ಟೆಯಲ್ಲಿನ ಕಸ ಸೇರಿದಂತೆ ಖಾಸಗಿ ಬಡಾವಣೆಗಳಲ್ಲಿನ ಕಸವನ್ನು ಇಲ್ಲೇ ಸುರಿಯುತ್ತಿದ್ದರಿಂದ ಇಡೀ ಕೆರೆ ಮುಚ್ಚಿ ಹೋಗಿತ್ತು.

ಎಲ್ಲೆಂದರಲ್ಲಿ ಕಸದ ರಾಶಿಯೊಂದಿಗೆ ಪ್ಲಾಸ್ಟಿಕ್‌ಮಯವಾಗಿತ್ತು. ಅಲ್ಲದೇ ಕೆರೆ ಆವರಣ ಹಂದಿಗಳ ಆವಾಸ ಸ್ಥಾನವಾಗಿದ್ದು, ಮಳೆ ನೀರು ಕೆರೆ ಸೇರಿ ಇಡೀ ಕೆರೆ ದುರ್ನಾತಮಯವಾಗಿತ್ತು. ಈ ಮಾರ್ಗದಲ್ಲಿ ಸಂಚರಿಸುವವರು ಮೂಗು ಮುಚ್ಚಿಕೊಂಡು ಸಂಚರಿಸುವಂತಹ ದುಸ್ಥಿತಿ ನಿರ್ಮಾಣ ಮಾಡಿತ್ತು.

ಚಾಮುಂಡಿಬೆಟ್ಟದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಈ ಕೆರೆಗೆ ಕಾಯಕಲ್ಪ ನೀಡುವ ಉದ್ದೇಶದಿಂದ ಗ್ರಾಪಂ ಅಧಿಕಾರಿಗಳು ಮೈಸೂರಿನ ಕ್ರೆಡಿಟ್–ಐ ಸಂಸ್ಥೆಯನ್ನು ಸಂಪರ್ಕಿಸಿದ್ದಾರೆ. ತಕ್ಷಣ ಸ್ಪಂದಿಸಿದ ಕ್ರೆಡಿಟ್–ಐ ಸಂಸ್ಥೆ ಒಂದು ವರ್ಷ ಕಾಲಾವಧಿಯಲ್ಲಿ ಕೆರೆಯ ಸಂಪೂರ್ಣ ಜೀರ್ಣೋದ್ಧಾರ ಮಾಡಿದ್ದಾರೆ.

> ಕೆರೆಗಳ ಉಳಿವಿನಿಂದ ಜೀವ ಸಂಕುಲ ಉಳಿಯುತ್ತದೆ. ಸ್ವಚ್ಛ ಗಾಳಿ, ಶುದ್ಧ ನೀರು ಪ್ರಮುಖವಾಗಿದ್ದು ಹಳ್ಳಿಗಳ ಪ್ರಮುಖ ಜೀವನಾಡಿ ಕೆರೆಗಳ ಕಾಯಕಲ್ಪಕ್ಕೆ ಶ್ರಮಿಸಲಾಗುವುದು. ಇದು ರೈತರಿಗೆ ನಮ್ಮ ಸಂಸ್ಥೆಯಿಂದ ನೀಡುವ ಕೊಡುಗೆಯೂ ಆಗಿದೆ.
>
> 
>
> –ಡಾ.ಎಂ.ಪಿ.ವರ್ಷ, ಕ್ರೆಡಿಟ್ ಐ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ

ಡಿ.9, 2024 ರಂದು ಕೆರೆಯ ಜೀರ್ಣೋದ್ಧಾರ ಕಾರ್ಯ ಆರಂಭಿಸಿದ್ದು, ಸೆ.10, 2025ರ ಹೊತ್ತಿಗೆ ಕಾಮಗಾರಿ ಸಂಪೂರ್ಣಗೊಂಡು ಕೆರೆಯ ಸ್ವರೂಪವೇ ಬದಲಾಗಿದೆ. ಹೂಳೆತ್ತುವುದರಿಂದ ಕೆರೆಯ ಆಳ ಹೆಚ್ಚಿಸಿ ಹೆಚ್ಚಿನ ನೀರು ಸಂಗ್ರಹವಾಗುತ್ತಿದ್ದು, ಕೆರೆಯ ಬದಿಯಲ್ಲಿ ಹೆಚ್ಚಿನ ಗಿಡಮರಗಳು ಬೆಳೆದು, ಚಿಕ್ಕ ಪಕ್ಷಿಧಾಮವಾಗಿ ಮಾರ್ಪಟ್ಟಿದೆ.

2,500 ಲೋಡ್ ಕಸ ವಿಲೇವಾರಿ: ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕ್ರೆಡಿಟ್ ಐ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಡಾ.ಎಂ.ಪಿ.ವರ್ಷ, ಏಷಿಯನ್ ಪೇಂಟ್ಸ್ ಸಿಎಸ್‌ಆರ್ ಅನುದಾನದಡಿ ಕ್ರೆಡಿಟ್ ಐ ಸಂಸ್ಥೆ ಕೆರೆಯ ಜೀರ್ಣೋದ್ಧಾರ ಕಾರ್ಯವನ್ನು ನಡೆಸುತ್ತಿದೆ. ಸುಮಾರು 15.20 ಎಕರೆ ಪ್ರದೇಶ ವ್ಯಾಪ್ತಿಯನ್ನು ಹೊಂದಿರುವ ಈ ಕೆರೆಯಲ್ಲಿ 2,500 ಲೋಡ್ ಕಸವನ್ನು ಹೊರತೆಗೆಯಲಾಯಿತು. ಬಳಿಕ 45,336 ಟ್ರ್ಯಾಕ್ಟರ್ ಲೋಡ್ ಹೂಳು ಮಣ್ಣನ್ನು ಹೊರ ತೆಗೆದು ರೈತರಿಗೆ ಪ್ರತಿ ಲೋಡ್‌ಗೆ 30 ರೂ. ನಂತೆ ಕೊಡಲಾಗಿದೆ. ಇದರಿಂದ ರೈತರ ಜಮೀನಿಗೆ ಯಾವುದೇ ರಸ ಗೊಬ್ಬರ ಬಳಕೆ ಮಾಡದೇ ಫಲವತ್ತಾದ ಮಣ್ಣಿನ ಸಹಾಯದಿಂದ ಉತ್ತಮ ಇಳುವರಿ ತೆಗೆಯಬಹುದಾಗಿದೆ ಎಂದರು.

ಮೈಸೂರು, ನಂಜನಗೂಡು ವ್ಯಾಪ್ತಿಯಲ್ಲಿ ಈವರೆಗೆ 140ಕ್ಕೂ ಅಧಿಕ ಕೆರೆಗಳ ಜೀರ್ಣೋದ್ಧಾರದಲ್ಲಿ ತೊಡಗಿಸಿಕೊಂಡಿದ್ದು, ರೈತರಿಗೆ ಅನುಕೂಲ ಮಾಡಿಕೊಡಲು, ಅಂತರ್ಜಲ ಮಟ್ಟ ಹೆಚ್ಚಿಸಲು, ಸಸ್ಯಜೀವ ಸಂರಕ್ಷಣೆ, ನೀರಿನ ಶೇಖರಣೆ ಸೇರಿದಂತೆ ಹಲವು ಉಪಯುಕ್ತ ಕೆಲಸಗಳಿಗೆ ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ವಿಶೇಷವಾಗಿ ಪರಸನಾಯಕನ ಕೆರೆಯಲ್ಲಿ ಸಂಗ್ರಹವಾಗಿದ್ದ ತ್ಯಾಜ್ಯಗಳಿಂದಲೇ ತಡೆಗೋಡೆಗಳನ್ನು ನಿರ್ಮಿಸಲಾಗಿದ್ದು, ಕಸ ಹಾಕುವ ಕಾರ್ಯಕ್ಕೆ ಕಡಿವಾಣ ಹಾಕಲಾಗಿದೆ. ಜೊತೆಗೆ ಕ್ರೆಡಿಟ್–ಐ ವತಿಯಿಂದ 2030ರ ವೇಳೆ ಮೈಸೂರಿನ ಎಲ್ಲಾ ಕೆರೆಗಳಿಗೆ ಕಾಯಕಲ್ಪ ನೀಡಲಾಗುವುದು ಎಂದೂ ಹೇಳಿದರು.

ದೆಹಲಿಯ ಗಂಗಾರಾಮ್ ಆಸ್ಪತ್ರೆಗೆ ಸೋನಿಯಾ ಗಾಂಧಿ ದಾಖಲು



ನವದೆಹಲಿ, ಜ.6–ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಕಫದ ಸಮಸ್ಯೆಯಿಂದ ದೆಹಲಿಯ ಸರ್ ಗಂಗಾ ರಾಮ್ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ತಿಳಿದುಬಂದಿದೆ.

ಅವರ ಆರೋಗ್ಯ ಸ್ಥಿರವಾಗಿದ್ದು, ಹೃದ್ರೋಗ ವೈದ್ಯರ ಮೇಲ್ವಿಚಾರಣೆಯಲ್ಲಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಸೋನಿಯಾ ಗಾಂಧಿ ಅವರಿಗೆ ಕೆಲ ದಿನಗಳಿಂದ ಕೆಮ್ಮು ಮತ್ತು ಕಫದ ಸಮಸ್ಯೆಯಿದೆ. ದೆಹಲಿಯಲ್ಲಿ ಈಗ ತೀವ್ರ ವಾಯುಮಾಲಿನ್ಯವಿರುವುದರಿಂದ ಅವರು ತಪಾಸಣೆಗಾಗಿ ನಿಯಮಿತವಾಗಿ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಸೋನಿಯಾ ಗಾಂಧಿ ಅವರಿಗೆ 79 ವರ್ಷ ವಯಸ್ಸಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ, ಅವರನ್ನು ಹೆಚ್ಚಿನ ತಪಾಸಣೆ ಮತ್ತು ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಪ್ರಸ್ತುತ, ಅವರ ಆರೋಗ್ಯ ಸ್ಥಿತಿ ಸಂಪೂರ್ಣವಾಗಿ ಸ್ಥಿರವಾಗಿದೆ. ಅವರು ಚಿಕಿತ್ಸೆಗೆ ಉತ್ತಮವಾಗಿ ಪ್ರತಿಕ್ರಿಯಿಸುತ್ತಿದ್ದಾರೆ ಆಂಟಿಬಯೋಟಿಕ್ ಮತ್ತು ಇತರ ಪೂರಕ ಔಷಧಿಗಳೊಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಅವರ ಆರೋಗ್ಯ ಸುಧಾರಣೆ ನೋಡಿಕೊಂಡು ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಗಂಗಾರಾಮ್ ಆಸ್ಪತ್ರೆಯ ಡಾ. ಅಜಯ್ ಸ್ವರೂಪ್ ತಿಳಿಸಿದ್ದಾರೆ.

ಡಿಸಿಎಂ ಡಿ.ಕೆ.ಶಿವಕುಮಾರ್ ಹಾರೈಕೆ: ಸೋನಿಯಾ ಗಾಂಧಿ ಅವರು ಶೀಘ್ರವಾಗಿ ಗುಣಮುಖರಾಗಲಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹಾರೈಸಿದ್ದಾರೆ. ಅವರು ಇನ್ನಷ್ಟು ವರ್ಷ ಕಾಂಗ್ರೆಸ್ ಪಕ್ಷ ಮತ್ತು ದೇಶಕ್ಕಾಗಿ ದುಡಿಯುವ ಅಗತ್ಯವಿದ್ದು, ಅವರ ದೀರ್ಘ ಆರೋಗ್ಯಕ್ಕೆ ಆಶಿಸುತ್ತೇನೆ ಎಂದು ಹೇಳಿದ್ದಾರೆ.

ನಾಯಕಂಡ ಭಾರತಿ ನಿಧನ



ಮೈಸೂರು, ಜ.6– ಮೈಸೂರಿನ ಗೋಕುಲಂ 3ನೇ ಹಂತ, ಕಾಂಟೂರ್ ರಸ್ತೆ(ಎಂಐಜಿ ನಂ.12) ನಿವಾಸಿ ನಾಯಕಂಡ ಭಾರತಿ(ತಾಮನೆ ಪಾಂಡಂಡ) ಅವರು ಮಂಗಳವಾರ ಸಂಜೆ 7 ಗಂಟೆ ಸುಮಾರಿಗೆ ನಿಧನರಾದರು. ಇವರಿಗೆ 71 ವರ್ಷ ವಯಸ್ಸಾಗಿತ್ತು.

ಇವರು ಪತಿ ನಾಯಕಂಡ ಅಪ್ಪಯ್ಯ(ಅರುಣ್), ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂ ಚಿರಶಾಂತಿಧಾಮದಲ್ಲಿ ಬುಧವಾರ(ಜ.7) ಮಧ್ಯಾಹ್ನ 2.30ಕ್ಕೆ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಸಿದ್ದರಾಮಯ್ಯ ಈಗ ದಾಖಲೆ ಮುಖ್ಯಮಂತ್ರಿ: ಎಲ್ಲೆಲ್ಲೂ ಸಂಭ್ರಮಾಚರಣೆ



ಮುಖ್ಯಮಂತ್ರಿ ಸಿದ್ದರಾಮಯ್ಯ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಇತಿಹಾಸ ಸೃಷ್ಟಿಸಿದ ಹಿನ್ನೆಲೆಯಲ್ಲಿ ತಿ.ನರಸೀಪುರದಲ್ಲಿ ಸಂಭ್ರಮಾಚರಣೆ ಮಾಡಲಾಯಿತು.

ತಿ.ನರಸೀಪುರದಲ್ಲಿ ಲಾಡು ಹಂಚಿ ಸಂಭ್ರಮಾಚರಣೆ

ತಿ.ನರಸೀಪುರ, ಜ.6–ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಧೀರ್ಘ ಕಾಲ ಆಡಳಿತ ನಡೆಸಿ ಇತಿಹಾಸ ಸೃಷ್ಟಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಸಾರ್ವಜನಿಕರಿಗೆ 5 ಸಾವಿರಕ್ಕೂ ಹೆಚ್ಚು ಲಾಡುಗಳನ್ನು ಹಂಚಿ ಖುಷಿ ಪಟ್ಟರು. ಈ ವೇಳೆ ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು ಮಾತನಾಡಿ ಸಿದ್ದರಾಮಯ್ಯ ನಾಡಿನ ದೊಡ್ಡ ಆಸ್ತಿ. ಜನರ ಬೆಂಬಲದಿಂದ ಹೆಮ್ಮರವಾಗಿ ಬೆಳೆದಿದ್ದಾರೆ, ಹಾಗಾಗಿ ಜನಸಾಮಾನ್ಯರ ಶ್ರೀರಕ್ಷೆ ಇರುವವರೆಗೂ ಸಿದ್ದರಾಮಯ್ಯ ಅವರನ್ನು ರಾಜಕೀಯ ಜನಪ್ರಿಯತೆ ಕುಂದಿಸಲು ಯಾರಿಂದಲೂ ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಅವರು ಬಹು ದೊಡ್ಡ ಶಕ್ತಿಯಾಗಿದ್ದು, ಪಕ್ಷಕ್ಕೆ ಬಲ ತುಂಬಿದ್ದಾರೆ ಎಂದರು.

ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕ ರಾಜಕಾರಣದಲ್ಲಿ ಸಕ್ರಿಯವಾಗಿರುವ ಮೇಧಾವಿ ಹಾಗೂ ರಾಜಕೀಯ ರಂಗದ ನಿಜವಾದ ಚಾಣಕ್ಯ ಎಂದರೆ ಅದು ನಮ್ಮ ಸಿದ್ದರಾಮಯ್ಯನವರು ಎಂದು ಎಪಿಎಂಸಿ ಮಾಜಿ ಅಧ್ಯಕ್ಷರು ಹಾಲಿ ಪಿಕಾರ್ಡ್ ಬ್ಯಾಂಕ್ ನಿರ್ದೇಶಕರಾದ ಎನ್. ಅನಿಲ್ ಕುಮಾರ್ ತಿಳಿಸಿದ್ದಾರೆ.

ಪ್ರತಿಭೆ ಮತ್ತು ಜನಪರವಾಗಿ ಕೆಲಸ ಮಾಡುವ ಆರೋಗ್ಯಕರ ಮನಸ್ಥಿತಿ ಇದ್ದಾಗಲೂ ಸಹ ಫ್ಯೂಡಲ್‌ಗಳ ಬಲೆಗೆ ಸಿಲುಕಿದ್ದ ಸಿದ್ದರಾಮಯ್ಯನವರು, ಆ ಬಲೆಯ ಸಿಕ್ಕನ್ನು ಬಿಡಿಸಿಕೊಂಡು, ಶೋಷಿತ ಸಮುದಾಯಗಳನ್ನು ಸಂಘಟಿಸಿ, ಸಿದ್ದರಾಮಯ್ಯ ಎಂದರೆ ಅವರು ನಮ್ಮೆಲ್ಲರ ಪ್ರತಿನಿಧಿ ಎಂಬುವಂತಹ ನಂಬಿಕೆ ಹುಟ್ಟುವಂತೆ ಆಡಳಿತ ನಡೆಸಿದ್ದಾರೆ ಮತ್ತು ನುಡಿದಂತೆ ನಡೆದ ಈ ಕಾಲದ ದೊಡ್ಡ ನಾಯಕ ಎಂದರು.

ಜಿ.ಪಂ ಮಾಜಿ ಸದಸ್ಯ ಕೆ. ಮಹದೇವ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇ ಹುಂಡಿ ಮಹೇಶ್, ಬ್ಯಾಂಕ್ ನಿರ್ದೇಶಕ ಮಹಾದೇವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಗರ್ಗೇಶ್ವರಿ ಪ್ರಾಥಮಿಕ ಸಹಕಾರ ಸಂಘದ ಉಪಾಧ್ಯಕ್ಷ ಮಸ್ತೂರು, ಗೋಪಿ, ಮಂಜು, ಮಲೆ ಮಹದೇಶ್ವರ ಬೆಟ್ಟದ ನಿರ್ದೇಶಕಿ ಭಾಗ್ಯಮ್ಮ, ಕುಂಬಾರ ಸಂಘದ ಸಂಸ್ಥಾಪಕ ಅಧ್ಯಕ್ಷ ರಾಜಣ್ಣ, ಪುರಸಭಾ ನಾಮ ನಿರ್ದೇಶಕರಾದ ಚೇತನ್, ಗುರುಸ್ವಾಮಿ, ಹಾಳೇಗೌಡ, ಗುತ್ತಿಗೆದಾರ ಮಂಟೆಲಿಂಗಪ್ಪ ಸೇರಿದಂತೆ ಮತ್ತಿತರರಿದ್ದರು.

ದೇವಸ್ಥಾನದಲ್ಲಿ ಪೂಜೆ, ಸಾವಿರಾರು ಜನರಿಗೆ ಅನ್ನ ಸಂತರ್ಪಣೆ



ತಿ.ನರಸೀಪುರ ಪಟ್ಟಣದಲ್ಲಿ ವರುಣ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಿಸಿದರು.

ತಿ.ನರಸೀಪುರ, ಜ.6– ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ದೀರ್ಘಾವಧಿ ಮುಖ್ಯಮಂತ್ರಿಯಾಗಿ ರಾಜ್ಯದ ಜನರ ಸೇವೆ ಸಲ್ಲಿಸಿ ಇತಿಹಾಸ ನಿರ್ಮಾಣ ಮಾಡುತ್ತಿರುವ ಹಿನ್ನೆಲೆಯಲ್ಲಿ ವರುಣ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದಲ್ಲಿ ಸಂಭ್ರಮಾಚರಣೆ ಮಾಡಲಾಯಿತು.

ಪಟ್ಟಣದ ಕುರುಬರ ಸಂಘದ ಆವರಣದಲ್ಲಿ ಜಮಾವಣೆಗೊಂಡ ನೂರಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು, ಪಕ್ಷದ ಮುಖಂಡರು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ ಅಧಿಕಾರಾವಧಿಯನ್ನು ಸರಿಗಟ್ಟಿ ಇತಿಹಾಸ ನಿರ್ಮಾಣ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಹೆಸರಿನಲ್ಲಿ ಶ್ರೀ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಕಾಂಗ್ರೆಸ್ ಮುಖಂಡ, ತಾ.ಪಂ. ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ.ರಮೇಶ್ ನೇತೃತ್ವದಲ್ಲಿ ಸಿದ್ದರಾಮಯ್ಯ ಅವರ ಬೃಹತ್ ಕಟೌಟ್ ಗೆ ಹಾಲಿನ ಅಭಿಷೇಕ ಮಾಡಿದ ಕಾಂಗ್ರೆಸ್ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಐತಿಹಾಸಿಕ ದಾಖಲೆಗೆ ಸಂಭ್ರಮಾಚರಣೆ ಮಾಡಿದರು.

ಈ ವೇಳೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ತಾ.ಪಂ.ಮಾಜಿ ಸದಸ್ಯ ರಮೇಶ್ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಹಿಂದುಳಿದ ವರ್ಗಗಳ ನೇತಾರ ದೇವರಾಜ ಅರಸುರವರ ದಾಖಲೆ ಮುರಿದ ಸಮಾನ ಮನಸ್ಕರಾಗಿದ್ದಾರೆ ಎಂದರು.

ಜಿಲ್ಲಾ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ಮಾತನಾಡಿದರು. ತಾಲೂಕು ಕುರುಬರ ಸಂಘದ ಮಾಜಿ ನಿರ್ದೇಶಕ ಎಂ.ಕೆ.ಸಹದೇವ, ರಿಯಲ್ ಎಸ್ಟೇಟ್ ಉದ್ಯಮಿ ಶಂಕರ, ಫೈನಾನ್ಸ್ ಕಾಂತರಾಜು, ಹಾಳೇಗೌಡ, ರಾಮನಂಜಯ್ಯ,ಗುರುಸ್ವಾಮಿ, ತಿರುಮಕೂಡಲು ಪುಟ್ಟು, ದಿವಾಕರ, ಸೋಮು ದಾದಾ, ತುಂಬಲ ಅಂದಾನಿ, ಚೇತನ್, ಚಿಳ್ಳಿ ಮಹದೇವ್, ಗಗ್ಗರಿ ಬಸರಾಜು, ಕೊತ್ತೇಗಾಲ ಬಸವರಾಜು, ನಾಗರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಮಹೇಶ್ ಇದ್ದರು.

ಸಾಮಾಜಿಕ ನ್ಯಾಯ ಒದಗಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ

ತಿ.ನರಸೀಪುರ, ಜ.6– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೀನ ದಲಿತರ, ದುರ್ಬಲರ, ನೊಂದವರ ಪರವಾಗಿ ಸಾಮಾಜಿಕ ನ್ಯಾಯ ಒದಗಿಸುವ ಧೀಮಂತ ರಾಜಕಾರಣಿ ಎಂದು ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದುಳಿದ ವರ್ಗದವರ ಆಶಾಕಿರಣ ದೇವರಾಜ ಅರಸುರವರ ನಂತರ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ಇತಿಹಾಸ ಸೃಷ್ಟಿಸಿದ ಹಿನ್ನೆಲೆಯಲ್ಲಿ ಪಟ್ಟಣದ ಭಗವಾನ್ ಚಿತ್ರಮಂದಿರದ ಬಳಿ ಹಮ್ಮಿಕೊಳ್ಳಲಾಗಿದ್ದ ಸಂಭ್ರಮಾಚರಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರೊಡಗೂಡಿ ಕೇಕ್ ಕತ್ತರಿಸಿ, ಸಾರ್ವಜನಿಕರಿಗೆ ಲಾಡು ವಿತರಣೆ ಮಾಡಿ ಅವರು ಮಾತನಾಡಿದರು.

ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಪ್ರಕಾಶ್ ಮಾತನಾಡಿ ಶಾಸಕರಾಗಿ, ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ ಮತ್ತು ಎರಡು ಬಾರಿ ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಿರುವ ಸಿದ್ದರಾಮಯ್ಯ ಅವರು ಇನ್ನೂ ಹತ್ತಾರು ವರ್ಷಗಳ ಕಾಲ ಕರ್ನಾಟಕ ರಾಜಕೀಯದಲ್ಲಿ ಸಕ್ರಿಯವಾಗಿ ಇರುತ್ತಾರೆ ಎಂಬುದೇ ರಾಜ್ಯದ ಪಾಲಿಗೆ ದೊಡ್ಡ ನೆಮ್ಮದಿಯ ವಿಷಯ ಎಂದರು.

ಪುರಸಭೆಯ ಮಾಜಿ ಅಧ್ಯಕ್ಷ ಎಸ್. ಮದನ್ ರಾಜ್, ಸಿ ಪ್ರಕಾಶ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಪುರಸಭಾ ಸದಸ್ಯರಾದ ಬಾದಾಮಿ ಮಂಜು, ಬೈರಾಪುರ ಮಂಜುನಾಥ್, ಕಿರಗಸೂರು ಗ್ರಾಪಂ. ಮಾಜಿ ಉಪಾಧ್ಯಕ್ಷ ಮಹಾದೇವ್, ಜಿಲ್ಲಾ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ಕಾರ್ಮಿಕ ವಿಭಾಗದ ಅಧ್ಯಕ್ಷ ಬಣ್ಣ ಬಸವರಾಜು, ಕುರುಬರ ಸಂಘದ ಕಾರ್ಯಾಧ್ಯಕ್ಷ ಮಾದೇಶ್, ಕಾಂಗ್ರೆಸ್ ಮುಖಂಡ ಚೌಹಳ್ಳಿ ಮಲ್ಲೇಶ್, ಪುರಿ ನಟರಾಜು, ನಾಗೇಂದ್ರ ಮತ್ತಿತರರಿದ್ದರು.



ಟಿ.ನರಸೀಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಲಾಡು ವಿತರಿಸಿ ಸಂಭ್ರಮಿಸಿದರು.

ಬಸವೇಶ್ವರ, ರೇವಣ ಸಿದ್ದೇಶ್ವರ ರಥೋತ್ಸವ

ಸರಗೂರು: ತಾಲೂಕಿನ ಹುಣಸಹಳ್ಳಿ ಗ್ರಾಮದಲ್ಲಿ ಮಂಗಳವಾರ ಬಸವೇಶ್ವರ, ರೇವಣ ಸಿದ್ದೇಶ್ವರ ದೇವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಗ್ರಾಮದ ಬೀದಿಗಳಲ್ಲಿ ರಥೋತ್ಸವ ಸಾಗಿ ಬಂತು. ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನವನ್ನು ವಿವಿಧ ಬಣ್ಣಗಳಿಂದ ಬಳಿದು ತಳಿರು ತೋರಣ ಕಟ್ಟಿ ಸಿಂಗಾರಿಸಲಾಗಿತ್ತು. ವಾದ್ಯಗೋಷ್ಠಿಗಳು ಮೊಳಗಿದವು. ವೀರಗಾಸೆ ನೃತ್ಯ ಪ್ರದರ್ಶಿಸಲಾಯಿತು. ಸತ್ತಿಗೆಗಳು, ನಂದಿಧ್ವಜ ಕಂಬಗಳ ಮೆರವಣಿಗೆ ನಡೆಸಲಾಯಿತು. ದೇವರ ರಥೋತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ದೇವಸ್ಥಾನದಲ್ಲಿ ಕೊನೆಗೊಂಡಿತು.

ರಥೋತ್ಸವ ಸಂದರ್ಭದಲ್ಲಿ ಗ್ರಾಮದ ಮಹಿಳೆಯರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಇನ್ನು ಕೆಲವರು ದೇವರ ನಾಮ ಪಠಿಸಿದರು. ಬಸವೇಶ್ವರ ದೇವರ ಬಸವ ಮೆರವಣಿಗೆಯಲ್ಲಿ ಸಾಗಿ ಬಂದದ್ದು ವಿಶೇಷವಾಗಿತ್ತು. ಹೂವು, ಬಾಳೆ ಹಣ್ಣುಗಳನ್ನು ನೀಡಿ ದೇವರಿಗೆ ನಮಿಸಿದರು. ಇನ್ನು ಕೆಲವರು ದೇವರಿಗೆ ಹೊತ್ತ ಹರಕೆ ತೀರಿಸಿದರು. ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು. ಗುಡಿಗೌಡರು, ಯಜಮಾನರು, ಎಲ್ಲ ಸಮಾಜದ ಮುಖಂಡರು ಯುವಕ ಸಂಘದವರು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು. ನಂತರ ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಶನಿಪ್ರಭಾವ ರಾಜವಿಕ್ರಮ ನಾಟಕ ಪ್ರದರ್ಶನವಾಯಿತು.



ಹುಣಸಹಳ್ಳಿ ಗ್ರಾಮದಲ್ಲಿ ಬಸವೇಶ್ವರ, ರೇವಣ ಸಿದ್ದೇಶ್ವರರ ರಥೋತ್ಸವ ನಡೆಯಿತು.

ನಂಜನಗೂಡಲ್ಲಿ ಸಿದ್ದರಾಮಯ್ಯ ಅಭಿಮಾನಿಗಳಿಂದ ಸೇವಾ ಕಾರ್ಯ

ನಂಜನಗೂಡು: ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಹೆಚ್ಚು ಕಾಲ ರಾಜ್ಯವನ್ನು ಆಳುವ ಮೂಲಕ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅಭಿಮಾನಿಗಳು, ತಾಲೂಕಿನ ಸಿಂಧುವಳ್ಳಿ ಬಳಿಯ ಕರುಣಾಲಯ ವಿಶೇಷ ಚೇತನ ಆಸ್ಪತ್ರೆಯಲ್ಲಿ ರೋಗಿಗಳಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ ಮಾಡಲಾಗಿತ್ತು.

ಸಿದ್ದರಾಮಯ್ಯ ಅಭಿಮಾನಿಗಳ ಸಂಘದ ಅಧ್ಯಕ್ಷ ಟಿ.ಎನ್.ಮೋಹನ್ ಕುಮಾರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯರವರು ಎರಡು ಅವಧಿಗೆ ಮುಖ್ಯಮಂತ್ರಿಯಾಗಿ ದೀನ ದಲಿತರ ಧ್ವನಿಯಾಗಿ ಕೆಲಸ ನಿರ್ವಹಿಸಿದ್ದಾರೆ. ರಾಜ್ಯದಲ್ಲಿ ಅತಿ ಹೆಚ್ಚು ಹೆಚ್ಚು ಕಾಲ ಆಡಳಿತ ನಡೆಸುವ ಮೂಲಕ ದಾಖಲೆ ನಿರ್ಮಿಸಿರುವ ಸಿದ್ದರಾಮಯ್ಯರವರು ರಾಜ್ಯದ ಬಡ ಜನರ ಹಸಿವು ನೀಗಿಸುವ ಸಲುವಾಗಿ ಅನ್ನ ಭಾಗ್ಯ ಯೋಜನೆಯನ್ನು ಜಾರಿಗೊಳಿಸುವ ಜೊತೆಗೆ ಸಂವಿಧಾನದ ಆಶಯದಂತೆ ಗೃಹಲಕ್ಷ್ಮಿ, ಗೃಹ ಜ್ಯೋತಿ, ಯುವ ನಿಧಿ, ಶಕ್ತಿ ಯೋಜನೆಗಳನ್ನು ಜಾರಿಗೆ ತಂದು ಬಡವರ ಬದುಕಿನ ಆಶಾಕಿರಣವಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ಮಾಜಿ ನಗರಸಭೆ ಸದಸ್ಯರಾದ ಎನ್.ಎಂ.ಮಂಜು ನಾಥ್, ಗಂಗಾಧರ್ ಮುಖಂಡರಾದ ಕೆಂಪಣ್ಣ, ಕುರಿಹುಂಡಿ ರಾಜು, ವಾಲೆ ನಾಗರಾಜು, ಲಿಂಗರಾಜು, ಪ್ರಭುಸ್ವಾಮಿ, ಕುಮಾರಸ್ವಾಮಿ, ಕೆ.ಎಸ್.ರವಿ, ರಮೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ನಂಜನಗೂಡು ತಾಲೂಕಿನ ಸಿಂಧುವಳ್ಳಿ ಬಳಿಯ ಕರುಣಾಲಯ ವಿಶೇಷ ಚೇತನ ಆಸ್ಪತ್ರೆಯಲ್ಲಿ ಮಧ್ಯಾಹ್ನದ ಭೋಜನ ವ್ಯವಸ್ಥೆ ಮಾಡಲಾಗಿತ್ತು.

ಹೆಚ್.ಡಿ.ಕೋಟೆ ತಾಲೂಕು ಪತ್ರಕರ್ತರ ಸಂಘದ ಪದಾಧಿಕಾರಿಗಳ ಪದಗ್ರಹಣ



ಕೋಟೆ–ಸರಗೂರು ತಾಲೂಕು ಪತ್ರಕರ್ತ ಸಂಘಕ್ಕೆ ಆಯ್ಕೆಯಾದ ನೂತನ ಪದಾಧಿಕಾರಿಗಳು.

ಹೆಚ್.ಡಿ.ಕೋಟೆ: ತಾಲೂಕು ಪತ್ರಕರ್ತರ ಸಂಘಕ್ಕೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಪದಗ್ರಹಣ ಸ್ವೀಕಾರ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಸಂಘ ಸಂಸ್ಥೆಗಳಿಗೆ ಆಡಳಿತ ಮಂಡಳಿ ಮುಖ್ಯವಾಗಿದ್ದು, ಸದಸ್ಯರೂ ಸಂಘದ ಸಮಾನವಾದ ಪಾಲುದಾರರು. ಸಂಘದಲ್ಲಿ ಸಮಾನವಾದ ಹಕ್ಕು, ಜವಾಬ್ದಾರಿ ಹೊಂದಿರುವವರು. ಪದಾಧಿಕಾರಿಗಳು, ಸದಸ್ಯರ ನಡುವೆ ವ್ಯಾತ್ಯಾಸವಿಲ್ಲ. ಸಂಘದ ನಿರ್ವಹಣೆ, ಶಿಸ್ತು ಬದ್ಧವಾಗಿರಲು ಪದಾಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿದೆ. ಅದನ್ನು ಪದಾಧಿಕಾರಿಗಳು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು. ಆ ಮೂಲಕ ಸಂಘ, ಸರ್ವ ಸದಸ್ಯರ ಅಭಿವೃದ್ಧಿಗೆ ಶ್ರಮಿಸಬೇಕು. ಇದಕ್ಕಾಗಿ ಪದಾಧಿಕಾರಿಗಳ ನಡುವೆ ಸಮನ್ವಯತೆ ಇರಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ ಮಾತನಾಡಿದರು. ಚುನಾವಣಾಧಿಕಾರಿ ಕಾಶೀನಾಥ್ ಅವರು ಚುನಾವಣೆ ಕುರಿತು ಮಾತನಾಡಿದರು. ನಿಕಟಪೂರ್ವ ಅಧ್ಯಕ್ಷ ಬೀಚನಹಳ್ಳಿ ಮಂಜು ಅವರು ನೂತನ ಅಧ್ಯಕ್ಷ ಎಸ್.ಆರ್.ನಾಗರಾಮ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಉಪಾಧ್ಯಕ್ಷ ದೊಡ್ಡಸಿದ್ದಯ್ಯ, ಪ್ರಧಾನ ಕಾರ್ಯದರ್ಶಿ ನಿಂಗಣ್ಣ ಕೋಟೆ, ಕಾರ್ಯದರ್ಶಿಗಳಾದ ಪುಟ್ಟರಾಜು, ದಾಸೇಗೌಡ, ಖಜಾಂಜಿ ಜಿ.ರವಿಕುಮಾರ್, ನಿರ್ದೇಶಕರಾದ ನಾಗೇಶ್ ಹಂಪಾಪುರ, ಚಂದ್ರು, ವಾಸುಕಿ ನಾಗೇಶ್, ರಂಗರಾಜು, ಶರವಣ, ಸುರೇಶ್, ಜಿಲ್ಲಾ ನಿರ್ದೇಶಕ ಹನಗೂಡು ನಟರಾಜ್, ನಿಕಟಪೂರ್ವ ಖಜಾಂಚಿ ಮಂಜು ಕೋಟೆ, ಸದಸ್ಯರಾದ ಆನಂದ, ರಘು, ಶ್ರೀನಿಧಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಳ ಖಂಡಿಸಿ

ಪಿರಿಯಾಪಟ್ಟಣದಲ್ಲಿ ತಂಬಾಕು ಬೆಳೆಗಾರರು ಪ್ರತಿಭಟನೆ

ಪಿರಿಯಾಪಟ್ಟಣ, ಜ.6(ಜಿಎ)– ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಳ ಖಂಡಿಸಿ, ಕರ್ನಾಟಕ ವರ್ಜೀನಿಯಾ ತಂಬಾಕು ಬೆಳೆಗಾರರ ಸಂಘಗಳ ಒಕ್ಕೂಟದ ವತಿಯಿಂದ ಪಿರಿಯಾಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಒಕ್ಕೂಟದ ಪದಾಧಿಕಾರಿಗಳು ಪಿರಿಯಾಪಟ್ಟಣದ ಬೆಟ್ಟದಪುರ ವೃತ್ತದಿಂದ ತಹಸೀಲ್ದಾರ್ ಕಚೇರಿವರೆಗೂ ಮೆರವಣಿಗೆ ನಡೆಸಿ, ನಂತರ ಮನವಿ ಪತ್ರವನ್ನು ತಹಸೀಲ್ದಾರ್‌ಗೆ ಸಲ್ಲಿಸಿದರು. ಈ ವೇಳೆ ಕರ್ನಾಟಕ ವರ್ಜೀನಿಯಾ ತಂಬಾಕು ಬೆಳೆಗಾರರ ಸಂಘಗಳ ಒಕ್ಕೂಟದ ಅಧ್ಯಕ್ಷ ಹೆಚ್.ಜಿ.ಪರಮೇಶ್ ಮಾತನಾಡಿ, ಕೇಂದ್ರ ಸರ್ಕಾರವು ಜಿಎಸ್‌ಟಿ 2.0 ಘೋಷಿಸುವಾಗ ತಂಬಾಕು ಉತ್ಪನ್ನಗಳ ಮೇಲಿನ ಒಟ್ಟಾರೆ ತೆರಿಗೆಯನ್ನು ಬದಲಾಗದೆ ಇರಿಸಲಾಗುವುದು ಎಂದು ಭರವಸೆ ನೀಡಿತ್ತು. ದೇಶದಾದ್ಯಂತದ ರೈತ ಸಮುದಾಯವು ಈ ಭರವಸೆಯನ್ನು ನಂಬಿತ್ತು. ಆದರೆ ಈಗ ತೆರಿಗೆಯನ್ನು ಗಣನೀಯವಾಗಿ ಹೆಚ್ಚಿಸಿರುವುದು ನಮಗೆ ಆಘಾತ ತಂದಿದೆ, ಇದು ರೈತರ ಜೀವನೋಪಾಯಕ್ಕೆ ಮಾರಕವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಭಾರತವು ಈಗಾಗಲೇ ಗಂಭೀರವಾದ ಕಳ್ಳಸಾಗಣೆ ಸವಾಲನ್ನು ಎದುರಿಸುತ್ತಿದೆ ಎಂದು ಒಕ್ಕೂಟವು ಎಚ್ಚರಿಸಿದೆ. ದತ್ತಾಂಶಗಳ ಪ್ರಕಾರ, ಭಾರತವು ಜಾಗತಿಕವಾಗಿ ನಾಲ್ಕನೇ ಅತಿದೊಡ್ಡ ಅಕ್ರಮ ಸಿಗರೇಟ್ ಮಾರುಕಟ್ಟೆಯಾಗಿ ಹೊರಹೊಮ್ಮಿದೆ. ಅತಿಯಾದ ತೆರಿಗೆಯಿಂದಾಗಿ ಕಾನೂನುಬದ್ಧ ಉತ್ಪನ್ನಗಳಿಗಿಂತ ಕಳ್ಳಸಾಗಣೆ ಮಾಡಿದ ಉತ್ಪನ್ನಗಳು ಅಗ್ಗವಾಗುತ್ತವೆ, ಇದು ಅಕ್ರಮ ಮಾರುಕಟ್ಟೆಯನ್ನು ವಿಸ್ತರಿಸುತ್ತದೆ ಮತ್ತು ಸರ್ಕಾರದ ಬೊಕ್ಕಸಕ್ಕೆ ಭಾರಿ ಆದಾಯ ನಷ್ಟವನ್ನು ಉಂಟುಮಾಡುತ್ತದೆ ಎಂದು ಅವರು ತಿಳಿಸಿದರು.

ಕಳೆದ ದಶಕದಲ್ಲಿ ಎಫ್‌ಸಿವಿ ತಂಬಾಕು ಕೃಷಿ ಕ್ಷೇತ್ರವು ತೀವ್ರ ಏರಿಳಿತಗಳನ್ನು ಕಂಡಿದೆ. ಕೃಷಿ ವಿಸ್ತೀರ್ಣವು 2013–14ರಲ್ಲಿ 2,21,385 ಹೆಕ್ಟೇರ್‌ಗಳಿಂದ 2020–21ರಲ್ಲಿ 1,22,257 ಹೆಕ್ಟೇರ್‌ಗಳಿಗೆ ಇಳಿದಿದೆ. ಇದೇ ಸಮಯದಲ್ಲಿ, ಗೊಬ್ಬರ, ಕಾರ್ಮಿಕ ಮತ್ತು ಸಾರಿಗೆ ವೆಚ್ಚಗಳು ಗಣನೀಯವಾಗಿ ಹೆಚ್ಚಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಹಠಾತ್ ಬೆಲೆ ಏರಿಕೆಯಿಂದ ಉಂಟಾಗುವ ಬೇಡಿಕೆಯ ಕುಸಿತವನ್ನು ತಡೆದುಕೊಳ್ಳುವ ಶಕ್ತಿ ಬೆಳೆಗಾರರಿಗಿಲ್ಲ ಎಂದರು.

ಅತಿಯಾದ ತೆರಿಗೆಯ ಹೊರೆಯು ಈ ಉದ್ಯಮವನ್ನು ನಂಬಿರುವ ಲಕ್ಷಾಂತರ ರೈತರು, ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳ ಜೀವನವನ್ನು ಅಸ್ತವ್ಯಸ್ತಗೊಳಿಸಲಿದೆ. ಸರ್ಕಾರವು ತಕ್ಷಣವೇ ಅಧಿಸೂಚಿತ ಅಬಕಾರಿ ದರಗಳನ್ನು ಹಿಂಪಡೆಯಬೇಕು ಮತ್ತು ಇಡೀ ಕೃಷಿ ವ್ಯವಸ್ಥೆಯ ಮೇಲೆ ಉಂಟಾಗುವ ಹಾನಿಯನ್ನು ತಡೆಯಬೇಕು ಎಂದು ಕರ್ನಾಟಕ ವರ್ಜೀನಿಯಾ ತಂಬಾಕು ಬೆಳೆಗಾರರ ಸಂಘಗಳ ಒಕ್ಕೂಟವು ಮನವಿ ಮಾಡಿದೆ ಎಂದು ತಿಳಿಸಿದರು.



ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಳ ಖಂಡಿಸಿ ತಂಬಾಕು ಬೆಳೆಗಾರರು ಪ್ರತಿಭಟನಾ ಮೆರವಣಿಗೆ ನಡೆಸಿ, ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಶ್ರೀ ಮಹಾಶಕ್ತಿ ಗಣಪತಿ ದೇವಾಲಯದಲ್ಲಿ ಅನ್ನಸಂತರ್ಪಣೆ



ಬನ್ನೂರಿನಲ್ಲಿ ಶ್ರೀ ಮಾರಮ್ಮ ಮತ್ತು ಶ್ರೀ ಮಹಾಶಕ್ತಿ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಅಂಗವಾಗಿ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಬನ್ನೂರಿನಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

ಬನ್ನೂರು: ಪಟ್ಟಣದ ಬಸ್ ನಿಲ್ದಾಣದ ಸಮೀಪವಿರುವ ರೋಟರಿ ಶಾಲೆಯ ಆವರಣದಲ್ಲಿ ಜ.10ರಂದು ಮಧ್ಯಾಹ್ನ 1 ರಿಂದ 4 ಗಂಟೆವರೆಗೆ ರೋಟರಿ ಸಂಸ್ಥೆ, ಕಾನ್‌ಸಿಂಗ್‌ಜೀ ರಾಜ್‌ಪುರೋಹಿತ್, ಶ್ರೀ ಗೌರಿದೇವಿ, ಲಯನ್ಸ್ ಕ್ಲಬ್ ಆಫ್ ಈರೋಡ್ ಕಾವೇರಿ ಟ್ರಸ್ಟ್, ಕೊಯಮತ್ತೂರು ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ತಪಾಸಣೆಗೆ ಬರುವವರು ಆಧಾರ್‌ಕಾರ್ಡ್ ಜೆರಾಕ್ಸ್ ಪ್ರತಿ, ಮೊಬೈಲ್ ನಂಬರ್ ತರಬೇಕು. ಕಣ್ಣಿನ ಪೊರೆ, ಗ್ಲಾಕೋಮ, ನೀರು ಸೋರುವಿಕೆ, ಕಣ್ಣಿನಲ್ಲಿ ಗೀಜು ಬರುವುದು, ಹತ್ತಿರ ಮತ್ತು ದೂರ ದೃಷ್ಟಿ ದೋಷ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ವಾರೆ ಕಣ್ಣು, ರಾತ್ರಿ ಕುರುಡುತನಕ್ಕೆ ಚಿಕಿತ್ಸೆ ನೀಡಲಾಗುವುದು.

ನಾಳೆ ಕೆ.ಆರ್.ನಗರದಲ್ಲಿ ರೈತರ ದಿನ ಆಚರಣೆ

ಕೆಆರ್ ನಗರ: ತಾಲೂಕು ಯುವ ರೈತ ವೇದಿಕೆಯ ವತಿಯಿಂದ ರಾಷ್ಟ್ರೀಯ ರೈತ ದಿನಾಚರಣೆ ಮತ್ತು ತಾಲೂಕು ಮಟ್ಟದ ಕಿಸಾನ್ ಗೋಷ್ಠಿ ಕಾರ್ಯಕ್ರಮ ಜ.8ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಶ್ರೀರಾಮ ಬ್ಲಾಕ್‌ನಲ್ಲಿರುವ ಎಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ನಡೆಯಲಿದೆ.

ಮಾಜಿ ಸಚಿವ ಸಾ.ರಾ.ಮಹೇಶ್ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಾಧಕ ರೈತರನ್ನು ಅಭಿನಂದಿಸಲಿದ್ದು, ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಎಸ್.ಟಿ.ರವಿಕುಮಾರ್ ಉದ್ಘಾಟಿಸುವರು.

ಕರ್ನಾಟಕ ರಾಜ್ಯ ರೈತ ಸಂಘ ರೈತ ಬಣದ ರಾಜ್ಯಾಧ್ಯಕ್ಷ ಇಂಗಲಕುಪ್ಪೆ ಕೃಷ್ಣೇಗೌಡ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಚಲನಚಿತ್ರ ಹಾಸ್ಯನಟ ಟೆನ್ನಿಸ್ ಕೃಷ್ಣ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮು, ಕರ್ನಾಟಕ ರಾಜ್ಯ ರೈತ ಸಂಘದ ವರಿಷ್ಠ ಕಾಳೇನಹಳ್ಳಿ ಗರುಡಗಂಭದಸ್ವಾಮಿ, ಯುವ ರೈತ ವೇದಿಕೆ ಕನುಗನಹಳ್ಳಿ ಗ್ರಾಮ ಘಟಕದ ಅಧ್ಯಕ್ಷ ಕೆ.ಆರ್. ಜಿತೇಂದ್ರ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದು, ತಾಲೂಕು ಯುವ ರೈತ ವೇದಿಕೆ ಅಧ್ಯಕ್ಷ ಅರ್ಜುನಹಳ್ಳಿ ರಾಮಪ್ರಸಾದ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ಮೂಗೂರು ಜಾತ್ರೆಯಲ್ಲಿ ಚಿಗುರು ಕಡಿಯುವ ಸಂಭ್ರಮ

ಈ ಬಾರಿ 9 ಚಿಗುರು, ಗ್ರಾಮಕ್ಕೆ ಶುಭ, ಬೆಳ್ಳಿ ತಟ್ಟೆಯಲ್ಲಿಟ್ಟು ವಿಶೇಷ ಪೂಜೆ



ಮೂಗೂರು: ಮೂಗೂರು ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಚಿಗುರು ಕಡಿಯುವ ಸಂಭ್ರಮ ಸಮೀಪದ ಹೊಸಹಳ್ಳಿ ಗ್ರಾಮದ ಅಮ್ಮನವರ ದೇಗುಲದಲ್ಲಿ ಮಂಗಳವಾರ ನಡೆಯಿತು.

ಮೂಗೂರಿನ ದೇವಾಲಯದಲ್ಲಿ ಮಧ್ಯಾಹ್ನ 4ರ ವೇಳೆಗೆ ಅಮ್ಮನವರ ಉತ್ಸವ ಮೂರ್ತಿಯನ್ನು ಹೂವಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದ ಬಳಿಕ ಹೂವಿನ ಪಲ್ಲಕ್ಕಿಯಲ್ಲಿ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ ನಂತರ ಉತ್ಸವಕ್ಕೆ ಚಾಲನೆ ನೀಡಲಾಯಿತು. ಇದಕ್ಕೂ ಮುನ್ನ ಮೂಗೂರಿನ ದೇವಾಲಯದಲ್ಲಿ ಬೆಳಿಗ್ಗೆ ಅಭಿಷೇಕ, ವಿಶೇಷ ಪೂಜೆಗಳು ಸಾಂಘಿಕವಾಗಿ ನಡೆಯಿತು.

ಮಹಿಳೆಯರು ಬಾಯಿ ಬೀಗ, ದೀವಟಿಗೆ ಸೇವೆ ಹಾಗೂ ಕೃಷಿ ರೈತರು ಜಾನುವಾರುಗಳ ಆರೋಗ್ಯ ವೃದ್ಧಿಗಾಗಿ ಪ್ರಾರ್ಥಿಸಿ ದೇವಾಲಯದ ಬಳಿಯಿಂದ ಹೊಸಹಳ್ಳಿ ದೇವಾಲಯದವರೆವಿಗೆ ಪಂಜಿನ ಸೇವೆ ಸಲ್ಲಿಸಿದರು. ತಿಬ್ಬಾದೇವಿ, ತ್ರಿಪುರ ಸುಂದರಿ, ಚಿನ್ನದ ರಾಣಿ ಎಂಬ ನಾಮಾಂಕಿತಗಳಿಂದ ಬಿಂಬಿಸುವ ಅಮ್ಮನವರನ್ನು ಆಭರಣಗಳಿಂದ ಸಿಂಗರಿಸಿಕೊಂಡು ವಿವಿಧ ಬಗೆಯ ಹೂವಿನಿಂದ ಅಲಂಕರಿಸಿ ಅಂಗಡಿ ಬೀದಿಯ ಮೂಲಕ ಹೊಸಹಳ್ಳಿ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಅಲ್ಲಿ ನೆರೆದಿದ್ದ ಅಸಂಖ್ಯಾತ ಭಕ್ತರು ಅಮ್ಮನವರಿಗೆ ಜೈ ಕಾರ ಕೂಗಿ ಚಿಗುರು ವೀಕ್ಷಿಸಲು ದೇವಾಲಯದ ಸುತ್ತಲೂ ಜಮಾಯಿಸಿದ್ದರು. ಚಿಗುರು ಕಡಿಯುವ ಮನೆತನದ ಅರ್ಚಕರು ಮಂಗಳವಾರ ಸಂಜೆ 6.30ರಲ್ಲಿ ಹೊಸಹಳ್ಳಿಯಲ್ಲಿ ನೇರಳೆ ಮರವೇರಿ ರಾತ್ರೋರಾತ್ರಿ ಮೂಡಿದ ಚಿಗುರನ್ನು ಬಿಡಿಸಿದರು. ಈ ಬಾರಿ 9 ಚಿಗುರು ಮೂಡಿದ್ದು ಜನತೆಯಲ್ಲಿ ಹರ್ಷ, ಗ್ರಾಮಕ್ಕೆ ಶುಭ ಎಂಬ ನಂಬಿಕೆ, ಚಿಗುರನ್ನು ಬೆಳ್ಳಿ ತಟ್ಟೆಯಲ್ಲಿ ಹೊಂಬಾಳೆಯಲ್ಲಿಟ್ಟು ಪೂಜೆ ಸಲ್ಲಿಸಿ ನಂತರ ನೆರೆದಿದ್ದ ಸಾವಿರಾರು ಮಂದಿ ಭಕ್ತರು ಚಿಗುರನ್ನು ವಿಕ್ಷೀಸಿದರು . ಬಳಿಕ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ತಂದು ಪೂಜೆ ಸಲ್ಲಿಸಲಾಯಿತು. ಚಿಗುರನ್ನು ಪೂಜಿಸಲ್ಪಡುವುದರಿಂದ ಸಂತಾನ ಪ್ರಾಪ್ತಿ, ಆರೋಗ್ಯ, ಕುಟುಂಬದ ಶಾಂತಿ ವೃದ್ಧಿಸಲಿದೆ ಎಂಬ ನಂಬಿಕೆ ಇಂದಿಗೂ ಜೀವಂತವಾಗಿದೆ.

ಚಿಗುರಿನ ಹಿನ್ನೆಲೆ: ಮರ ಸವರುವ ಮನೆತನದ ಅರ್ಚಕರು ರಥೋತ್ಸವದ ಮಧ್ಯ ರಾತ್ರಿ ಹೊಸಹಳ್ಳಿಗೆ ಹೋಗಿ ದೇಗುಲದಲ್ಲಿರುವ ನೇರಳೆ ಮರಕ್ಕೆ ಪೂಜೆ ಸಲ್ಲಿಸಿ ನೇರಳೆ ಮರದ ಕೊಂಬೆ ಎಲೆಗಳನ್ನು ಬಿಡಿಸಿ ಅದಕ್ಕೆ ಧಾನ್ಯ ಸಮೇತ ಅರಿಶಿನದ ಬಟ್ಟೆ ಕಟ್ಟಿ ಬರುತ್ತಾರೆ. ಮಾರನೇ ದಿನ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ ಹೊಸಹಳ್ಳಿಗೆ ಹೋಗುವ ಮುನ್ನವೇ ಧಾನ್ಯ ಕಟ್ಟಿದ ರೆಂಬೆಯಲ್ಲಿ ಚಿಗುರು ಮೂಡಿರುತ್ತದೆ. ಇದು ಮೂಗೂರು ಚಿಗುರು ಎಂಬುದಾಗಿ ಪ್ರಸಿದ್ಧಿ ಪಡೆದಿದೆ. ಈ ಪವಾಡದಿಂದ ಚಿಗುರು ಮೂಡಿರುವ ಸದೃಶ್ಯ ನೋಡಲು ಹೊಸಹಳ್ಳಿ ದೇಗುಲದ ಬಳಿ ಸಹಸ್ರಾರು ಮಂದಿ ನೆರೆದಿದ್ದರು. 9 ಅಥವಾ 12 ಚಿಗುರು ಬಂದರೆ ಶುಭ ಅಂತಲೂ 7 ಅಥವಾ 11 ಅಶುಭವೆಂದು ಇಂದಿಗೂ ಜನಜನಿತವಾಗಿದೆ. ಈ ಬಾರಿ 9 ಚಿಗುರು ಮೂಡಿದ್ದು ಗ್ರಾಮದ ಒಳಿತಿಗೆ ನಾಂದಿಯಾಗಿದೆ ಎಂದು ಅರ್ಚಕರು ತಿಳಿಸಿದ್ದಾರೆ.



ಶಾಸಕ ದರ್ಶನ್‌ಗೆ ಕನಕ ಜಯಂತೋತ್ಸವ ಸಮಿತಿಯಿಂದ ಅಭಿನಂದನೆ



ನಂಜನಗೂಡು: ನಂಜನಗೂಡಿನಲ್ಲಿ ಅದ್ದೂರಿಯಾಗಿ ಕನಕ ಜಯಂತಿ ಮೆರವಣಿಗೆ ನಡೆಸಿಕೊಟ್ಟ ಹಿನ್ನೆಲೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ ಅವರನ್ನು ಕನಕ ಜಯಂತೋತ್ಸವ ಸಮಿತಿ ಸದಸ್ಯರು ಸನ್ಮಾನಿಸಿ ಗೌರವಿಸಿದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿ ಶಾಸಕ ದರ್ಶನ್ ಧ್ರುವನಾರಾಯಣ ಅವರು ಅತಿ ಚಿಕ್ಕ ವಯಸ್ಸಿನಲ್ಲಿಯೇ ರಾಜಕೀಯ ಪ್ರಬುದ್ಧತೆಯನ್ನು ಅಳವಡಿಸಿಕೊಂಡು, ಶಾಸಕರಾದ ನಂತರ ಎಲ್ಲಾ ಜಾತಿ ಜನಾಂಗದ ಜಯಂತೋತ್ಸವವನ್ನು ಅದ್ದೂರಿಯಾಗಿ ನಡೆಸಿಕೊಡುವ ಮೂಲಕ ಕ್ಷೇತ್ರದಲ್ಲಿ ಎಲ್ಲಾ ಜಾತಿ ಜನಾಂಗದವರನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತಿದ್ದಾರೆ ಎಂದರು.

ಈ ವೇಳೆ ಅತಿ ಶೀಘ್ರದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಭೆ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಬೇಕು ಎಂದು ಮನವಿ ಸಲ್ಲಿಸಿದರು. ವಿಜಯ ಸಂದರ್ಭದಲ್ಲಿ ಕನಕ ಜಯಂತೋತ್ಸವ ಮೆರವಣಿಗೆ ಸಮಿತಿ ಅಧ್ಯಕ್ಷ ಸಿದ್ದರಾಜು, ಮುಖಂಡರಾದ ಎನ್.ಎಸ್.ಮಹದೇವ, ಶಂಕರ್, ಬೀರೇಶ್, ಆನಂದ, ಕಾಳೇಗೌಡ, ನಾಗರಾಜು, ಮಲ್ಲೇಶ್, ಸ್ವಾಮಿ, ಸಿದ್ದರಾಜು, ಬಾಲಯ್ಯ, ಗೋವಿಂದರಾಜ, ರೇವೇಗೌಡ ಲೋಕೇಶ್, ತಮ್ಮಯ್ಯ, ಮಹೇಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಪಕ್ಷ ನನಗೇ ಟಿಕೆಟ್ ನೀಡುತ್ತೆ; ನಾನೇ ಚಾಮರಾಜ ಎಂಎಲ್ಎ ಆಗ್ತೇನೆ



● ಮಾಜಿ ಶಾಸಕ ಎಲ್.ನಾಗೇಂದ್ರ ವಿಶ್ವಾಸ ● ಕ್ಷೇತ್ರವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ● ಟಿಕೆಟ್ ಯಾರಿಗೆ ಕೊಡಬೇಕೆಂದು ಹೈಕಮಾಂಡ್ ತೀರ್ಮಾನಿಸುತ್ತೆ ● ಮಾಜಿ ಸಂಸದ ಪ್ರತಾಪ್‌ಸಿಂಹ ಹೇಳಿಕೆಗೆ ಪ್ರತಿಕ್ರಿಯೆ

ಮೈಸೂರು, ಜ.6– ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಿಂದ ಪಕ್ಷ ನನಗೇ ಟಿಕೆಟ್ ನೀಡುತ್ತೆ. ನಾನೇ ಎಂಎಲ್ಎ ಆಗುತ್ತೇನೆ ಎಂದು ಕ್ಷೇತ್ರದ ಮಾಜಿ ಶಾಸಕರೂ ಆದ ಹಾಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚಾಮರಾಜ ಕ್ಷೇತ್ರದಲ್ಲಿ ಸ್ಪರ್ಧೆ ಬಯಸಿದ್ದೇನೆ ಎಂಬ ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿಕೆಗೆ ಮಂಗಳವಾರ ತಿರುಗೇಟು ನೀಡಿರುವ ನಾಗೇಂದ್ರ, ನಾನು ಮೂರು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. ಜನರ ಸೇವೆಯೊಂದಿಗೆ ಪಕ್ಷದ ಕೆಲಸ ಮಾಡಿದ್ದೇನೆ. ಪಕ್ಷ ಹಾಗೂ ಜನರ ಬೆಂಬಲ ಹಾಗೂ ಆಶೀರ್ವಾದ ನನ್ನ ಮೇಲಿದೆ. ಯಾವುದೇ ಕಾರಣಕ್ಕೂ ಕ್ಷೇತ್ರವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. 2028ಕ್ಕೆ ಪಕ್ಷ ನನಗೆ ಟಿಕೆಟ್ ನೀಡುತ್ತದೆ. ನಾನೇ ಎಂಎಲ್ಎ ಆಗುತ್ತೇನೆ ಎಂದಿದ್ದಾರೆ.

ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲೂ ಪ್ರತಾಪ್ ಸಿಂಹ, ನನ್ನನ್ನು ಬಿಟ್ಟು ಮತ್ಯಾರಿಗೆ ಟಿಕೆಟ್ ಕೊಡಲು ಸಾಧ್ಯ ಎಂದಿದ್ದರು. ಆದರೆ ಪಕ್ಷ ಅವರಿಗೆ ಟಿಕೆಟ್ ನೀಡಿತ್ತಾ?. ಟಿಕೆಟ್ ತಪ್ಪಿದ್ದಕ್ಕೆ ಕಾರಣವೇನೆಂದು ಅವರು ಬಹಿರಂಗವಾಗಿ ಹೇಳುತ್ತಾರಾ?. ಬಡವರ ಮಕ್ಕಳನ್ನು ಬಲಿ ಕೊಡುತ್ತಾರೆ ಎಂದು ಹೇಳಿದ್ದ ನೀವು, ನನ್ನನ್ನು ಬಲಿ ತೆಗೆದುಕೊಂಡು ಶಾಸಕರಾಗಬೇಕಾ?. ಹಿಂದೂ ಹುಲಿ ಎಂದು ಹೇಳಿಕೊಳ್ಳುತ್ತೀರಿ, ಬೇರೆ ಕ್ಷೇತ್ರಗಳಿಗೆ ಹೋಗಲು ನಿಮಗೆ ತಾಕತ್ತಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ಚುನಾವಣೆಗೆ ಸ್ಪರ್ಧಿಸುವ ಅರ್ಹತೆ ಪ್ರತಿಯೊಬ್ಬ ಕಾರ್ಯಕರ್ತರಿಗೂ ಇದೆ. ಆದರೆ ಯಾವುದೇ ಚುನಾವಣೆಯಿಲ್ಲದ ಈ ಸಂದರ್ಭದಲ್ಲಿ ಪ್ರತಾಪ್ ಸಿಂಹ ಈ ರೀತಿಯ ಹೇಳಿಕೆ ನೀಡಿದ್ದು ಆಶ್ಚರ್ಯವಾಗಿದೆ. ಪ್ರತಾಪ್ ಸಿಂಹ ಹೇಳಿದಂತೆಲ್ಲಾ ಕೇಳಲು ನಮ್ಮ ಹೈಕಮಾಂಡ್ ದುರ್ಬಲವಾಗಿಲ್ಲ. ಚುನಾವಣೆ ಸಂದರ್ಭದಲ್ಲಿ ಇವರಂತಹ 25 ಜನ ಆಕಾಂಕ್ಷಿಗಳು ಸೃಷ್ಟಿಯಾಗಬಹುದು. ಆದರೆ ಅಂತಿಮವಾಗಿ ಟಿಕೆಟ್ ಯಾರಿಗೆ ನೀಡಬೇಕು ಎಂಬುದನ್ನು ಪಕ್ಷದ ಹೈಕಮಾಂಡ್ ಹಾಗೂ ರಾಜ್ಯ ನಾಯಕರು ಚರ್ಚೆ ಮಾಡಿ, ತೀರ್ಮಾನಿಸುತ್ತಾರೆ ಎಂದಿದ್ದಾರೆ.

ಪ್ರತಾಪ್ ಸಿಂಹ ಆಸೆ ಪಡುವುದರಲ್ಲಿ ತಪ್ಪಿಲ್ಲ. ಆದರೆ ಕಳೆದ ಲೋಕಸಭಾ ಚುನಾವಣೆ ವೇಳೆ ಯದುವೀರ್ ಅವರ ಪರವಾಗಿ ಎಲ್ಲೂ ಪ್ರಚಾರ ಮಾಡಿಲ್ಲ. ಈಗ ವಿಧಾನಸಭೆ ಚುನಾವಣೆ ಟಿಕೆಟ್ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ. ಇವರಿಗೆ ಯಾವ ಆಧಾರದಲ್ಲಿ ಪಕ್ಷ ಟಿಕೆಟ್ ನೀಡುತ್ತದೆ. ನಾನು ಮೂರು ದಶಕಗಳಿಂದ ಜನರ ಕಷ್ಟ–ಸುಖದಲ್ಲಿ ಭಾಗಿಯಾಗುತ್ತಿದ್ದೇನೆ. ಎರಡ್ಮೂರು ತಿಂಗಳಿಂದ ಕಾರ್ಯಕ್ರಮಗಳಲ್ಲಿ ಕಾಣಿಸುತ್ತಿರುವ ಅವರನ್ನು ಜನ ಬೆಂಬಲಿಸುತ್ತಾರೆ ಎಂಬುದು ಕನಸು. ಎಲ್ಲಾ ವರ್ಗದ ಜನರ ಬೆಂಬಲ ಇರುವುದರಿಂದಲೇ ನನಗೆ ಕಳೆದ ಚುನಾವಣೆಯಲ್ಲಿ 69 ಸಾವಿರ ಮತ ನೀಡಿದ್ದಾರೆ. ಟಿಕೆಟ್ ವಿಚಾರವಾಗಿ ಯಾರಾದರೂ ರಾಷ್ಟ್ರ ಅಥವಾ ರಾಜ್ಯ ನಾಯಕರು ಭರವಸೆ ನೀಡಿದ್ದರೆ, ಬಹಿರಂಗವಾಗಿ ಹೇಳಲಿ ಎಂದು ಆಗ್ರಹಿಸಿದ್ದಾರೆ.

ಪ್ರತಾಪ್ ಸಿಂಹ ಹೇಳುವುದೊಂದು ಮಾಡುವುದೊಂದು. ಮನೆ ಮನೆಗೆ ಗ್ಯಾಸ್ ಪೂರೈಕೆ ಯೋಜನೆ ಬಗ್ಗೆ ಒಂದು ಏಜೆನ್ಸಿ ಪರ ನಿಂತು, ಈಗ ಅದರ ಬಗ್ಗೆ ಮೌನವಾಗಿದ್ದಾರೆ. ನಾನು ಹೀಗೆ ಯೂಟರ್ನ್ ಹೊಡೆಯುವ ರಾಜಕಾರಣಿಯಲ್ಲ. ನಾನು ಲಿಫ್ಟ್‌ನಿಂದ ಅಲ್ಲ ಸ್ಟೆಪ್‌ನಿಂದ ಹಂತ ಹಂತವಾಗಿ ಬಂದವನು. ನಾನು ಇದೇ ಊರಲ್ಲಿ ಹುಟ್ಟಿದವನು, ಇಲ್ಲೇ ಸಾಯುತ್ತೇನೆ. ಚಾಮರಾಜ ಕ್ಷೇತ್ರ ನನ್ನ ಧರ್ಮಭೂಮಿ ಹಾಗೂ ಕರ್ಮಭೂಮಿ. ಯಾವುದೋ ಊರಿಂದ ಬಂದವರು ಹೀಗೆ ಹೇಳುವಾಗ ನಾನೇಕೆ ಸುಮ್ಮನಿರಲಿ ಎಂದಿದ್ದಾರೆ.

ರಾಜ್ಯಾಧ್ಯಕ್ಷರು ಸದೃಢವಾಗಿ ಪಕ್ಷ ಕಟ್ಟುತ್ತಿದ್ದಾರೆ. ನಾನೂ ನಗರಾಧ್ಯಕ್ಷನಾಗಿ ಪಕ್ಷದ ಕೆಲಸ ಮಾಡುತ್ತಿದ್ದೇನೆ. ಎಲ್ಲಾ ಬೆಳವಣಿಗೆಯನ್ನೂ ರಾಜ್ಯ ಹಾಗೂ ರಾಷ್ಟ್ರ ನಾಯಕರು ನೋಡುತ್ತಿದ್ದಾರೆ. ಅವರು ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳುತ್ತಾರೆ. ಪಕ್ಷ ನನ್ನನ್ನು ಮೂರು ಬಾರಿ ಕಾರ್ಪೊರೇಟರ್, ಮುಡಾ ಅಧ್ಯಕ್ಷ, ಶಾಸಕನನ್ನಾಗಿ ಮಾಡಿದೆ. ಮುಂದಿನ ಚುನಾವಣೆಯಲ್ಲೂ ನನಗೆ ಟಿಕೆಟ್ ಕೊಟ್ಟು ಎಂಎಲ್ಎ ಮಾಡುತ್ತದೆ. ಜನರೂ ಕೈಬಿಡುವುದಿಲ್ಲ, ಪಕ್ಷವೂ ಕೈಬಿಡುವುದಿಲ್ಲ. 2028ಕ್ಕೆ ಚಾಮರಾಜ ಕ್ಷೇತ್ರಕ್ಕೆ ಯಾರು ಶಾಸಕರಾಗುತ್ತಾರೆ ಎಂದು ನೋಡಿ. ಇದು ನನ್ನ ಓಪನ್ ಚಾಲೆಂಜ್ ಎಂದು ಸವಾಲೆಸೆದಿದ್ದಾರೆ.

ಪಕ್ಷ ನಿಮ್ಮನ್ನು ತಿರಸ್ಕರಿಸಿದೆಯೇ ಹೊರತು ನನ್ನನ್ನಲ್ಲ. ನಾನು ಚುನಾವಣೆಯಲ್ಲಿ ಸೋತಿರಬಹುದು, ಆದರೆ ನನ್ನ ಬೆನ್ನು ತಟ್ಟುವ ಕೆಲಸ ಮಾಡಿದೆ. ನನ್ನ ಅವಧಿಯಲ್ಲಿ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಬಗ್ಗೆ ಕ್ಷೇತ್ರದ ಜನರನ್ನು ಕೇಳಲಿ. ಕೆ.ಆರ್.ಆಸ್ಪತ್ರೆ, ರಸ್ತೆ ಅಭಿವೃದ್ಧಿ, ಸಮುದಾಯ ಭವನಗಳು, ದೇವಾಲಯಗಳ ಜೀರ್ಣೋದ್ಧಾರಕ್ಕೆ ಹಣ ತಂದಿದ್ದೇನೆ. ನನ್ನ ಅವಧಿಯಲ್ಲಾದ ಅಭಿವೃದ್ಧಿ ಕೆಲಸ ಹಾಗೂ ಅನುದಾನದ ಬಗ್ಗೆ ಪಟ್ಟಿ ಬಿಡುಗಡೆ ಮಾಡುತ್ತೇನೆ. ನೀವು ಹತ್ತು ವರ್ಷದಲ್ಲಿ ಚಾಮರಾಜ ಕ್ಷೇತ್ರಕ್ಕೆ ಏನು ಮಾಡಿದ್ದೀರಿ ತಿಳಿಸಿ. ಸಾರ್ವಜನಿಕರು ಹಾಗೂ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುವ ಕೆಲಸವನ್ನು ಯಾರೂ ಮಾಡುವುದು ಬೇಡ, ಇಲ್ಲಿಗೆ ನಿಲ್ಲಿಸಿ. ಪಕ್ಷದ ಹೈಕಮಾಂಡ್ ಹಾಗೂ ರಾಜ್ಯ ನಾಯಕರು ಚರ್ಚೆ ಮಾಡಿ, ಯಾರಿಗೆ ಟಿಕೆಟ್ ಎಂದು ತೀರ್ಮಾನ ಮಾಡುತ್ತಾರೆ ಎಂದು ಪ್ರತಾಪ್ ಸಿಂಹಗೆ ಕಿವಿಮಾತು ಹೇಳಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಅಖಂಡ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	3 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ನಾದಬ್ರಹ್ಮ ಸಭಾಂಗಣದಲ್ಲಿ ಜಾನಪದ ಝೇಂಕಾರ...

ಲಕ್ಷ್ಮೀ ದಿನೇಶ್ ತಂಡದಿಂದ ಗಾಯನ



ನಾದಬ್ರಹ್ಮ ಸಂಗೀತಸಭಾದಲ್ಲಿ ವಿವಿಧ ಕ್ಷೇತ್ರದ ಗಣ್ಯರನ್ನು ಸನ್ಮಾನಿಸಲಾಯಿತು

ಮೈಸೂರು, ಜ. 6– ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಜಿಲ್ಲಾ ಘಟಕವು ಜಾನಪದ ಭಾವಯಾನ ಸಂಭ್ರಮ ಗಾಯನ ಕಾರ್ಯಕ್ರಮವನ್ನು ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸೋಮವಾರ ಆಯೋಜಿಸಿತ್ತು.

ಪರಿಷತ್ತಿನ ಜಿಲ್ಲಾ ಅಧ್ಯಕ್ಷ ವಿ. ನಾಗರಾಜ್ ಬೈರಿ ಅವರ ಸಾರಥ್ಯದಲ್ಲಿ ಗಾಯಕಿ ಲಕ್ಷ್ಮೀ ದಿನೇಶ್ ಅವರ ನೇತೃತ್ವದಲ್ಲಿ ನಾಡಿನ ಹೆಸರಾಂತ ಕವಿ ಮತ್ತು ಸಾಹಿತಿಗಳ ಅಮರ ಕೃತಿಗಳು ಗಾಯನದ ಮೂಲಕ ಕನ್ನಡದ ಶ್ರೀಮಂತ ಕಲೆ ಮತ್ತು ಸಂಸ್ಕೃತಿಯನ್ನು ಅನಾವರಣಗೊಳಿಸಿದರು. ಗಾಯಕರಾದ ನವೀನ್ ಕುಮಾರ್, ನಾರಾಯಣ್ ಹೆಡತಲೆ ಮತ್ತು ಉದಯ್ ಕುಮಾರ್ ಧ್ವನಿಯಾದರು.

ಸಂಗೀತ ವಾದ್ಯ ಮೇಳದಲ್ಲಿ ಕೀ– ಬೋರ್ಡ್‌ನಲ್ಲಿ ಚಿಕ್ಕಪ್ಪಾಜಿ, ತಬಲದಲ್ಲಿ ರವಿ ಕುಮಾರ್ ಹಾಗೂ ರಿದಂ ಪ್ಯಾಡ್‌ನಲ್ಲಿ ಹ್ಯಾಂಡೋ ಅವರು ಸಾಥ್ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಸಂಸ್ಕೃತಿ ಚಿಂತಕ ಶಂಕರ್ ದೇವನೂರು ಮಾತನಾಡಿ, ಕನ್ನಡದ ಕಲೆ, ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವುದೇ ಜೀವನ ಎಂದರು.

ಇದಕ್ಕೆ ಎಪ್ಪತ್ತರ ದಶಕದಲ್ಲಿ ತೆರೆಕಂಡ ಸಾಕ್ಷಾತ್ಕಾರ ಚಿತ್ರದ ನಾಯಕ ನಟ ಡಾ.ರಾಜ್‌ಕುಮಾರ್ ಹಾಗೂ ಚಿತ್ರಕಥೆ ಬರೆದಿರುವ ಪ್ರಭಾಕರ ಶಾಸ್ತ್ರಿ ಅವರ ನಡುವಿನ ಸಂಭಾಷಣೆಯನ್ನು ವಿವರಿಸಿ, ಸಾಕ್ಷಾತ್ಕಾರ ಎಂದರೇ ಏನು ಎಂಬುದನ್ನು ಸಭಿಕರಿಗೆ ಅರ್ಥ ಮಾಡಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಬ್ರಾಹ್ಮಣ ಸಮಾಜದ ಮುಖಂಡ ಕೆ.ರಘುರಾಮ್ ವಾಜಪೇಯಿ ಮುಖ್ಯ ಅತಿಥಿಗಳಾಗಿದ್ದರು. ಎನ್.ಬೆಟ್ಟೇಗೌಡ, ಉಪ್ಪುಂದ ರಾಜೇಶ್ ಪಡಿಯಾರ್, ಕಾರ್ಪೋರೇಷನ್ ಮಂಜುನಾಥ್ ಮೊದಲಾದವರು ಇದ್ದರು.

ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ; ಉಸಿರುಗಟ್ಟಿ ಟೆಕ್ಕಿ ಸಾವು



ಬೆಂಗಳೂರು, ಜ.6– ಉಸಿರುಗಟ್ಟಿ ಮಹಿಳಾ ಟೆಕ್ಕಿ ಸಾವನ್ನಪ್ಪಿರುವ ಘಟನೆ ಬೆಂಗಳೂರಿನ ರಾಮಮೂರ್ತಿ ನಗರದ ಸುಬ್ರಮಣ್ಯ ಬಡಾವಣೆಯಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ.

ಶರ್ಮಿಳಾ(34) ಮೃತ ದುರ್ದೈವಿ. ಮೃತ ಶರ್ಮಿಳಾ ಮೂಲತಃ ಮಂಗಳೂರಿನವರು. ಅಕ್ಸೆಂಚರ್ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದರು. ಶರ್ಮಿಳಾ ಬೆಂಗಳೂರಿನ ಸುಬ್ರಮಣ್ಯ ಲೇಔಟ್‌ನಲ್ಲಿ ವಾಸವಿದ್ದರು. ಮಂಗಳೂರಿನಿಂದ ಒಂದು ವರ್ಷದ ಹಿಂದೆ ಬೆಂಗಳೂರಿಗೆ ಕೆಲಸಕ್ಕೆ ಬಂದಿದ್ದರು.

ಪೊಲೀಸ್ ಮೂಲಗಳ ಪ್ರಕಾರ, ಜನವರಿ 3ರಂದು ದುರಂತ ನಡೆದಿದ್ದು ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಜನವರಿ 3ರಂದು ರಾತ್ರಿ 10.30ರ ಸುಮಾರಿಗೆ ಶರ್ಮಿಳಾ ವಾಸವಿದ್ದ ರೂಮಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಇದನ್ನು ನೋಡಿದ ಮನೆ ಮಾಲೀಕ ವಿಜಯೇಂದ್ರ ರಾಮ ಮೂರ್ತಿನಗರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಕೂಡಲೇ ಶರ್ಮಿಳಾ ಮನೆ ಬಳಿ ಬಂದಿದ್ದ ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ಮನೆಯ ಡೋರ್ ಒಡೆದು ಒಳಗೆ ಹೋಗಿದ್ದಾರೆ. ಈ ವೇಳೆ ರೂಮ್ ಹಾಗೂ ಹಾಲ್‌ನಲ್ಲಿ ಬೆಂಕಿ ಬಿದ್ದು ಹೊಗೆ ತುಂಬಿಕೊಂಡಿತ್ತು. ಮನೆಯಲ್ಲಿ ಕಾಣಿಸಿಕೊಂಡಿದ್ದ ಬೆಂಕಿಯನ್ನು ನಂದಿಸುವಲ್ಲಿ ರಕ್ಷಣಾ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ಮನೆ ಪರಿಶೀಲನೆ ವೇಳೆ ಶರ್ಮಿಳಾ ಪ್ರಜ್ಞೆ ತಪ್ಪಿ ಬಿದ್ದಿರುವುದು ಕಂಡು ಬಂದಿದೆ. ಕೂಡಲೇ ಆಕೆಯನ್ನು ಸ್ಥಳೀಯ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ. ಪರೀಕ್ಷೆ ನಡೆಸಿದ್ದ ವೈದ್ಯರು ಮೃತ ಪಟ್ಟಿರುವುದಾಗಿ ದೃಢಪಡಿಸಿದ್ದಾರೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ವಾತ್ಸಲ್ಯ ಮನೆ



ಉದ್ಬೂರು ವಲಯದ ದೂರ ಕಾರ್ಯಕ್ಷೇತ್ರದ ವಾತ್ಸಲ್ಯ ಫಲಾನುಭವಿಯಾದ ದೇವಮಣಿ ಅವರಿಗೆ ಮಂಜೂರಾದ ವಾತ್ಸಲ್ಯ ಮನೆಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

ಮೈಸೂರು, ಜ.6– ಕುವೆಂಪುನಗರ ಯೋಜನಾ ಕಚೇರಿ ವ್ಯಾಪ್ತಿಗೆ ಉದ್ಬೂರು ವಲಯದ ದೂರ ಕಾರ್ಯಕ್ಷೇತ್ರದ ವಾತ್ಸಲ್ಯ ಫಲಾನುಭವಿಯಾದ ದೇವಮಣಿ ಅವರಿಗೆ ಮಂಜೂರಾದ ವಾತ್ಸಲ್ಯ ಮನೆಯ ಗುದ್ದಲಿ ಪೂಜೆಯನ್ನು ಈ ಕ್ಷೇತ್ರ ಯೋಜನಾಧಿಕಾರಿ ಪ್ರವೀಣ ಎ.ಜಿ. ಮತ್ತು ಊರಿನ ಮುಖಂಡರಾದ ಚಿಕ್ಕಪಾಪಯ್ಯ, ಚಿಕ್ಕನಿಂಗಯ್ಯ ಮತ್ತು ದೇವಣ್ಣ, ಗ್ರಾಮ ಪಂಚಾಯಿತಿ ಸದಸ್ಯರಾದ ವಿಜಯಮ್ಮ ಅವರ ಸಮ್ಮುಖದಲ್ಲಿ ನೆರವೇರಿಸಿದರು. ನಂತರ ಮಾತನಾಡಿದ ಅವರು ಪೂಜ್ಯರು ಗ್ರಾಮೀಣ ಭಾಗದ ಜನರನ್ನು ಸಮಾಜದ ಮುಖ್ಯ ವಾಹಿನಿಗೆ ತಂದು ಅವರನ್ನು ಆರ್ಥಿಕವಾಗಿ ಸಶಕ್ತರನ್ನಾಗಿ ಮಾಡುವ ಕನಸನ್ನು ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಾಡುತ್ತಿದ್ದು ಇದರಿಂದ ರಾಜ್ಯದ ಲಕ್ಷಾಂತರ ಜನರು ನೆಮ್ಮದಿಯಿಂದ ಬದುಕುತ್ತಿದ್ದಾರೆ. ತಮ್ಮ ವೃದ್ಧಾಪ್ಯದಲ್ಲಿ ಸಂತೃಪ್ತಿಯಿಂದ ಜೀವನ ನಡೆಸಲು ಜ್ಞಾನವಿಕಾಸದ ವಾತ್ಸಲ್ಯ ಕಾರ್ಯಕ್ರಮದ ಮೂಲಕ ಮಾತೃಶ್ರೀ ಹೇಮಾವತಿ ಅಮ್ಮನವರು ನೊಂದವರ ಕಣ್ಣೀರು ಒರೆಸುವ ಮಾತೆಯಾಗಿ ಅವರಿಗೆ ಮಾಸಾಶನ, ವಾತ್ಸಲ್ಯ ಕಿಟ್, ಪೌಷ್ಠಿಕ ಆಹಾರ ಮತ್ತು ಸೂರು ಇಲ್ಲದವರಿಗೆ ವಾತ್ಸಲ್ಯ ಮನೆಯನ್ನು ನಿರ್ಮಿಸಿ ಕೊಡುತ್ತಿದ್ದು ದೇವಮಣಿ ಈ ಮನೆಯಲ್ಲಿ ನೆಮ್ಮದಿಯಿಂದ ಬಾಳುವ ಶಕ್ತಿಯನ್ನು ಮಂಜುನಾಥ ಸ್ವಾಮಿ ಅನುಗ್ರಹಿಸಲಿ ಎಂದು ಶುಭ ಹಾರೈಸಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಇಂದ್ರಮ್ಮ ಅವರು ಮಾತನಾಡಿ ಪ್ರಸ್ತುತ ಸಮಾಜದಲ್ಲಿ ಆಸ್ತಿಗೋಸ್ಕರ ಮನೆಯನ್ನು ಭಾಗ ಮಾಡಿಕೊಳ್ಳುವ ಮನಸ್ಥಿತಿ ಇರುವಾಗ ನೊಂದವರ ಭಾವನೆಗಳಿಗೆ ಸ್ಪಂದಿಸುವವರು ಯಾರೂ ಇಲ್ಲದಂತಾಗಿದೆ. ಆದರೆ ಶ್ರೀಕ್ಷೇತ್ರ ಧರ್ಮಸ್ಥಳದಿಂದ ಅಂತಹ ಅಸಹಾಯಕರನ್ನು ಗುರುತಿಸಿ ಅವರಿಗೆ ಜೀವನ ನಡೆಸಲು ಬೇಕಾದ ಎಲ್ಲ ಮೂಲಭೂತ ಅವಶ್ಯಕತೆಗಳನ್ನು ಒದಗಿಸಿಕೊಡುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಊರಿನ ಮುಖಂಡರು, ಗ್ರಾಮಪಂಚಾಯಿತಿ ಸದಸ್ಯರು, ಒಕ್ಕೂಟದ ಅಧ್ಯಕ್ಷರು, ಜ್ಞಾನವಿಕಾಸಸಮನ್ವಯಾಧಿಕಾರಿ ಗೀತಾ, ವಲಯದ ಮೇಲ್ವಿಚಾರಕರಾದ ಶ್ವೇತಾ, ವಲಯದ ಎಲ್ಲಾ ಸೇವಾ ಪ್ರತಿನಿಧಿಗಳು, ಸಂಘದ ಸದಸ್ಯರು ಉಪಸ್ಥಿತರಿದ್ದರು.

ಮೆದುಳು ಜ್ವರಕ್ಕೆ ಕೇರಳದಲ್ಲಿ ಮತ್ತೊಂದು ಬಲಿ

ಕೋಝಿಕೋಡ್, ಜ.6– ಕಳೆದ ವರ್ಷ ಕೇರಳದಲ್ಲಿ ಭಾರಿ ಆತಂಕ ಮೂಡಿಸಿ ಬ್ರೇಕ್ ನೀಡಿದ್ದ ಮೆದುಳು ಜ್ವರ ಇದೀಗ ಮತ್ತೆ ವರ್ಷಾರಂಭದಲ್ಲೇ ಆರ್ಭಟಿಸಲು ಮುಂದಾಗಿದ್ದು, ಮೆದುಳು ಜ್ವರಕ್ಕೆ ಕೇರಳದಲ್ಲಿ ಹೊಸ ವರ್ಷ ಮೊದಲ ಬಲಿಯಾಗಿದೆ.

ಸ್ವಲ್ಪ ಸಮಯದ ವಿರಾಮದ ನಂತರ, ಕೇರಳದಲ್ಲಿ ಮತ್ತೆ ಮೆದುಳು ಜ್ವರ ಆರ್ಭಟಿಸಲು ಮುಂದಾಗಿದ್ದು, ಸೋಮವಾರ ಕೇರಳದಲ್ಲಿ ಮೆದುಳು ಜ್ವರದಿಂದ ಹೊಸ ಸಾವು ವರದಿಯಾಗಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಮೃತರನ್ನು ಕೋಝಿಕ್ಕೋಡ್ ಜಿಲ್ಲೆಯ ಪುತಿಯಂಗಡಿಯ ಸಚ್ಚಿದಾನಂದನ್(72) ಎಂದು ಗುರುತಿಸಲಾಗಿದೆ. ಆರೋಗ್ಯ ಇಲಾಖೆಯ ಅಧಿಕಾರಿಗಳ ಪ್ರಕಾರ, ಸಚ್ಚಿದಾನಂದನ್ ಅವರನ್ನು ಕಳೆದ ವಾರ ಅಮೀಬಿಕ್ ಮೆನಿಂಗೊ ಎನ್ಸೆಫಾಲಿಟಿಸ್ ಅಥವಾ ಸಾಮಾನ್ಯವಾಗಿ ಮೆದುಳು ಜ್ವರ ಎಂದು ಕರೆಯಲ್ಪಡುವ ಲಕ್ಷಣಗಳೊಂದಿಗೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು ನಂತರದ ಪರೀಕ್ಷೆಗಳಲ್ಲಿ ಸೋಂಕು ದೃಢಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅವರ ಸ್ಥಿತಿ ಹದಗೆಟ್ಟಿತು ಮತ್ತು ಸೋಮವಾರ ಅವರು ಸಾವನ್ನಪ್ಪಿದ್ದಾರೆ. ಮೃತರಿಗೆ ಸೋಂಕು ಹೇಗೆ ತಗುಲಿತು ಎಂಬುದನ್ನು ಖಚಿತಪಡಿಸಿಕೊಳ್ಳಲು ತನಿಖೆಯನ್ನು ಪ್ರಾರಂಭಿಸಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಮಾಜಿ ಕೇಂದ್ರ ಸಚಿವ ಸುರೇಶ್ ಕಲ್ಮಾಡಿ ನಿಧನ



ಪುಣೆ(ಮಹಾರಾಷ್ಟ್ರ), ಜ.6– ಹಿರಿಯ ಕಾಂಗ್ರೆಸ್ ನಾಯಕ ಮತ್ತು ಕೇಂದ್ರದ ಮಾಜಿ ಸಚಿವ ಸುರೇಶ್ ಕಲ್ಮಾಡಿ (81) ಅವರು ದೀರ್ಘಕಾಲದ ಅನಾರೋಗ್ಯದಿಂದಾಗಿ ಇಂದು (ಮಂಗಳವಾರ) ಬೆಳಗ್ಗೆ 3.30ರ ಸುಮಾರಿಗೆ ನಿಧನ ಹೊಂದಿದ್ದಾರೆ. ಮೃತರು ಪತ್ನಿ, ಮಗ ಮತ್ತು ಸೊಸೆ, ಇಬ್ಬರು ವಿವಾಹಿತ ಹೆಣ್ಣುಮಕ್ಕಳು, ಅಳಿಯ ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.

ಸುರೇಶ್ ಕಲ್ಮಾಡಿ ಕೇಂದ್ರ ರೈಲ್ವೆ ರಾಜ್ಯ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಭಾರತೀಯ ಒಲಿಂಪಿಕ್ ಅಸೋಸಿಯೇಷನ್ (ಐಒಎ)ನ ಮಾಜಿ ಅಧ್ಯಕ್ಷರು. ಪುಣೆಯ ಪ್ರಮುಖ ರಾಜಕೀಯ ನೇತಾರರಾಗಿದ್ದ ಇವರು, ಲೋಕಸಭೆಯಲ್ಲಿ ಹಲವು ಬಾರಿ ನಗರವನ್ನು ಪ್ರತಿನಿಧಿಸಿದ್ದರು. ತಮ್ಮ ರಾಜಕೀಯ ಜೀವನದಲ್ಲಿ ಹಲವು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದರು. ಹಲವು ವರ್ಷಗಳ ಕಾಲ ರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಆಡಳಿತದೊಂದಿಗೆ ಸಂಬಂಧ ಹೊಂದಿದ್ದರು.

ಕಲ್ಮಾಡಿ ಅವರ ನಿಧನಕ್ಕೆ ವಿವಿಧ ರಾಜಕೀಯ ಪಕ್ಷಗಳ ನಾಯಕರು ಸಂತಾಪ ಸೂಚಿಸಿದ್ದಾರೆ. ಪಾರ್ಥಿವ ಶರೀರವನ್ನು ಪುಣೆಯ ಎರಾಂಡ್‌ವಾನೆ ಪ್ರದೇಶದ ಕಲ್ಮಾಡಿ ನಿವಾಸದಲ್ಲಿ ಇಂದು ಮಧ್ಯಾಹ್ನ 2 ಗಂಟೆಯವರೆಗೆ ಸಾರ್ವಜನಿಕ ದರ್ಶನಕ್ಕೆ ಇಟ್ಟು, ಬಳಿಕ ಮಧ್ಯಾಹ್ನ 3.30ಕ್ಕೆ ನವಿ ಪೇತ್‌ನಲ್ಲಿರುವ ವೈಕುಂಠ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆದಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ವಿವಿಧ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು, ಜ.6– ಮಹಿಳಾ ಮತ್ತು ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2025–26ನೇ ಸಾಲಿನ ಅರ್ಹ ವಿಕಲಚೇತನ ವ್ಯಕ್ತಿಗಳಿಂದ ಹಾಗೂ ಹಿರಿಯ ನಾಗರಿಕರ ಸಾಧನೆ ಯೋಜನೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಆನ್‌ಲೈನ್ ಮೂಲಕ Suvidha website URL :https://sevasindhu.karnataka.gov.in/ sevasindhu / Kannada ಪೋರ್ಟಲ್‌ನಲ್ಲಿ ಭರ್ತಿ ಮಾಡಿ ಜ.31 ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾಯ ತಾಲೂಕಿನ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರ ದೂ.ಸಂ ಹೆಚ್.ಡಿ.ಕೋಟೆ–9611519719, ಸರಗೂರು– 709099 4492, ಹುಣಸೂರು–9739644342, ಕೆಆರ್.ನಗರ–9480253203, ಮೈಸೂರು ತಾಲೂಕು–9591136015, 6360483829, ನಂಜನಗೂಡು– 8951113120, ಪಿರಿಯಾಪಟ್ಟಣ–7204151852, ತಿ.ನರಸೀಪುರ–8050829685 ದೂ.ಸಂ.0821–2490333 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗವಿ ಸಿದ್ದೇಶ್ವರ ಜಾತ್ರೆಗೆ ಹರಿದು ಬಂದ 10 ಲಕ್ಷಕ್ಕೂ ಅಧಿಕ ಭಕ್ತರು



ಕೊಪ್ಪಳ: ದಕ್ಷಿಣ ಭಾರತದ ಕುಂಭ ಮೇಳ ಎಂದೇ ಖ್ಯಾತಿ ಪಡೆದಿರುವ ಕೊಪ್ಪಳದ ಗವಿಸಿದ್ದೇಶ್ವರ ಮಹಾಶಿವಯೋಗಿಗಳ ಜಾತ್ರಾ ಮಹೋತ್ಸವಕ್ಕೆ ಜನ ಸಾಗರವೇ ಹರಿದು ಬಂದಿದ್ದು, ಮಠದಲ್ಲಿ ಸೋಮವಾರ ನಡೆದ ರಥೋತ್ಸವದಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ಭಕ್ತರು ಭಾಗವಹಿಸಿದ್ದರು.

ಕೊಪ್ಪಳದವರೇ ಆದ, ಮೇಘಾಲಯ ರಾಜ್ಯಪಾಲ ಎಚ್.ಸಿ. ವಿಜಯಶಂಕರ್ ಧ್ವಜಾರೋಹಣ ಮಾಡುವ ಮೂಲಕ ಗವಿಸಿದ್ಧೇಶ್ವರ ಮಹಾರಥೋತ್ಸವವನ್ನು ಉದ್ಘಾಟಿಸಿದರು. ಐತಿಹಾಸಿಕ ವೈಭವದ ಈ ಜಾತ್ರೆಯಲ್ಲಿ ಕೇಂದ್ರ ಸಚಿವ ವಿ. ಸೋಮಣ್ಣ, ಗವಿ ಮಠದ ಮಠಾಧೀಶ ಅಭಿನವ ಗವಿಸಿದ್ದೇಶ್ವರ ಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ, ಸಂಸದರಾದ ಜಗದೀಶ್ ಶೆಟ್ಟರ್ ಮತ್ತು ಬಸವರಾಜ ಬೊಮ್ಮಾಯಿ ಸೇರಿದಂತೆ ಲಕ್ಷಾಂತರ ಭಕ್ತರು ಭಾಗವಹಿಸಿದ್ದರು.

ಮಠದ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ರಥವನ್ನು ಪೂಜಿಸಿದ ನಂತರ, ರಥವನ್ನು ಎಳೆಯಲಾಯಿತು. ಜನರು ಉತ್ತತಿ, ಬಿಲ್ಪತ್ರೆ, ಬಾಳೆಹಣ್ಣು ಮತ್ತು ನಾಣ್ಯಗಳನ್ನು ರಥದ ಕಡೆಗೆ ಎಸೆದು ಭಕ್ತಿ –ಭಾವ ಮೆರೆದಿದ್ದಾರೆ.

ಭಕ್ತರು ಒಂದು ವಾರ ಮುಂಚಿತವಾಗಿ ಜಾತ್ರೆಗೆ ಬರಲು ಆರಂಭಿಸಿದ್ದು, ಕಳೆದ ಎರಡು ತಿಂಗಳಿನಿಂದ ಅನೇಕ ಗ್ರಾಮಸ್ಥರು ಟ್ರ್ಯಾಕ್ಟರ್‌ಗಳು ಮತ್ತು ಮಿನಿ ಸರಕು ವಾಹನಗಳಲ್ಲಿ ಜೋಳದ ರೊಟ್ಟಿ, ಗೋಧಿ, ತೊಗರಿ ಬೇಳೆ, ಅಕ್ಕಿ ಮತ್ತು ತರಕಾರಿಗಳಂತಹ ಕಾಣಿಕೆಗಳನ್ನು ತಂದಿದ್ದಾರೆ.

ಹಬ್ಬದ ಭಾಗವಾಗಿ, ಸಿಂಧನೂರು ವಿಜಯ್ ಮತ್ತು ಸ್ನೇಹಿತರ ಗುಂಪು ಈ ವರ್ಷ 10 ಲಕ್ಷ ಮೈಸೂರು ಪಾಕ್ ತಯಾರಿಸಿತು. ಕಳೆದ ಒಂದು ವಾರದಿಂದ ಮಠದ ಆವರಣದ ಮುಂದೆ ಹಾಕಲಾದ ನೂರಾರು ಮಳಿಗೆಗಳು ಉತ್ತಮ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸಿದ್ದು, ಅನೇಕ ಮಳಿಗೆಗಳ ಮಾಲೀಕರು ಸಂತೋಷ ವ್ಯಕ್ತಪಡಿಸಿದ್ದಾರೆ.

ಮಠದ ಆವರಣದಲ್ಲಿ ದೊಡ್ಡ ವೇದಿಕೆಯನ್ನು ನಿರ್ಮಿಸಲಾಗಿತ್ತು ಮತ್ತು ಲಕ್ಷಾಂತರ ಭಕ್ತರು ಸಮೀಪದ ಗುಡ್ಡ ಮತ್ತು ಇತರ ಸ್ಥಳಗಳಲ್ಲಿ ಕುಳಿತು ಕಾರ್ಯಕ್ರಮಗಳನ್ನು ವೀಕ್ಷಿಸಿದರು.

ದಾಸೋಹದಲ್ಲಿ ಹೊಸ ದಾಖಲೆ: ಈ ಬಾರಿ ದಾಖಲೆ ಪ್ರಮಾಣದ ಪ್ರಸಾದ ವ್ಯವಸ್ಥೆ ಮಾಡಲಾಗಿದ್ದು, 25 ಲಕ್ಷ ರೊಟ್ಟಿ, 20 ಲಕ್ಷ ಮೈಸೂರು ಪಾಕ್, 500 ಕ್ವಿಂಟಾಲ್ ಮಾದಲಿ ಹಾಗೂ ಹತ್ತಾರು ಬಗೆಯ ಪಲ್ಯಗಳನ್ನ ಖುದ್ದು ಭಕ್ತರೇ ವ್ಯವಸ್ಥೆ ಮಾಡಿದ್ದರು.

ಭಕ್ತರ ಹಸಿವು ನೀಗಿಸಲು ದಾಸೋಹದ ವ್ಯವಸ್ಥೆಗಳನ್ನು ಉತ್ತಮವಾಗಿ ಆಯೋಜಿಸಲಾಗಿದ್ದರಿಂದ, ಜನರು ಸಂಜೆಯವರೆಗೂ ಮಠದ ಸುತ್ತಲಿನ ಜಾತ್ರೆಯ ಜನಸಂದಣಿಯನ್ನು ವೀಕ್ಷಿಸುತ್ತಿದ್ದರು ಮತ್ತು ರಥೋತ್ಸವದ ನಂತರ ಭಕ್ತಿಯಿಂದ ಮನೆಗೆ ಮರಳಿದರು.

ಮಹಾದಾಸೋಹಕ್ಕೆ ಒಂದು ತಿಂಗಳ ಮೊದಲು ಸುತ್ತಮುತ್ತಲಿನ ಹಳ್ಳಿಗಳ ಜನರು ಮಠಕ್ಕೆ ಹೋಳಿಗೆ, ತುಪ್ಪ, ರೊಟ್ಟಿ, ಚಟ್ನಿ ಮತ್ತು ತರಕಾರಿಗಳನ್ನು ತರುವುದು ವಾಡಿಕೆ.

ಹನಗೋಡು ಬಳಿ ಬೋನಿಗೆ ಬಿದ್ದ ಗಂಡು ಹುಲಿ

● ಜನ-ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ವ್ಯಾಘ್ರ ● ಬನ್ನೇರುಘಟ್ಟಕ್ಕೆ ಸ್ಥಳಾಂತರ



ಹುಣಸೂರು ತಾಲೂಕಿನ ಹಮ್ಮಿಗೆ ಗ್ರಾಮದ ಜಮೀನಿನೊಂದರಲ್ಲಿಟ್ಟಿದ್ದ ಬೋನಿಗೆ ಬಿದ್ದ ಗಂಡು ಹುಲಿ.

ಹನಗೋಡು ,ಜ.6(ಎಂಟಿವೈ/ ಹೆಚ್‌ಎನ್)– ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ಕಾಡಂಚಿನ ಗ್ರಾಮಗಳಲ್ಲಿ ಕಳೆದ ಕೆಲವು ತಿಂಗಳಿಂದ ಜನ–ಜಾನುವಾರುಗಳ ಮೇಲೆ ದಾಳಿ ನಡೆಸಿ ಉಪಟಳ ನೀಡುತ್ತಿದ್ದ 6 ವರ್ಷದ ಗಂಡು ಹುಲಿಯೊಂದು ಬೋನಿಗೆ ಬಿದ್ದಿದ್ದು, ಅದನ್ನು ಬೆಂಗಳೂರಿನ ಬನ್ನೇರುಘಟ್ಟಕ್ಕೆ ಸ್ಥಳಾಂತರಿಸಲಾಗಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಂಚಿನ ಹುಣಸೂರು ವಲಯ ವ್ಯಾಪ್ತಿಗೆ ಸೇರುವ ಹನಗೋಡು ತಾಲೂಕಿನ ಹಮ್ಮಿಗೆ ಗ್ರಾಮದ ಜಮೀನೊಂದರಲ್ಲಿ ಇರಿಸಲಾಗಿದ್ದ ತುಮಕೂರು ಬೋನಿಗೆ ಮುಂಜಾನೆ ಹುಲಿ ಸೆರೆ ಸಿಕ್ಕಿದೆ. ಬೋನಿನಲ್ಲಿದ್ದ ಮಾಂಸ ಸೇವನೆಗಾಗಿ ನುಗ್ಗಿದಾಗ ಬಂಧಿಯಾಗಿದೆ. ಬೋನಿನೊಳಗೆ ಬಂಧಿಯಾಗಿದ್ದ ಹುಲಿಗೆ ಅರವಳಿಕೆ ಚುಚ್ಚುಮದ್ದು ನೀಡಿ ಪರಿಶೀಲಿಸಲಾಗಿದ್ದು, ಸೆರೆ ಸಿಕ್ಕಿರುವ ಹುಲಿ ಆರೋಗ್ಯವಂತ ಹುಲಿಯಾಗಿದೆ.

ಬೋನಿಗೆ ಬಿದ್ದ ನಂತರ ಅದರಿಂದ ಹೊರಬರಲು ಪ್ರಯತ್ನಿಸಿ ಬೋನಿನ ಗ್ರಿಲ್‌ಗೆ ಮುಖ ಗುದ್ದಿಕೊಂಡಿರುವುದರಿಂದ ಸಣ್ಣಪುಟ್ಟ ಗಾಯಗಳಾಗಿವೆ.

ಹಸಿವು ನೀಗಿಸಿಕೊಳ್ಳಲು ಬಂದಾಗ ಲಾಕ್: ಹನಗೋಡು ತಾಲೂಕಿನ ಹಮ್ಮಿಗೆ ಗ್ರಾಮದ ಸಿದ್ದೇಗೌಡ ಎಂಬುವರ ಜಮೀನಿನ ಬಳಿ ಈ ಹಿಂದೆ ಮೂರ್‍ನಾಲ್ಕು ಬಾರಿ ಹುಲಿ ಕಾಣಿಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಅದೇ ಜಮೀನಿನಲ್ಲಿ ತುಮಕೂರು ಬೋನ್ ಇಟ್ಟು, ಹುಲಿಯನ್ನು ಆಕರ್ಷಿಸಲು ಮಾಂಸ ಇಡಲಾಗಿತ್ತು. ಮುಂಜಾನೆ ಬೋನಿನೊಳಗಿದ್ದ ಮಾಂಸ ಸೇವನೆಗಾಗಿ ಬಂದ ಹುಲಿ ಲಾಕ್ ಆಗಿದೆ. ಬೋನಿನಲ್ಲಿದ್ದ ಹುಲಿ ಘರ್ಜಿಸುತ್ತಿರುವುದನ್ನು ಗಮನಿಸಿದ ಸ್ಥಳೀಯರು ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಹಸುಗಳೇ ಟಾರ್ಗೆಟ್: ಸೆರೆ ಸಿಕ್ಕಿರುವ ಹುಲಿ ಈ ಹಿಂದೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಳ್ಳಿ ವಲಯದಲ್ಲಿತ್ತು. ಆದರೆ ಕಳೆದ ಕೆಲ ತಿಂಗಳಿಂದ ಕಾಡಿನಿಂದ ಹೊರಗೆ ಬಂದು ಬೀರತಮ್ಮನಹಳ್ಳ ಕಿರು ಅರಣ್ಯದಲ್ಲಿ ಬೀಡುಬಿಟ್ಟಿತ್ತು. ಅಲ್ಲದೆ, ಬೀರತಮ್ಮನಹಳ್ಳಿ, ಹಮ್ಮಿಗೆ, ಶೆಟ್ಟಹಳ್ಳಿ, ಬಿ.ಆರ್.ಕಾವಲ್, ಕಚುವನಹಳ್ಳಿ, ನೇಗತ್ತೂರು ಗ್ರಾಮಗಳ ಹೊಲಗಳಲ್ಲಿ ಮೇಯುತ್ತಿದ್ದ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿತ್ತು. ಈ ಭಾಗದಲ್ಲಿ ಇದುವರೆಗೂ 18 ಹಸುಗಳ ಮೇಲೆ ದಾಳಿ ನಡೆಸಿ ಬಲಿ ಪಡೆದಿತ್ತು. ಜೊತೆಗೆ ಜಮೀನಿಗೆ ಹೋಗುತ್ತಿದ್ದ ರೈತರ ಮೇಲೆ ದಾಳಿಗೆ ಯತ್ನಿಸಿತ್ತು. ಆದರಿಂದ ರೈತರು ಕೂದಲೆಳೆ ಅಂತರದಿಂದ ಪಾರಾಗಿದ್ದರು. ಈ ಹುಲಿ ಸೆರೆ ಹಿಡಿಯುವಂತೆ ಕಾಡಂಚಿನ ಗ್ರಾಮಸ್ಥರು ಆಗ್ರಹಿಸಿದ್ದರು. ಈ ಹಿನ್ನೆಲೆಯಲ್ಲಿ ತುಮಕೂರು ಬೋನ್ ಇಟ್ಟು ಹುಲಿ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು. ಕೊನೆಗೂ ಹುಲಿ ಸೆರೆ ಸಿಕ್ಕಿದ್ದು, ಅರಣ್ಯ ಸಿಬ್ಬಂದಿಗಳು ನಿಟ್ಟುಸಿರು ಬಿಟ್ಟರೆ, ಗ್ರಾಮಸ್ಥರಲ್ಲಿ ಸಮಾಧಾನ ನೆಲೆಸಿದಂತಾಗಿದೆ.

ಮೈಸೂರು ನ್ಯಾಯಾಲಯಗಳಿಗೆ ಬಾಂಬ್ ಬೆದರಿಕೆ ಆತಂಕ

ಮುನ್ನೆಚ್ಚರಿಕಾ ಕ್ರಮವಾಗಿ ಬಾಂಬ್ ನಿಷ್ಕ್ರಿಯ ದಳದಿಂದ ತೀವ್ರ ಶೋಧ



ನ್ಯಾಯಾಲಯದ ಆವರಣದಲ್ಲಿ ನೆರೆದಿರುವ ಆತಂಕಿತ ವಕೀಲರು, ಸಿಬ್ಬಂದಿ ವರ್ಗ

ಮೈಸೂರು, ಜ.6 (ಎಂಟಿವೈ)– ಮೈಸೂರು ನ್ಯಾಯಾಲಯ ಸಮುಚ್ಚಯದಲ್ಲಿ ಬಾಂಬ್ ಇಟ್ಟಿರುವುದಾಗಿ ಕಿಡಿಗೇಡಿಗಳು ಇ–ಮೇಲ್ ಸಂದೇಶ ಕಳುಹಿಸಿದ್ದರಿಂದ ಮಂಗಳವಾರ ಮೈಸೂರಿನ ಎರಡೂ ನ್ಯಾಯಾಲಯದ ಆವರಣವನ್ನು ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಶೋಧ ನಡೆಸಿದರು. ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು



ಬಾಂಬ್ ಬೆದರಿಕೆ ಇ–ಮೇಲ್ ಸಂದೇಶ ಬಂದ ಹಿನ್ನೆಲೆಯಲ್ಲಿ ಮೈಸೂರಿನ ನ್ಯಾಯಾಲಯದಲ್ಲಿ ಶ್ವಾನ ಮತ್ತು ಬಾಂಬ್ ಸ್ಕ್ವಾಡ್ ತಂಡ ಪರಿಶೀಲಿಸುತ್ತಿರುವುದು.

ಮೈಸೂರಿನ ಚಾಮರಾಜ ಮೊಹಲ್ಲಾ ಹಾಗೂ ಜಯನಗರದ ಕಟ್ಟೆಮಳಲವಾಡಿಯಲ್ಲಿರುವ ನ್ಯಾಯಾಲಯದಲ್ಲಿ ನ್ಯಾಯಾಧೀಶರು, ಸಿಬ್ಬಂದಿ, ನೂರಾರು ನ್ಯಾಯವಾದಿಗಳು, ಕಕ್ಷಿದಾರರು ಮಾಮೂಲಿನಂತೆ ನೆರೆದಿದ್ದರು. ಈ ವೇಳೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಉಷಾರಾಣಿ ಅವರಿಗೆ ಕಿಡಿಗೇಡಿಗಳು ಕಳುಹಿಸಿದ ಬಾಂಬ್ ಬೆದರಿಕೆ ಸಂದೇಶ ಬೆಳಕಿಗೆ ಬಂದಿದೆ. ಕೂಡಲೇ ನ್ಯಾಯಾಧೀಶರು ಲಕ್ಷ್ಮೀಪುರಂ ಠಾಣೆಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕಾಗಮಿಸಿದ ಪೊಲೀಸರು ಎಲ್ಲರನ್ನು ಹೊರಗೆ ಕಳುಹಿಸಿ ಎಚ್ಚರಿಕಾ ಕ್ರಮ ಕೈಗೊಂಡರು.

ಭಯದಿಂದ ಹೊರಗೆ ಬಂದರು: ನ್ಯಾಯಾಲಯದಲ್ಲಿ ಬಾಂಬ್ ಇಡಲಾಗಿದೆ ಎಂಬ ಸಂದೇಶ ಕ್ಷಿಪ್ರ ಗತಿಯಲ್ಲಿ ಹರಡುತ್ತಿದ್ದಂತೆ ಗಾಬರಿಯಿಂದ ಎಲ್ಲರೂ ನ್ಯಾಯಾಲಯಗಳ ಕಟ್ಟಡಗಳಿಂದ ಹೊರಗೆ ಓಡಿ ಬಂದ ಹಿನ್ನೆಲೆಯಲ್ಲಿ ಕೆಲ ಕಾಲ ಆತಂಕ ಮನೆ ಮಾಡಿತ್ತು. ನೂರಾರು ಮಂದಿ ನ್ಯಾಯಾಲಯದ ಆವರಣದಲ್ಲಿ ಜಮಾಯಿಸಿದ್ದರು.

ಮೂರು ತಂಡದಿಂದ ತಪಾಸಣೆ: ನ್ಯಾಯಾಲಯಕ್ಕೆ ಬಾಂಬ್ ನಿಷ್ಕ್ರಿಯ ದಳದ ಮೂರು ತಂಡ, ಲೋಹ ಶೋಧಕ ತಂಡದ ಸದಸ್ಯರು ದೌಡಾಯಿಸಿ, ಕೂಲಂಕುಶವಾಗಿ ಪರಿಶೀಲಿಸಿದರು. ನ್ಯಾಯಾಲಯದ ಹಳೆ ಕಟ್ಟಡವನ್ನು ಇಂಚಿಂಚು ಶೋಧ ನಡೆಸಿದರು. ಕೋರ್ಟ್ ಹಾಲ್, ಗ್ರಂಥಾಲಯ, ಕ್ಯಾಂಟೀನ್, ವಕೀಲರ ಸಂಘದ ಕೊಠಡಿ, ಪಾರ್ಕಿಂಗ್ ಸ್ಥಳ ಸೇರಿದಂತೆ ನ್ಯಾಯಾಲಯದ ಸಂಪೂರ್ಣ ಆವರಣವನ್ನು ಜಾಲಾಡಿದರೂ, ಎಲ್ಲಿಯೂ ಅನುಮಾನಾಸ್ಪದ ಪದಾರ್ಥಗಳಾಗಲೀ, ಸ್ಫೋಟಕ ವಸ್ತುಗಳಾಗಲೀ ಸಿಗಲಿಲ್ಲ. ಇದರಿಂದ ಇದೊಂದು ಹುಸಿ ಬಾಂಬ್ ಸಂದೇಶವಾಗಿದೆ ಎಂಬ ನಿರ್ಧಾರಕ್ಕೆ ಬಂದರು.

ಜಯನಗರದ ಕಟ್ಟಡದಲ್ಲೂ ಶೋಧ: ಈ ಮಧ್ಯೆ ಜಯನಗರದ ಕಟ್ಟೆಮಳಲವಾಡಿಯಲ್ಲಿರುವ ನ್ಯಾಯಾಲಯದ ಹೊಸ ಕಟ್ಟಡದಲ್ಲೂ ಶೋಧ ಕಾರ್ಯ ನಡೆಸಿದರು. ಆ ಕಟ್ಟಡದಲ್ಲೂ ಪಾರ್ಕಿಂಗ್ ಸ್ಥಳ ಸೇರಿದಂತೆ ಎಲ್ಲಾ ಕೋರ್ಟ್‌ಹಾಲ್‌ನಲ್ಲಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದರು. ಈ ವೇಳೆ ಎಲ್ಲಿಯೂ, ಯಾವುದೇ ವಸ್ತು ಪತ್ತೆಯಾಗಲಿಲ್ಲ.

ಕಲಾಪ ಮುಂದೂಡಿಕೆ: ಕಲಾಪ ಆರಂಭಕ್ಕೂ ಮುನ್ನವೇ ಬಾಂಬ್ ಬೆದರಿಕೆ ಸಂದೇಶ ಬಂದಿದ್ದರಿಂದ ಇಂದು ಮೈಸೂರಿನ ಎರಡೂ ನ್ಯಾಯಾಲಯದ 54 ಕೋರ್ಟ್ ಹಾಲ್‌ನಲ್ಲಿ ಯಾವುದೇ ಪ್ರಕ್ರಿಯೆ ನಡೆಯಲಿಲ್ಲ. ಹಾಗಾಗಿ ನ್ಯಾಯಾಧೀಶರು ಕಕ್ಷಿದಾರರಿಗೆ ಮುಂದಿನ ವಿಚಾರಣಾ ದಿನಾಂಕ ತಿಳಿಸುವುದಾಗಿ ಸಂಬಂಧಿಸಿದ ವಕೀಲರು ತಿಳಿಸಿ, ಕಳುಹಿಸಿದರು.

ಸೂಕ್ಷ್ಮ ತಪಾಸಣೆ

ಅರಮನೆ ಜಯಮಾರ್ತಾಂಡ ದ್ವಾರದ ಬಳಿ ಡಿ.25ರ ರಾತ್ರಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದ ಹಿನ್ನೆಲೆಯಲ್ಲಿ ಇಂದು ನ್ಯಾಯಾಲಯದ ಕಟ್ಟಡದಲ್ಲಿ ಬಾಂಬ್ ಇಟ್ಟಿರುವ ಸಂದೇಶವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದರು. ನ್ಯಾಯಾಲಯದ ಕಟ್ಟಡ, ಆವರಣದಲ್ಲಿ ಸುಮಾರು 3 ತಾಸು ಶೋಧನೆ ನಡೆಸಿದರು. ಅಪಘಾತವೊಂದರ ಸಂಬಂಧ ವಶಕ್ಕೆ ಪಡೆದು ನ್ಯಾಯಾಲಯದ ಆವರಣದಲ್ಲಿ ನಿಲ್ಲಿಸಿರುವ ಶಿಥಿಲ ಸ್ಥಿತಿಯಲ್ಲಿರುವ ಕಾರನ್ನು ತೀವ್ರ ಪರಿಶೀಲನೆ ನಡೆಸಲಾಯಿತು.

ನ್ಯಾಯಾಲಯಕ್ಕೆ ಸೂಕ್ತ ಭದ್ರತೆ ಬೇಕು

ಮೈಸೂರಿನ ಎರಡೂ ನ್ಯಾಯಾಲಯಕ್ಕೆ ಹೆಚ್ಚಿನ ಭದ್ರತೆ ಬೇಕಾಗಿದೆ. ಕಲಾಪ ಸೇರಿದಂತೆ ವಿವಿಧ ಕೆಲಸಕ್ಕಾಗಿ ಪ್ರತಿದಿನ ನೂರಾರು ಮಂದಿ ನ್ಯಾಯಾಲಯದ ಆವರಣಕ್ಕೆ ಬರುತ್ತಾರೆ. ಹಾಗಾಗಿ ಯಾರು ಬರುತ್ತಾರೆ, ಯಾರು ಹೋಗುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಈ ನಿಟ್ಟಿನಲ್ಲಿ ಎರಡೂ ನ್ಯಾಯಾಲಯಕ್ಕೆ ಹೆಚ್ಚಿನ ಭದ್ರತೆ ಕಲ್ಪಿಸಬೇಕು. ತಪಾಸಣೆ ಮಾಡಿ ನ್ಯಾಯಾಲಯದ ಆವರಣಕ್ಕೆ ಬಿಡಬೇಕು ಎಂದು ವಕೀಲರು ಆಗ್ರಹಿಸಿದ್ದಾರೆ.

2016ರಲ್ಲಿ ಕುಕ್ಕರ್ ಬಾಂಬ್ ಸ್ಫೋಟ

ಹಳೆ ನ್ಯಾಯಾಲಯದ ಆವರಣದಲ್ಲಿನ ಶೌಚಾಲಯದಲ್ಲಿ 2016ರ ಆ.1ರಂದು ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಈ ವೇಳೆ ಬಾಲಕಿಯೊಬ್ಬಳಿಗೆ ಗಂಭೀರ ಗಾಯವಾಗಿತ್ತು. ಆ ಪ್ರಕರಣವನ್ನು ಎನ್‌ಐಎ ತನಿಖೆ ಮಾಡಿ, ತಮಿಳುನಾಡಿನ ಮಧುರೈನಲ್ಲಿ 2021ರ ಅ.11ರಂದು ಆಲ್‌ಖೈದಾ ಸಂಪರ್ಕದಲ್ಲಿದ್ದ ಕುಕ್ಕರ್ ಬಾಂಬ್ ಸ್ಫೋಟದ ರುವಾರಿ ನೈನಾರ್ ಅಬ್ಬಾಸ್ ಅಲಿಯಾಸ್ ಲೈಬ್ರರಿ ಅಬ್ಬಾಸ್(28), ಎಂ.ಸಾಮ್‌ಸನ್ ಖರೀಮ್(23) ಹಾಗೂ ದಾವೂದ್ ಸುಲೈಮಾನ್(23) ಆರೋಪಿಗಳ ಬಂಧಿಸಿದ್ದನ್ನು ಸ್ಮರಿಸಬಹುದು.

ಸಾರಿಗೆ ಬಸ್, ಲಾರಿ ಮುಖಾಮುಖಿ ಡಿಕ್ಕಿ: 25ಕ್ಕೂ ಹೆಚ್ಚು ಮಂದಿಗೆ ಗಾಯ

ಚಾಮರಾಜನಗರ, ಜ.6– ಸಾರಿಗೆ ಬಸ್ ಹಾಗೂ ಲಾರಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, 25ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಬೆಂಡರವಾಡಿ ಗ್ರಾಮದ ಬಳಿ ಮಂಗಳವಾರ ರಾತ್ರಿ ನಡೆದಿದೆ.

ಎಂದಿನಂತೆ ಮೈಸೂರಿನಿಂದ ಚಾಮರಾಜನಗರಕ್ಕೆ ಆಗಮಿಸುತ್ತಿದ್ದ ಕೆಎಸ್‌ಆರ್‌ಟಿಸಿ ಅಶ್ವಮೇಧ ಬಸ್‌ಗೆ ಚಾಮರಾಜನಗರದಿಂದ ನಂಜನಗೂಡಿನ ಕಡೆಗೆ ವೇಗವಾಗಿ ತೆರಳುತ್ತಿದ್ದ ಲಾರಿ ಬೆಂಡರವಾಡಿ ಗ್ರಾಮದ ಶಾಲೆ ಬಳಿಯ ತಿರುವಿನಲ್ಲಿ ಡಿಕ್ಕಿ ಹೊಡೆದಿದೆ. ಡಿಕ್ಕಿಯಾದ ರಭಸಕ್ಕೆ ಲಾರಿ ಹಾಗೂ ಬಸ್ಸಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಉಭಯ ವಾಹನಗಳ ಚಾಲಕರು ಸೇರಿದಂತೆ ಬಸ್‌ನಲ್ಲಿದ್ದ ಸುಮಾರು 25ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಬಸ್‌ನಲ್ಲಿದ್ದ ಪ್ರಯಾಣಿಕರು ಚಾಮರಾಜನಗರ ಪಟ್ಟಣ ಹಾಗೂ ಸುತ್ತಮುತ್ತಲ ಗ್ರಾಮದವರು ಎಂದು ಗುರುತಿಸಲಾಗಿದೆ. ಸದ್ಯ ಯಾರಿಗೆ ಯಾವ ಪ್ರಮಾಣದಲ್ಲಿ ಗಾಯಗಳಾಗಿದೆ ಎಂಬುದು ತಿಳಿದು ಬಂದಿಲ್ಲ. ನಾಲ್ಕೈದು ಮಂದಿಗೆ ಗಂಭೀರವಾದ ಗಾಯಗಳಾಗಿದೆ ಎಂದು ಹೇಳಲಾಗುತ್ತಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚಾಮರಾಜನಗರ ಸಂಚಾರಿ ಪೊಲೀಸ್ ಠಾಣೆ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಪರಿಶೀಲನೆ ನಡೆಸಿದರು. ಅಲ್ಲದೇ ಅಪಘಾತದಲ್ಲಿ ಗಾಯಗೊಂಡ ಗಾಯಾಳುಗಳನ್ನು ಚಾಮರಾಜನಗರ ಸಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ರವಾನಿಸಿದರು. ಘಟನೆ ಹಿನ್ನಲೆಯಲ್ಲಿ ಕೆಲಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಇದೇ ವೇಳೆ ಪೊಲೀಸರು ಬಸ್ ಹಾಗೂ ಲಾರಿ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಈ ಸಂಬಂಧ ಚಾಮರಾಜನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ



ಬೆಂಡರವಾಡಿ ಬಳಿ ಸಾರಿಗೆ ಬಸ್ ಹಾಗೂ ಲಾರಿ ನಡುವೆ ಅಪಘಾತ ಸಂಭವಿಸಿರುವುದು.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ರಮ್ಮನಹಳ್ಳಿ, ಮೈಸೂರು ಜಿಲ್ಲೆ.

ಸಂ:ಪಪಂರ/ಜಿ.ಇ.03/ಟೆ.ಪ್ರ/ಪಿ.ಆರ್–03/2025–26 ದಿ: 22.12.2025

ತಿದ್ದುಪಡಿ ಟೆಂಡರ್ ಪ್ರಕಟಣೆ

ದಿನಾಂಕ: 27.12.2025 ರಂದು ಮೈಸೂರು ಮಿತ್ರ, ಸಂಜೆಮುಗಿಲು ಮತ್ತು ವಿಜಯ ಕರ್ನಾಟಕ (ಮೈ.ಆ) ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನಲ್ಲಿ ಟೆಂಡರ್ ಸಲ್ಲಿಸಲು ಕಡೆಯ ದಿ: 10.01.2026 ಸಂಜೆ 5.30 ಗಂಟೆಯವರೆಗೆ ಮತ್ತು ಟೆಂಡರ್ ತೆರೆಯುವ ದಿ: 13.01.2026 ರಂದು ಎಂದು ತಿದ್ದಿ ಓದಿಕೊಳ್ಳುವುದು. ಉಳಿದಂತೆ ಮೂಲ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಆಡಳಿತಾಧಿಕಾರಿಗಳು ಸಹಿ/– ಮುಖ್ಯಾಧಿಕಾರಿ

DIPR/DDMYS/1430/KSMCA/813/2025-26

(ಕರ್ನಾಟಕ ಸರ್ಕಾರ) ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಟೆಂಡರ್ ಪ್ರಕಟಣೆ ಸಂಖ್ಯೆ:18/2025–26
ದಿನಾಂಕ:05.01.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಹಾಸನ, ಅರಕಲಗೂಡು ಮತ್ತು ಬೇಲೂರು ಉಪ ವಿಭಾಗ ವ್ಯಾಪ್ತಿಯ 2022–23ನೇ ಸಾಲಿನ ಪಿ.ಎಂ ಶ್ರೀ ಯೋಜನೆ. 2024–25ನೇ ಸಾಲಿನ ಪಿ.ಎಂ.ಶ್ರೀ ಯೋಜನೆ. 2024–25ನೇ ಸಾಲಿನ ರಾಜ್ಯ ವಲಯ ಮುಂದುವರೆದ ಯೋಜನೆ. ಜಿಲ್ಲಾ ಪಂಚಾಯಿತಿ 2025–26ನೇ ಸಾಲಿನ ಸಾಮಾಜಿಕ ಅರಣ್ಯ ಇಲಾಖೆ(2406–00–101–0–28/5). 2025–26ನೇ ಸಾಲಿನ 2515–001–9602–08 ಗಿ ಯೋಜನೆ (ಪಂಚಾಯಿತಿ Deposite Grant) ಮತ್ತು 2024–25ನೇ ಸಾಲಿನ ವಿಧಾನಸಭಾ ಸದಸ್ಯರ ಅನುದಾನ ಯೋಜನೆಯಡಿ 1)INDENTNO:RDPR/202526/BD/WORK_INDENT22625 Tender Amount - 2.44lakhs, 2)INDENT NO:RDPR/202526/BD/WORK_INDENT22652 Tender Amount - 8.10 lakhs, 3)INDENTNO:RDPR/2025-26/BD/WORK_INDENT22607 Tender Amount - 2.52 lakhs, 4)RDPR/2025-26/WS/WORK_INDENT20867 Tender Amount - 1.68 lakhs, 5)RDPR/2025-26/BD/WORK_INDENT22560 Tender Amount - 14.36 lakhs and 6)RDPR/2025-26/BD/WORK_INDENT22590 Tender Amount – 13.95 lakhs ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ Cr kw-1 ರ ರೀತ್ಯಾ ಅಂತರ್ಜಾಲದಲ್ಲಿ ದಿ: 05.01.2026 ರಿಂದ ದಿ:19.01.2026ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:19.01.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:17.01.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:20.01.2026 ರಂದು ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸಸಿ/ಹಾಸನ/912/ಕೆಪಿಸಿಸಿ/2025–26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ (ರಾಷ್ಟ್ರೀಯ ಹೆದ್ದಾರಿಗಳು)

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ನಜರ್‌ಬಾದ್, ಮೈಸೂರು, –570010

Phone/Fax: 0821-2951499 e-mail: aeenhmys@gmail.com

ಸಂಖ್ಯೆ :ಸ.ಕಾ.ಇಂ/ರಾ.ಹೆ.ಉ.ವಿ/ಮೈ/ರಾ.ಹೆ–275ಕೆ/ದೇವಲಾಪುರ/2025–26/945–46 ದಿನಾಂಕ: 05–01–2026

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆಯ, ಮೈಸೂರು ನಗರದ ರಾಷ್ಟ್ರೀಯ ಹೆದ್ದಾರಿ–275 ಕೆ (ಮೈಸೂರು ರಿಂಗ್ ರಸ್ತೆ)ಯ ಕಪ್ಪು ಸ್ಥಳ ಅಭಿವೃದ್ಧಿ ಕಾಮಗಾರಿ "Improvement to Black spot at Devalapura Cross Ring Road (KA-(05)-19) on NH-275K, Mysuru Ring Road Section in the State of Karnataka (JobNo.NH-275K/Karnataka/2024-25/RSCE/13)" ರ ಸರಪಳಿ ಕಿ.ಮೀ 23.620 ರಿಂದ ಕಿ.ಮೀ.24.420 ವರೆಗಿನ ಕಾಮಗಾರಿಯನ್ನು ಪ್ರಾರಂಭಿಸುವ ಸಂಬಂಧ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ಮೈಸೂರು, ಇವರ ಕೋರಿಕೆಯಂತೆ 48 ಸಂಖ್ಯೆ ಮರಗಳನ್ನು ಕಟಾವಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕರಣ 8(3)(VII) ರ ಪ್ರಕಾರ ಸಾರ್ವಜನಿಕ ಅಭಿಪ್ರಾಯ ಸ್ವೀಕರಿಸಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ದಿನಾಂಕ:13.01.2026 ಪೂರ್ವಾಹ್ನ ಸಮಯ 11:00ಘಂಟೆಗೆ ರಾಹೆ–275(ಕೆ) ರಿಂಗ್ ರಸ್ತೆ, ದೇವಲಾಪುರ (ಹದಿನಾರು ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆ) ಜಂಕ್ಷನ ಹತ್ತಿರ ಸಾರ್ವಜನಿಕ ಅಭಿಪ್ರಾಯ ಸಭೆಯನ್ನು ಕರೆಯಲಾಗಿದೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಸದರಿ ಸಭೆಗೆ ಹಾಜರಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು ಅಥವಾ ಸದರಿ ದಿನಾಂಕದ ಒಳಗಾಗಿ ಈ ಕೆಳ ಸಹಿದಾರರಿಗೆ ಲಿಖಿತ ರೂಪದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸುವುದು ಅಥವಾ ಈ ಮೇಲೆ ನೀಡಿರುವ ಇ–ಮೇಲ್ ಅಥವಾ ಅಂಚೆ ವಿಳಾಸಕ್ಕೆ ನಿಗಧಿತ ಸಮಯ ಹಾಗೂ ದಿನಾಂಕದೊಳಗೆ ಆಕ್ಷೇಪಣೆ ಸಲ್ಲಿಸಬಹುದೆಂದು ಈ ಮೂಲಕ ತಿಳಿಸಿದೆ. ನಂತರ ಬಂದಂತಹ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ನಜರ್‌ಬಾದ್, ಮೈಸೂರು

NOTICE

Form No. URC-2

Advertisement giving notice about registration under Part I of Chapter XXI

[Pursuant to section 374(b) of the companies Act, 2013 and rule 4(1) of the companies (Authorised to Register) Rules, 2014]

Notice is hereby given that in pursuance of sub-section (2) of section 366 of the Companies Act, 2013, an application has been made to the Registrar at E' Wing, 2nd Floor, Kendriya Sadana, Kormangala, Bangalore-560034, Karnataka, that PRUDENT PARTNERS LLP an LLP may be registered under Part I of Chapter XXI of the Companies Act 2013, as a company limited by shares.

The principal objects of the company is Data annotation and BPM Services.

A copy of the draft memorandum and articles of association of the proposed company may be inspected at the office at NO 667, NRUPATUNGA ROAD, KUVEMPUNAGAR (MYSORE), MYSORE, KARNATAKA, INDIA 570023, at working hours between 9:30 am to 6:00 pm on any working days.

Notice is hereby given that any person objecting to this application may communicate their objection in writing to the Registrar at E' Wing, 2nd Floor, Kendriya Sadana, Kormangala, Bangalore 560034, Karnataka within twenty one days from the date of publication of this notice, with a copy to the company at its registered office at NO 667, NRUPATUNGA ROAD, KUVEMPU NAGAR (MYSORE), MYSORE, KARNATAKA, INDIA 570023.

Dated this 06 day of January 2026

For and on behalf of
PRUDENT PARTNERS LLP
Sd/- SINDHUSHREE MYSORE, TULASIRAM
DPIN : 08516589